ಗೌರಿ ಲಂಕೇಶರ


ಲಂಕೇಶ್

ಆಗಸ್ಟ್ 30, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಜನಾರ್ಧನ ರೆಡ್ಡಿ ಸಂದರ್ಶನ

ಜೀವ ಬೆದರಿಕೆ !



ಚಾನೆಲ್ ಕೇಬಲ್ ಗುಟ್ಟು!

ಹುಬ್ಬಳ್ಳಿ ಬಿಜೆಪಿ ಕಳ್ಳಿ ಗಂಗಾಂಬಿಕೆ ಅರೆಸ್ಟ್

ಚೀರದೇ ಬಿದ್ದ ಚೀರನಲ್ಲಿ




ಅಭಿವೃದ್ಧಿಶೀಲ ರಾಜ್ಯಗಳೋ.. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರಾಜ್ಯಗಳೋ?

ಪ್ರಧಾನಿ ಮನಮೋಹನ್ ಸಿಂಗರು ದೆಲ್ಲಿ ಕೋಟೆಯ ಮೇಲಿಂದ ಎರಡನೆ ಬಾರಿ ತಮ್ಮ ಸ್ವಾತಂತ್ರ್ಯೋತ್ಸವ ಭಾಷಣ ಉದುರಿಸುತ್ತಿರುವಾಗಲೇ ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದಲ್ಲಿ ಇನ್ನೂ ಮೂವರು ಹತ್ತಿ ರೈತರು ಆತ್ಮಹತ್ಯೆ ಮಾಡಿಕೊಂಡರು. ಇದಕ್ಕೆ ಮುನ್ನ ದೇಶದ ಮಾನವ ಹಕ್ಕು ಆಯೋಗ ಈ ಆತ್ಮಹತ್ಯೆಗೆ ಕಾರಣವಾಗಿರುವ ರಾಜಕಾರಣಿ ಮತ್ತು ಅಧಿಕಾರಿಗಳನ್ನು ಶಿಕ್ಷಿಸಬೇಕೆಂದು ಕರೆ ನೀಡಿರುವುದಲ್ಲದೆ ದೇಶದ ಉನ್ನತ ನ್ಯಾಯಾಲಯ ಸಹಾ ಆತ್ಮಹತ್ಯೆ ರಾಜ್ಯಗಳ ಸರ್ಕಾರಗಳಿಗೆ ನೋಟಿಸು ಕೊಟ್ಟಿದೆ.

ಇವೆಲ್ಲಾ ಕಾರಣದಿಂದ ಮೊನ್ನೆ ಪ್ರಧಾನಿಗಳು ದೇಶದ 31 ಜಿಲ್ಲೆಗಳನ್ನು ಆತ್ಮಹತ್ಯೆ ಪೀಡಿತ ಜಿಲ್ಲೆಗಳೆಂದು ಘೋಷಿಸಿದ್ದಾರೆ. ಹಾಗೂ ಅದರ ಅಭಿವೃದ್ಧಿಗೆಂದು 600ಕೋಟಿ ಬಿಡುಗಡೆ ಮಾಡಿದ್ದಾರೆ. ಈ 600ಕೋಟಿಗಳಲ್ಲಿ ಸತ್ತ ಕುಟುಂಬಗಳ ಕಣ್ಣೀರು ಒರೆಸಲು ಸಾಧ್ಯವಿಲ್ಲ. ಮತ್ತು ಮುಂದೆ ರೈತರ ಆತ್ಮಹತ್ಯೆಗಳನ್ನು ನಿಲ್ಲಿಸಲು ಬೇಕಾದ ಶಾಶ್ವತ ಕ್ರಮಗಳನ್ನು ತೆಗೆದುಕೊಳ್ಳಲೂ ಸಾಲುವುದಿಲ್ಲ. ಅದು ಒಂದು ಕಡೆಗಿರಲಿ.

ಇದೀಗ ಭಾರತದ ಗೃಹ ಇಲಾಖೆ ರೈತರ ಆತ್ಮಹತ್ಯೆಗಳ ಬಗ್ಗೆ ಕೆಲವು ಅಂಕಿಅಂಶಗಳನ್ನು ಪ್ರಕಟ ಮಾಡಿದೆ. ಅದರ ಪ್ರಕಾರ 1995-2006 ರ ಅವಧಿಯಲ್ಲಿ ದೇಶಾದ್ಯಂತ 9.26 ಲಕ್ಷ ಜನ, 1.26ಲಕ್ಷ ರೈತರು



ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರಲ್ಲೂ 2001-2006ರ ಅವಧಿಯಲ್ಲೇ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರಲ್ಲಿ ಕರ್ನಾಟಕಕ್ಕೆ ಮೊದಲ ಸ್ಥಾನ..! ಈ ಅವಧಿಯಲ್ಲಿ ಕರ್ನಾಟಕದಲ್ಲಿ 5910ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಆಂಧ್ರದಲ್ಲಿ 1835, ಮಹಾರಾಷ್ಟ್ರದಲ್ಲಿ 981 ಮತ್ತು ಕೇರಳದಲ್ಲಿ 201 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಷ್ಟು ಮಾತ್ರವಲ್ಲ, ಈಗ ಕೇಂದ್ರ ಸರ್ಕಾರ ಆತ್ಮಹತ್ಯೆ ಮಾಡಿಕೊಳ್ಳುವ ಜಿಲ್ಲೆಗಳೆಂದು ಗುರುತಿಸಿರುವ 31 ಜಿಲ್ಲೆಗಳಲ್ಲಿ ಆಂಧ್ರದ 16 ಜಿಲ್ಲೆಗಳು, ಮಹಾರಾಷ್ಟ್ರದ 6 ಜಿಲ್ಲೆಗಳು, ಕರ್ನಾಟಕದ 3 ಮತ್ತು ಕೇರಳದ 3 ಜಿಲ್ಲೆಗಳು ಸೇರಿವೆ.

ಇದರಲ್ಲಿ ಅಭಿವೃದ್ಧಿವಾದಿಗಳು ಗುರುತಿಸಬೇಕಾದ ಎರಡು ಮುಖ್ಯ ಅಂಶಗಳಿವೆ. ಮೊದಲನೆಯದು ರೈತರು ಆತ್ಮಹತ್ಯೆಗಳನ್ನು ಅತಿ ದೊಡ್ಡ ಸಂಖ್ಯೆಯಲ್ಲಿ ಮಾಡಿಕೊಳ್ಳುತ್ತಿರುವುದು 1995ರ ನಂತರ. ಅಂದರೆ ಭಾರತ ವಿಶ್ವ ವಾಣಿಜ್ಯ ಸಂಸ್ಥೆಗೆ ಸಹಿ ಹಾಕಿ ಭಾರತದ ಕೃಷಿಯನ್ನು ವಿಶ್ವ ವಾಣಿಜ್ಯದ ಪರಿಧಿಗೆ ತಂದು ಭಾರತದ ರೈತರನ್ನು ವಿಶ್ವ ಮಾರುಕಟ್ಟೆಯೆಂಬ ಕಸಾಯಿಖಾನೆಗೆ ದೂಡಿದ ನಂತರ. ಮತ್ತು ಭಾರತದಲ್ಲಿ ಐ.ಎಂ.ಎಫ್.ನ ಶರತ್ತುಗಳಿಗೆ ಒಳಪಟ್ಟು ಸಬ್ಸಿಡಿ ಕಡಿತದಂತಹ ಎರಡನೆ ಮತ್ತು ಮೂರನೇ ಹಂತದ ಐ.ಎಂ ಎಫ್. ಆದೇಶಿತ ಕ್ರಮಗಳನ್ನು ಜಾರಿಗೊಳಿಸಲು ಪ್ರಾರಂಭಿಸಿದ ನಂತರ. ಎರಡನೆಯದಾಗಿ ಈ ಆತ್ಮಹತ್ಯೆಗಳು ಅಧಿಕ ಸಂಖ್ಯೆಯಲ್ಲಿ ಸಂಭವಿಸುತ್ತಿರುವುದು ದೇಶದ ಅತಿ ಹಿಂದುಳಿದ ರಾಜ್ಯಗಳಲ್ಲಲ್ಲ. ಬದಲಿಗೆ ಅಭಿವೃದ್ಧಿಶೀಲ ಮತ್ತು ಆಧುನಿಕ ರಾಜ್ಯಗಳೆಂದೂ ವಿಶ್ವಬ್ಯಾಂಕ್ ಇತ್ಯಾದಿಗಳಿಂದ ಶಹಬ್ಬಾಸ್‌ಗಿರಿ ಪಡೆದಿರುವ ಮತ್ತು ಅತಿ ಹೆಚ್ಚಿನ ವಿದೇಶಿ ಬಂಡವಾಳ ಹರಿದು ಬರುತ್ತಿರುವ ರಾಜ್ಯಗಳಲ್ಲೇ ಆಗಿದೆ.

ಆದ್ದರಿಂದಲೇ ಭಾರತದ ಮಟ್ಟಿಗೆ ಈಗ ಹೆಚ್ಚು ಅಭಿವೃದ್ಧಿ ಎಂದರೆ ಹೆಚ್ಚು ಆತ್ಮಹತ್ಯೆಗಳು ಎಂಬ ಹೊಸ ವ್ಯಾಖ್ಯಾನವೂ ಸೇರಬೇಕಾಗಿದೆ..!!

ಭಾವಕ

- ಶಿವಸುಂದರ್-

"ನೀರು ಕುಡಿಸಲು" ಹಠ ತೊಟ್ಟಿರುವ ಥೇಮ್ಸ್ ಕಂಪನಿ ಮತ್ತು ಸರ್ಕಾರ..

ಶೆತಾಯ ಗತಾಯ ಬೆಂಗಳೂರಿನ ನಾಗರಿಕರಿಗೆ ಅದರಲ್ಲೂ ಹೊರವಲಯದಲ್ಲಿರುವ ಎಂಟು ಮುನಿಸಿಪಾಲಿಟಿಯ ಜನರಿಗೆ ನೀರು ಕುಡಿಸಲೇಬೇಕೆಂದು ಸರ್ಕಾರ ಮತ್ತು ಇಂಗ್ಲೆಂಡಿನ ಥೇಮ್ಸ್ ಕಂಪನಿ ಹಠತೊಟ್ಟಿರುವಂತೆ ಕಾಣುತ್ತಿದೆ. ಈ ಮೊದಲು ಬೆಂಗಳೂರಿನ ಹೊರವಲಯದಲ್ಲಿನ ಬೊಮ್ಮನಹಳ್ಳಿ, ಬ್ಯಾಟರಾಯನಪುರ, ದಾಸರಹಳ್ಳಿ, ಕೃಷ್ಣರಾಜಪುರ, ಮಹದೇವಪುರ, ರಾಜರಾಜೇಶ್ವರಿ ನಗರ, ಯಲಹಂಕ ಹಾಗೂ ಕೆಂಗೇರಿಯ ಜನರಿಗೆ 24 ಗಂಟೆ ನೀರು ಕುಡಿಸುತ್ತೇವೆಂದು ಸರ್ಕಾರ GBWASSP ಎಂಬ ಪರಮ ಜನಘಾತುಕ ಯೋಜನೆ ಹಾಕಿತ್ತು.

ಸಾರಾಂಶದಲ್ಲಿ ಈ ಯೋಜನೆ ದುಡ್ಡಿರುವವರಿಗೆ 24 ಗಂಟೆ ನೀರನ್ನೂ, ಇಲ್ಲದವರಿಗೆ ನೀರನ್ನು ಬರೀ ದೂರದಿಂದ ನೋಡುವ ಸೌಭಾಗ್ಯವನ್ನೂ ಒದಗಿಸುತ್ತಿತ್ತು. ಬೆಂಗಳೂರಿನ ನೂರಾರು ಸ್ಲಂಗಳಿಗೆ ನೀರು ಒದಗಿಸುತ್ತಿದ್ದ ಬೀದಿ ಕೊಳಾಯಿಗಳನ್ನು ಕಿತ್ತುಹಾಕಿ ನಗರ ನೀರಿನ ದರವನ್ನು ಮೂರರಿಂದ ನಾಲ್ಕು ಪಟ್ಟು ಹೆಚ್ಚಿಸುವ ಮೂಲಕ ಪಾಲಿಕೆಯ ಆದಾಯ ಹೆಚ್ಚಿಸುವ ಮಹಾನ್ ಯೋಜನೆ ಅದಾಗಿತ್ತು. ಅದರ ವಿರುದ್ಧ ಬೆಂಗಳೂರಿನ ಎಲ್ಲಾ ಪ್ರಜ್ಞಾವಂತ ಜನತೆ ಮತ್ತು ಪ್ರಗತಿಪರ ಸಂಘಟನೆಗಳು ಒಟ್ಟಾಗಿ ಹೋರಾಟ ನಡೆಸಿ ಈ ಯೋಜನೆಯನ್ನು ಸೋಲಿಸಿದ್ದರು.

ಆದರೆ ಹೇಗಾದರೂ ಮಾಡಿ ಬೆಂಗಳೂರಿನ ಬಡಜನತೆಯನ್ನು ಸುಲಿದಾದರೂ ಥೇಮ್ಸ್ ಕಂಪನಿಗೆ ಲಾಭ ಮಾಡಿಕೊಡಲೇಬೇಕೆಂದು ಹಠ ತೊಟ್ಟಂತಿರುವ ಸರ್ಕಾರ ಈಗ ಮತ್ತೆ WSUP(Water and Sanitation for Urban Poor) ಎಂಬ ಯೋಜನೆಯಡಿ ಮತ್ತೆ ಅದೇ ಹುನ್ನಾರವನ್ನು ಹಿತ್ತಲಬಾಗಿಲಿಂದ ತರುವ ಯೋಜನೆ ಮಾಡುತ್ತಿದೆ. 'ನಗರದ ಬಡವರಿಗೆ ನೀರು ಮತ್ತು ಒಳಚರಂಡಿ ವ್ಯವಸ್ಥೆ' ಎಂಬ ಆಕರ್ಷಕ ಹೆಸರು ಹೊಂದಿರುವ ಈ ಯೋಜನೆಯ ಹಿಂದಿನ ಶಕ್ತಿಗಳೂ ಇಂಗ್ಲೆಂಡಿನ ಥೇಮ್ಸ್‌ನಂಥ ಕಂಪನಿಗಳೇ ಆಗಿವೆ. ಏಕೆಂದರೆ ಬೆಂಗಳೂರಿನ ಬಡವರಿಗೆ ನೀರು ಮತ್ತು ಚರಂಡಿ ವ್ಯವಸ್ಥೆಯನ್ನು ಮಾಡಿಕೊಡಲು ಕಾಂಟ್ರಾಕ್ಟ್ ವಹಿಸಿ ಕೊಂಡಿರುವುದು ಇದೇ ಕಂಪನಿಗಳೆ.

ನಮ್ಮ ಚರಂಡಿ ಬಗ್ಗೆ ಇವರಿಗೇಕೆ ಇಷ್ಟು ಆಸಕ್ತಿ? ನಮಗೆ ನೀರು ಕುಡಿಸಲೇ ಬೇಕೆನ್ನುವ ಹಠ ಏಕೆ? ಇದು ನಮ್ಮನ್ನು ನಾಗರಿಕರನ್ನಾಗಿ ಮಾಡುತ್ತೇವೆಂದು ನಮ್ಮ ನಾಗರಿಕತೆಯನ್ನೆಲ್ಲಾ ಅನಾಗರಿಕತೆಯೆಂದು ಕರೆದು ತಮ್ಮ ಲಾಭಕೋರ ಬದುಕನ್ನೇ ನಾಗರಿಕತೆ ಎಂದು ಬಣ್ಣಿಸಿದ ಹಾಗೂ ಈ ದೇಶವನ್ನು 250 ವರ್ಷ ಸುಲಿಗೆ ಮಾಡಿದ ಬಿಳಿ ವಸಾಹತುಶಾಹಿಯ ಹುನ್ನಾರವಲ್ಲದೆ ಮತ್ತೇನು? ಏಕೆಂದರೆ ಇದರ ಹಿಂದೆ ಕ್ರಮೇಣ ಕುಡಿಯುವ ನೀರಿನ ಸರಬರಾಜೆಂಬ ಅತ್ಯಂತ ಲಾಭದಾಯಕ ವಹಿವಾಟನ್ನು ವಶ ಪಡಿಸಿಕೊಳ್ಳುವ ಹುನ್ನಾರವಿದೆ. ಔದಾರ್ಯದ ಹಿಂದಿನ ಕ್ರೌರ್ಯ ಅರ್ಥವಾಗದೆ, ವಸಾಹತುಶಾಹಿ ದೇಶಗಳಿಗೆ ವಿಮೋಚನೆ ಸಾಧ್ಯವಿಲ್ಲ..


ತಿಲಕ್ ತೀವ್ರವಾದಿ ಎಂದರೆ ಚಡ್ಡಿಗಳಿಗೇಕೆ ಸಿಟ್ಟು..?

ಗುಟ್ಟು

ಕೇಂದ್ರ ಸರ್ಕಾರದ NCERT ಸಿದ್ಧಪಡಿಸಿರುವ ಪಠ್ಯಪುಸ್ತಕಗಳಲ್ಲಿ ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರ ಮತ್ತು ಅರವಿಂದ ಘೋಷ್‌ರವರನ್ನು ಭಯೋತ್ಪಾದಕರಂತೆ ಚಿತ್ರಿಸಲಾಗಿದೆ ಎಂದು ಮೊನ್ನೆ ಬಿ.ಜೆ.ಪಿ. ಪಕ್ಷ ಸಂಸತ್ತಿನಲ್ಲಿ ಹುಯಿಲೆಬ್ಬಿಸಿದೆ. ಕೇಂದ್ರ ಸರ್ಕಾರವು ಅದಕ್ಕೆ ಒಪ್ಪಿ ವಿಚಾರಣೆಗೆ ಆದೇಶಿಸಿದೆ. ಈ ವಿಚಾರಣೆ ತಿಲಕರು ಭಯೋತ್ಪಾದಕರು ಅಲ್ಲವ್ರೋ ಎಂಬ ಬಗ್ಗೆ ಇರಬಹುದೆ? ಅಲ್ಲ, ಪಠ್ಯ ಪುಸ್ತಕಗಳಲ್ಲಿ ಹಾಗೆ ಬರೆದಿದೆಯೋ ಇಲ್ಲವ್ರೋ ಎಂಬ ಬಗ್ಗೆ! ಅದಕ್ಕೇನು ಕಷ್ಟ? ಒಂದು ಪುಸ್ತಕವನ್ನು ತರಿಸಿ ನೋಡಿದರೆ ಆಗುವುದಿಲ್ಲವೆ ಎಂದು ಕೇಳಬೇಡಿ. ಅಷ್ಟೇ ಮಾಡಿದರೆ ಅದನ್ನು ಸಂಸತ್ತು ಎಂದು ಏಕೆ ಕರೆಯಬೇಕು?

ಅದು ಒತ್ತಟ್ಟಿಗಿರಲಿ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿಯ ಆಗಮನದ ತನಕ ನಡೆಯುತ್ತಿದ್ದ ಹೋರಾಟವನ್ನು ಹಾಗೂ ಆ ಅವಧಿಯ ನಾಯಕರನ್ನು ಇತಿಹಾಸಕಾರರು ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಎಂದು ವಿಭಾಗೀಕರಿಸಿದ್ದಾರೆ. ಅದು ಕರ್ನಾಟಕದ ಇತಿಹಾಸ ಪಠ್ಯಗಳಲ್ಲೂ ಇದೆ. ಬ್ರಿಟಿಷರಿಗೆ ಡೊಗ್ಗು ಸಲಾಮು ಹಾಕುತ್ತಾ ಬರೀ ಮನವಿಗಳನ್ನು ಸಲ್ಲಿಸುತ್ತಾ ಭಾರತೀಯರಿಗೆ ಹೆಚ್ಚಿನ ಅಧಿಕಾರ ಸಿಕ್ಕರೆ ಮಾತ್ರ ಸಾಕು ಎನ್ನುತ್ತಿದ್ದ ಗೋಪಾಲ ಕೃಷ್ಣ ಗೋಖಲೆಯಂತವರನ್ನು ಮಂದಗಾಮಿಗಳೆಂದೂ, ಸ್ವಾತಂತ್ರ್ಯ ನನ್ನ ಆಜನ್ಮ ಸಿದ್ಧ ಹಕ್ಕೆಂದು ಭಾರತೀಯರಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು (ಅಂದರೆ ರಾಜಕೀಯ ಸ್ವಾತಂತ್ರ್ಯ ಮಾತ್ರ, ತಿಲಕರ ಅರ್ಥ ಆರ್ಥಿಕ ಸ್ವಾತಂತ್ರ್ಯವೂ ಅಲ್ಲ, ಜಾತಿ, ಬಡತನಗಳಿಂದ ಸ್ವಾತಂತ್ರ್ಯ ಎಂಬುದೂ ಆಗಿರಲಿಲ್ಲ) ಒತ್ತಾಯಿಸುತ್ತಿದ್ದ ಲಾಲ್, ಬಾಲ್, ಪಾಲ್‌ರನ್ನು ತೀವ್ರವಾದಿಗಳೆಂದು ಇತಿಹಾಸಕಾರರು ಕರೆದರು.

ಈ ವರ್ಗೀಕರಣದಲ್ಲಿ ತೀವ್ರಗಾಮಿ ಎಂದರೇನು ಎನ್ನುವುದು ಬ್ರಿಟಿಷರು ಭಾರತದ ಸ್ವಾತಂತ್ರ್ಯ ಹೋರಾಟವನ್ನು ನೋಡುತ್ತಿದ್ದ ರೀತಿಯಿಂದ ಪ್ರಭಾವಿತವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಸ್ವಾತಂತ್ರ್ಯ ಕೇಳುವುದೇ ತೀವ್ರವಾದಿತನ ಎಂಬ ಗ್ರಹಿಕೆ ಇದರ ಹಿಂದಿದೆ. ಆದರೆ ಬಿ.ಜೆ.ಪಿ.ಯವರು ತಿಲಕರು ತೀವ್ರವಾದಿಯಲ್ಲ ಎಂದು ಎಬ್ಬಿಸಿರುವ ಹುಯಿಲಿನ ಹಿಂದೆ ಯಾವುದೇ ಬ್ರಿಟಿಷ್ ದೃಷ್ಟಿಕೋನ ವಿರೋಧಿ ತಿಳುವಳಿಕೆ ಇಲ್ಲ, ಹಾಗಿದ್ದರೆ ತಿಲಕರು ತೀವ್ರಗಾಮಿಯಲ್ಲ ಎಂಬ ಬಿ.ಜೆ.ಪಿ. ಹುಯಿಲಿನ ಹಿಂದಿನ ಗುಟ್ಟೇನು?



ಹಿಂದೂಗಳ ನಾಯಕ ತೀವ್ರವಾದಿಯಾಗಲು ಹೇಗೆ ಸಾಧ್ಯ?

ರಟ್ಟು

ಬಿ.ಜೆ.ಪಿ. ವಾದದ ಹಿಂದೆ ಎರಡು ತರ್ಕಗಳಿವೆ. ಒಂದು ತಿಲಕರು ಈಗ ಬಿ.ಜೆ.ಪಿ. ಮಟ್ಟಿಗೆ ಬ್ರಿಟಿಷ್. ವಿರೋಧಿ ಸ್ವಾತಂತ್ರ್ಯ ಹೋರಾಟಗಾರರು ಎಂಬುದಕ್ಕಿಂತ ಹಿಂದೂತ್ವದ ಪುನರುತ್ಥಾನವಾದಿಗಳು. ಅವರ ಪ್ರಕಾರ ತೀವ್ರವಾದಿ ಎಂದರೆ ಮುಸ್ಲಿಮರು, ಅಥವಾ ನಾಸ್ತಿಕವಾದಿ ಸಮಾಜವಾದಿ ಹೋರಾಟಗಾರರು ಮಾತ್ರ. ಈಗ ತಿಲಕರು ಹಿಂದೂಗಳ ನಾಯಕ ಎಂದಾಗಿರುವುದರಿಂದ ಅವರು ಸ್ವಾತಂತ್ರ್ಯಕ್ಕೆಂದೇ ಎಷ್ಟೇ ತೀವ್ರವಾಗಿ ಹೋರಾಡಿದರೂ ತೀವ್ರವಾದಿಯಾಗಲು ಸಾಧ್ಯವಿಲ್ಲ.

ಇದರಲ್ಲಿ ಇನ್ನೊಂದು ತರ್ಕವೂ ಇದೆ. ತಿಲಕರು ಬ್ರಿಟಿಷರಿಂದ ಈ ದೇಶವನ್ನು ಮುಕ್ತಗೊಳಿಸಲು ಮತ್ತು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಆದ್ದರಿಂದ ತಿಲಕರು ತೀವ್ರವಾದಿಗಳಲ್ಲ ಎಂದು ಬಿಟ್ಟರೆ ಅವರಿಗಿಂತ ತೀವ್ರವಾಗಿ ದೇಶದ ವಿಮೋಚನೆಗಾಗಿ ಹೋರಾಡಿ ಪ್ರಾಣತೆತ್ತ ನಾಸ್ತಿಕವಾದಿ ಮತ್ತು ಸಮಾಜವಾದಿ ಭಗತ್ ಸಿಂಗ್, ರಾಜಗುರು, ಸುಖದೇವ್ ಇವರೆಲ್ಲರನ್ನೂ ತೀವ್ರವಾದಿಗಳಲ್ಲ; ಬದಲಿಗೆ ಸ್ವಾತಂತ್ರ್ಯ ಯೋಧರೆಂದು ಬಿ.ಜೆ.ಪಿ.ಗಳು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಗುಜರಾತಿನ ಪಠ್ಯ ಪುಸ್ತಕಗಳಲ್ಲಿ ಇದೇ ಬಿ.ಜೆ.ಪಿ.ಯ ಮೋದಿ ಸರ್ಕಾರ ಭಗತ್ ಸಿಂಗ್, ರಾಜಗುರು, ಸುಖದೇವ್‌ರನ್ನು ಆತಂಕವಾದಿಗಳೆಂದು ತಮ್ಮ 10ನೇ ತರಗತಿಯ ಪಠ್ಯ ಪುಸ್ತಕಗಳಲ್ಲಿ ಸೇರಿಸಿದ್ದಾರೆ.


ಒಂದೆಡೆ ಬಿ.ಜೆ.ಪಿ.ಯು ಇತಿಹಾಸಕ್ಕೆ ತಾನು ನಡೆಸಿರುವ ಅಪಚಾರದ ಬಗ್ಗೆ ಚಕಾರವೆತ್ತುವುದಿಲ್ಲ, ಮತ್ತೊಂದೆಡೆ ತಿಲಕರ ಬಗ್ಗೆ ಬರೆದಿರುವುದನ್ನು ಪರಿಶೀಲಿಸುತ್ತೇವೆ ಎನ್ನುವ ಕಾಂಗ್ರೆಸ್ ಕೂಡ ಇದರ ಬಗ್ಗೆ ಚಕಾರವೆತ್ತುತ್ತಿಲ್ಲ, ಕಾರಣ ಸ್ಪಷ್ಟ. ಇಬ್ಬರಿಗೂ ಭಗತ್ ಸಿಂಗ್ ಮತ್ತು ಅವರು ಪ್ರತಿಪಾದಿಸುತ್ತಿದ್ದ ಸ್ವಾತಂತ್ರ್ಯ ಬೇಡ. ಇಬ್ಬರಿಗೂ ತಿಲಕ್ ಹಾಗೂ ಅವರು ಪ್ರತಿಪಾದಿಸುತ್ತಿದ್ದ ಹಿಂದೂ ರಾಷ್ಟ್ರೀಯವಾದ ಇಂದಿನ ರಾಜಕಾರಣಕ್ಕೆ ಬೇಕು. ಇದೇ ಇದರ ಹಿಂದಿನ ಗುಟ್ಟು...!

"ನಾನು ಅಧಿಕಾರದ ಗಾಲಿಗಳಲ್ಲೊಂದಾಗಿರದೆ, ಅದರ ತುಳಿತಕ್ಕೆ ಸಿಕ್ಕಿರುವ ಜೀವಿಗಳಲ್ಲೊಬ್ಬನಾಗಿರುವುದಕ್ಕಾಗಿ ನಿನಗೆ ನನ್ನ ವಂದನೆಗಳು" ಎನ್ನುತ್ತಾರೆ ಟ್ಯಾಗೂರ್. ಅವರ ಮುಕ್ತಕಗಳು ಈ ಸಲವೂ ಇಲ್ಲಿ ಸೂಕ್ತಿಗಳಾಗಿವೆ. ಮತ್ತೆ... ತಣ್ಣಗೆ ಓದಿ.

-ಮೂರ್ತಿ



No Comments



"ಕಾಂಗ್ರೆಸ್ ಪಕ್ಷದ ಚರಿತ್ರೆಯನ್ನು ನಾವು ಬಹಿರಂಗಗೊಳಿಸಿದರೆ ಜನ ಬಡಿಗೆ ತೊಗೊಂಡು ಬಡೀತಾರೆ"

-ಬಿ.ಎಸ್.ಯಡಿಯೂರಪ್ಪ



"ಏನೋ ಕದ್ದೂ ಕಾಣ್ದಂಗೆ ಮಾಡ್ಕೊಂಡು ತಿನ್ನಿ-ಆದರೆ ಅವರಿವರು ನೋಡ್ತಾರೆ ಅನ್ನೋ ಎಚ್ಚರಿಕೆನೂ ಇಲ್ದೆ ಹೋದರೆ ಹೇಗೆ..?"

-ಡಿ.ಕೆ.ಶಿವಕುಮಾರ್

(ದೇವೇಗೌಡ ಕುಟುಂಬದ ಬಗ್ಗೆ.)

"ರಾಜಕಾರಣಿಗಳು ಭರವಸೆ ನೀಡಿದರೂ ಅದನ್ನು ಜಾರಿಗೆ ತರುವುದಿಲ್ಲ ಅನ್ನೋ ಶಂಕೆ ಜನರ ಮನಸ್ಸಿನಲ್ಲಿದೆ"

ಹೆಚ್.ಡಿ.ಕುಮಾರಸ್ವಾಮಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಇನ್ನು ಮುಂದೆ ಸಚಿವರು ಇರುವ ಕಾರ್ಯಕ್ರಮಗಳಿಗೆ ನಾನು ಕಾಲಿಡಲಾರೆ"

-ಯು.ಆರ್. ಅನಂತಮೂರ್ತಿ

"ಕನ್ನಡಕ್ಕೆ ಧಕ್ಕೆಯಾದರೆ ನಾನು ಕಲಿಯುಗ ವಿಪರೀತನಾಗುತ್ತೇನೆ"

-ಡಾ.ಸಿದ್ದಲಿಂಗಯ್ಯ



"ಎಸ್.ಎಂ.ಕೃಷ್ಣ ರಾಜ್ಯ ರಾಜಕೀಯಕ್ಕೆ ಮರಳಿದರೆ ಕಾಂಗ್ರೆಸ್‌ಗೆ ಒಳ್ಳೆ ನಾಯಕತ್ವ ಸಿಗುತ್ತದೆ"

-ಧರ್ಮ ಸಿಂಗ್.

ವಾರದ ಘೋಷಣೆ:



"ಶಾಂತಿ ಎಂಬುದು ಏಕಪಕ್ಷೀಯವಾಗಿರಲು ಸಾಧ್ಯವಿಲ್ಲ. ವಿಶ್ವದಲ್ಲಿ ಸಾಮ್ರಾಜ್ಯವಾದವಿರುವ ತನಕ ಶಾಶ್ವತ ಶಾಂತಿ ಸಾಧ್ಯವಿಲ್ಲ, ಇರಾಕ್, ಅಫ್ಘಾನಿಸ್ತಾನ ಮತ್ತು ಪ್ಯಾಲೆಸ್ಟೇನ್‌ಗಳಲ್ಲಿ ಆಕ್ರಮಣ ಮುಂದುವರೆದಿರುವವರೆಗೆ ಈ ಯುದ್ಧ ಕೊನೆಗೊಳ್ಳಲು ಸಾಧ್ಯವಿಲ್ಲ"

ಹಸನ್ ನಸರುಲ್ಲ

ಇಸ್ರೇಲ್ ವಿರುದ್ಧ ಹೋರಾಡಿದ ಲೆಬನಾನಿನ ಹೆಜ್ಬುಲ್ಲಾ ಸಂಘಟನೆಯ ಮುಖ್ಯಸ್ಥ.

ಕಾಮ್ರೇಡ್ ಸಲೀಂ ಮತ್ತು ಮುದುಕ ಮಾರ್ಕ್ಸ್!



ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಸತತ ಏಳನೇ ಬಾರಿ ಅಧಿಕಾರಕ್ಕೆ ಬಂದಮೇಲೆ ಜನರ ಬದುಕು ಕುಸಿಯುತ್ತಿದ್ದರೂ ಮಾರ್ಕ್ಸ್‌ವಾದ ಮಾತ್ರ ಸಿಕ್ಕಾಪಟ್ಟೆ ಬೆಳೆಯುತ್ತಿದೆ. ಹಳೆಯ ರೀತಿಯ ಚಿಂತನೆಗಳನ್ನೆಲ್ಲಾ ತೊರೆದು ಕಾಲಕ್ಕೆ ತಕ್ಕ ಹಾಗೆ ಮಾರ್ಕ್ಸ್‌ವಾದವೂ ಬದಲಾಗಬೇಕೆಂಬುದೇ ಮುಖ್ಯಮಂತ್ರಿ ಬುದ್ಧದೇವರ ತತ್ವವೂ ಆಗಿರುವುದರಿಂದ ಈಗ ಬಂಗಾಳದಲ್ಲಿ ಹೊಸ ರಾಜಕೀಯ, ತತ್ವ ಮತ್ತು ಚಿಂತನೆ..!

ಮಾರ್ಕ್ಸ್ ಮುದುಕನಾಗಿರುವುದರಿಂದ ಈಗ ಅವರ ಬದಲಿಗೆ ಕಮ್ಯುನಿಸ್ಟರ ಕಚೇರಿಯಲ್ಲಿ ಕಾಮ್ರೇಡ್ ಸಲಿಂ ಅವರದೇ ತತ್ವಸಿದ್ಧಾಂತ. ಈ ಸಲೀಮರ ಬಂಧುಗಳೇ ಇಂಡೋನೇಷಿಯಾದಲ್ಲಿ ಎರಡುವರೆ ಲಕ್ಷ ಕಮ್ಯುನಿಷ್ಟರ ಕಗ್ಗೊಲೆ ನಡೆಸಿದ್ದರು ಎಂಬುದೂ, ಆಗಲೂ ಈಗಲೂ ಸಲೀಂ ಬಂಧುಗಳ ಚಿಂತನೆಯಲ್ಲಿ ಯಾವುದೇ ಬದಲಾವಣೆ ಬಂದಿಲ್ಲವೆಂಬುದೂ, ಹೀಗಾಗಿ ಬದಲಾಗಿರುವವರು ಯಾರು ಎಂದು ಕೇಳುವುದೂ... ಇಂತಹ ಯಾವ ಕಿಡಿಗೇಡಿತನವೂ ಈ ಬರಹದ ಉದ್ದೇಶವಲ್ಲ, ಸತ್ತ ಭೂತವನೆತ್ತಿ ಹಸಿರಂದದಿ ತರಬೇಕಿಲ್ಲ, ಹೀಗಾಗಿ ಕಾಮ್ರೇಡುಗಳಾರೂ ಸಿಟ್ಟಾಗಬೇಕಿಲ್ಲ.

ಇರಲಿ, ಈಗ ಸಂಗತಿ ಏನೆಂದರೆ ಈ ಸಲೀಂ ಭಯ್ಯ ಮತ್ತು ಕೆಲವು ಅಮೆರಿಕನ್ ಬ್ರದರ್‌ಗಳಿಗಾಗಿ ಬಂಗಾಳದ ಎಡರಂಗ ಸರ್ಕಾರ ಒಟ್ಟು ಸೇರಿ ಕೋಲ್ಕತ್ತದ ಸಮೀಪದಲ್ಲಿರುವ 40,000 ಎಕರೆ ರೈತರ ಹಾಲಿ ಉಳುಮೆಯಲ್ಲಿರುವ ಜಮೀನನ್ನು ವಶಪಡಿಸಿಕೊಂಡು ಕೈಗಾರಿಕಾಭಿವೃದ್ಧಿಗೆಂದು ಕೊಡುತ್ತಿದೆ. ಆದರೆ ಒಳ್ಳೆಯ ಪರಿಹಾರವನ್ನು ಮತ್ತು ರೈತರಿಗೆ ಮಾತ್ರವಲ್ಲ ಗೇಣೀದಾರರಿಗೆ ಕೂಡಾ ಕೊಡಿಸುತ್ತಾರಂತೆ. ಇದನ್ನು ಬಿಟ್ಟು ಬಂಗಾಳದ ಅಭಿವೃದ್ಧಿಗೆ ಬೇರೇ ಮಾರ್ಗವೇ ಇಲ್ಲವಂತೆ..

ಸಲೀಂವಾದ ಮತ್ತು ಬುದ್ಧದೇವ ಚಿಂತನೆ ಚಿರಾಯುವಾಗಲಿ!

ಕಂಡಹಾಗೆ



ಬಿಸಿ ನೀರಿನೊಳಗಿನ ಕಪ್ಪೆ

ಈತ ಒಬ್ಬ ರಾಜಕಾರಣಿ; ತನ್ನ ರಾಜಕೀಯ ಬದುಕಿನ ಅತಿಮುಖ್ಯ ಚುನಾವಣೆಯಲ್ಲಿ ಸೋತು ಮನೆ ಸೇರಿದ ರಾಜಕಾರಣಿ. ಆದರೆ ಈತ ಇತರೆ ವೃತ್ತಿ ರಾಜಕಾರಣಿಗಳಂತೆ ಹಪಹಪಿಸಲಿಲ್ಲ; ಮತ್ತೆ ಸ್ಪರ್ಧಿಸಿ ಅಧಿಕಾರವನ್ನು ಹಿಡಿಯಬೇಕೆಂದು ಕುತಂತ್ರಗಳಲ್ಲಿ ತೊಡಗಲಿಲ್ಲ. ಬದಲಾಗಿ, "ಅಧಿಕಾರ ಇಲ್ಲದಿದ್ದರೇನು? ಜನರ ಬದುಕಿನಲ್ಲಿ ನಾನು ಹೇಗೆ ಬದಲಾವಣೆ ತರಬಲ್ಲೆ?" ಎಂದು ಚಿಂತಿಸಿದ. ಆತನಿಗೆ ಅಪಾರ ಆಸಕ್ತಿ ಇದ್ದ ಪರಿಸರ ರಕ್ಷಣೆ ಕೆಲಸದಲ್ಲಿ ತೊಡಗಿದ. ಜಾಗತಿಕ ತಾಪಮಾನ ಏರಿಕೆಯಿಂದಾಗಿ ಈ ಭೂಮಂಡಲಕ್ಕೆ ಇನ್ನು ಕೇವಲ ಹತ್ತು ವರ್ಷಗಳಲ್ಲಿ ಎದುರಾಗಲಿರುವ ಪ್ರಳಯದ ಬಗ್ಗೆ ಚಿಂತಿಸಿದ, ಓದಿದ, ಮಾಹಿತಿ ಸಂಗ್ರಹಿಸಿದ, ಅವೆಲ್ಲವನ್ನು ಕಣ್ಣುಕಟ್ಟುವಂತೆ ಹೇಳುವ ಫೋಟೋಗಳನ್ನು ಪಡೆದ, ಚಾರ್ಟ್‌ಗಳನ್ನು ಮಾಡಿದ... ಆನಂತರ ತನ್ನನ್ನು ಆಹ್ವಾನಿಸಿದ ಸಾವಿರಕ್ಕೂ ಹೆಚ್ಚು ಜಾಗಗಳಿಗೆ ಹೋಗಿ ಜನರಿಗೆ ಗೊತ್ತಿಲ್ಲದಂತೆ ಜರುಗುತ್ತಿರುವ ವಾಯುಗುಣದಲ್ಲಿನ ಬದಲಾವಣೆಗಳನ್ನು, ಅದರಿಂದ ಆಗಲಿರುವ ಅಪಾಯಗಳನ್ನು ವಿವರಿಸಲಾರಂಭಿಸಿದ.

ಈಗ, ಈ ಮಾಜಿ ರಾಜಕಾರಣಿ ಮತ್ತು ಹಾಲಿ ಪರಿಸರವಾದಿ ಏರುತ್ತಿರುವ ಜಾಗತಿಕ ತಾಪಮಾನದ ಬಗ್ಗೆ ನೀಡಿದ್ದ ಒಂದು ಭಾಷಣವೇ ಅಮೆರಿಕೆಯಲ್ಲಿ ಜನಪ್ರಿಯ ಸಿನಿಮಾವಾಗಿದೆ, ಅಲ್ಲಿನ ಜನರಲ್ಲಿ ತಳಮಳ ಹುಟ್ಟಿಸಿದೆ. ಹೇಗಾದರೂ ಮಾಡಿ ಈ ಭೂಮಿಯನ್ನು ನಮಗಾಗಿ, ನಮ್ಮ ಮಕ್ಕಳಿಗಾಗಿ, ಮೊಮ್ಮಕ್ಕಳಿಗಾಗಿ ಉಳಿಸಬೇಕೆಂಬ ತಹತಹ, ಕಾಳಜಿ ಹೆಚ್ಚಿಸಿದೆ.



ಈ ಮನುಷ್ಯನ ಹೆಸರು ಅಲ್ ಗೋರ್. ಬಿಲ್ ಕ್ಲಿಂಟನ್‌ನ ಅಧ್ಯಕ್ಷಾವಧಿಯಲ್ಲಿ ಆತನ ಉತ್ತರಾಧಿಕಾರಿಯಂತೆ ಉಪಾಧ್ಯಕ್ಷನಾಗಿದ್ದ ಅಲ್ ಗೋರ್ 2000 ರಲ್ಲಿ ಈಗಿನ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ವಿರುದ್ಧ ಸ್ಪರ್ಧಿಸಿದ್ದರು. ಆ ಚುನಾವಣೆಯಲ್ಲಿ ಬುಷ್ ಸಹೋದರನೇ ಗವರ್ನರ್ ಆಗಿದ್ದ ಫ್ಲೋರಿಡಾ ರಾಜ್ಯದಲ್ಲಿ ಸಾವಿರಾರು ಮತಗಳು ವಿವಾದಾಸ್ಪದವಾಗಿದ್ದವು. ಅದನ್ನು ಚಾಲೆಂಜ್ ಮಾಡಿ ಗೋರ್ ನ್ಯಾಯಾಲಯದ ಮುಂದೆ ಹೋಗಬಹುದಿತ್ತು. ಆದರೆ ಹಾಗೆ ಮಾಡಿದರೆ ದೇಶವನ್ನೇ ಅತಂತ್ರ ಸ್ಥಿತಿಗೆ ದೂಡಿದಂತಾಗುತ್ತದೆ ಎಂದು ಅರಿತ ಗೋರ್ ಸ್ಪರ್ಧೆಯಿಂದ ಹಿಂದೆ ಸರಿದು ಜಾರ್ಜ್ ಬುಷ್ ಅಧ್ಯಕ್ಷನಾಗುವಂತೆ ಸಹಕರಿಸಿದ್ದರು. ಆನಂತರ ಗೊತ್ತಾಗಿದ್ದೇನೆಂದರೆ ಅಲ್ ಗೋರ್ ಚುನಾವಣೆಯಲ್ಲಿ ಬುಷ್‌ಗಿಂತ ಹೆಚ್ಚು ಮತಗಳನ್ನು ಪಡೆದು ಗೆದ್ದಿದ್ದರು. ಆದರೆ ಒಮ್ಮೆ ಸೋಲನ್ನು ಒಪ್ಪಿಕೊಂಡ ನಂತರ ಅದನ್ನು ಪ್ರಶ್ನಿಸುವ ಅಗತ್ಯವಿಲ್ಲ ಎಂದು ಸುಮ್ಮನಾಗಿದ್ದರು. ಇವತ್ತು ಜಗತ್ತಿನ ಏಕೈಕ 'ಬಿಗ್ ಬ್ರದರ್' ಆಗಿರುವ ಅಮೆರಿಕಾದಂತಹ ದೇಶದ ಅಧ್ಯಕ್ಷಗಿರಿಯನ್ನು ಬಿಟ್ಟು ಕೊಡುವುದು ಅಷ್ಟು ಸುಲಭವಲ್ಲ.. ಆದರೆ ಅದನ್ನೇ ಮಾಡಿದ್ದ ಗೋರ್ ತನ್ನ ರಾಜಕೀಯ ಆಕಾಂಕ್ಷೆಗಳಿಗಿಂತ ನೈತಿಕತೆಯೇ ಮುಖ್ಯ ಎಂಬುದನ್ನು ಮೆರೆದಿದ್ದರು. (ನಮ್ಮ ರಾಜ್ಯದಲ್ಲಿ ಈಗ ಅಧಿಕಾರಕ್ಕೆ, ಮಂತ್ರಿ ಪದವಿಗೆ, ನಿಗಮ-ಮಂಡಳಿಗಳ ಚೇರ್ಮನ್‌ಗಿರಿಗೆ ನಡೆಯುತ್ತಿರುವ ಜಂಜಾಟಗಳನ್ನು ಗೋರ್‌ರವರ ನೈತಿಕ ನಿಲುವಿಗೆ ಹೋಲಿಸಿದರೆ ಇವರ ವ್ಯಕ್ತಿತ್ವ ಅರ್ಥವಾಗುತ್ತದೆ).

ನಾನು ಇಲ್ಲಿ ಹೇಳ ಹೊರಟಿದ್ದು ಗೋರ್‌ರವರೇ 'ನಟಿಸಿರುವ', ಜಾಗತಿಕ ಪರಿಸರದಲ್ಲಿನ ಬದಲಾವಣೆಗಳೇ 'ಕಥಾವಸ್ತು'ವಾಗಿರುವ, **'An Inconvenient Truth'** (ಒಂದು ಅನಾನುಕೂಲ ಸತ್ಯ) ಎಂಬ ಸಾಕ್ಷ್ಯ ಚಿತ್ರ ಹೇಗೆ ಹಾಲಿವುಡ್‌ನ ಮಸಾಲಾ ಸಿನಿಮಾಗಳನ್ನೂ ಮೀರಿ ಜನಪ್ರಿಯವಾಗಿದೆ, ಸದ್ಯದಲ್ಲೇ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಪಡೆಯುವ ಸಿನಿಮಾವಾಗಿದೆ ಎಂಬುದರ ಬಗ್ಗೆ.

ಈ ಚಿತ್ರದ ಬಗ್ಗೆ ನನಗೆ ಗೊತ್ತಾಗಿದ್ದೇ ನನ್ನ 28 ವರ್ಷಗಳ ಸ್ನೇಹಿತ ಚಿದು (ಚಿದಾನಂದ ರಾಜಘಟ್ಟ) ಅದರ ಬಗ್ಗೆ ಹೇಳಿದಾಗ. ದಿ ಟೈಮ್ಸ್ ಆಫ್ ಇಂಡಿಯಾದ ವಿದೇಶಿ ಸಂಪಾದಕನಾಗಿರುವ, ಅಮೆರಿಕಾದಲ್ಲೇ ವಾಸಿಸುತ್ತಿರುವ ಚಿದು ರಜೆ ಮೇಲೆ ಬೆಂಗಳೂರಿಗೆ ಬಂದಿದ್ದಾನೆ. ಮೊನ್ನೆ ಆತ ಆಫೀಸಿಗೆ ಬಂದಿದ್ದಾಗ, ನಮ್ಮ ಆಫೀಸಿನ ತಲೆಹರಟೆ ಮಲ್ಲಿ (ಪಿ.ಕೆ. ಮಲ್ಲನಗೌಡರ್)ಯೊಂದಿಗೆ ಮಾತನಾಡುತ್ತಾ "ನೀನು ಯಾವುದಾದರು ಹುಡುಗಿಯನ್ನು ಬುಟ್ಟಿಗೆ ಹಾಕಿಕೊಳ್ಳಬೇಕು ಅಂದುಕೊಂಡಿದ್ರೆ, **'An Inconvenient Truth'** ಎಂಬ ಸಿನಿಮಾ ಇಲ್ಲಿ ಬಿಡುಗಡೆ ಆದಾಗ ಅವಳನ್ನು ಅದಕ್ಕೆ ಕರೆದುಕೊಂಡು ಹೋಗು. ಆ ಚಿತ್ರ ನೋಡಿದ ನಂತರ ಅವಳು ಎಷ್ಟು ಹೆದರಿರುತ್ತಾಳೆಂದರೆ, ನಿನ್ನನ್ನು ಭಯದಿಂದ ಅಪ್ಪಿಕೊಳ್ಳುವುದು ಗ್ಯಾರಂಟಿ" ಅಂದ.


"ನಮ್ಮ ಮಲ್ಲಿಯನ್ನೇ ಅಪ್ಪಿಕೊಳ್ಳುವಷ್ಟು ಭಯ ಹುಟ್ಟಿಸುವಂತದ್ದು ಆ ಚಿತ್ರದಲ್ಲಿ ಏನಿದೆ?" ಅಂತ ನಾನು ಕೇಳಿದೆ. ಆಗ ಅದರ ಬಗ್ಗೆ ಚಿದು ಹೇಳಿದ್ದು ನನ್ನ ಕುತೂಹಲವನ್ನು ಕೆರಳಿಸಿತು. ಈ ಸಿನಿಮಾದ ಬಗ್ಗೆ ಇಂಟರ್‌ನೆಟ್‌ನಲ್ಲಿ ಹಲವಾರು ಲೇಖನಗಳನ್ನು ಓದಿದೆ. ಅದು ಹಾಲಿವುಡ್ ನಿರ್ಮಿಸಿರುವ ಸಿನಿಮಾ ಆಗಿಲ್ಲವಾದ್ದರಿಂದ, ಅದು ಯಾವಾಗ ಇಲ್ಲಿ ಬಿಡುಗಡೆ ಆಗುತ್ತೋ, ಅದನ್ನು ಎಷ್ಟು ಜನ ನೋಡಲಾಗುತ್ತೋ ಎಂಬುದು ಗೊತ್ತಿಲ್ಲದಿರುವುದರಿಂದ ಅದರ ಬಗ್ಗೆ ನಾನು ಓದಿದ್ದರಲ್ಲಿ ಒಂದಿಷ್ಟನ್ನು ಇಲ್ಲಿ ಹೇಳುತ್ತೇನೆ.

2004 ರಲ್ಲಿ ಭಾರತವನ್ನು ಅಪ್ಪಳಿಸಿದ ಸುನಾಮಿಗೂ, 2005 ರಲ್ಲಿ ಮುಂಬೈಯನ್ನೇ ಮುಳುಗಿಸಿದ ಅತಿವೃಷ್ಟಿಗೂ, ಆನಂತರ ಅಮೆರಿಕಾವನ್ನೇ ತಲ್ಲಣಿಸಿದ ಸುಂಟರಗಾಳಿ 'ಕ್ಯಾಟ್ರಿನಾ'ಗೂ, ಈಗ ಉತ್ತರ ಕರ್ನಾಟಕವನ್ನು ಮಳೆಯಲ್ಲಿ ಮುಳುಗಿಸಿ, ದಕ್ಷಿಣ ಕರ್ನಾಟಕವನ್ನು ಬರಗಾಲಕ್ಕೆ ದೂಡುತ್ತಿರುವ ಜಾಗತಿಕ ತಾಪಮಾನಗಳ ನಡುವೆ ಸಂಬಂಧವಿದೆಯೇ?

ಹಾಗೆಯೇ ಇನ್ನು ಹತ್ತು ವರ್ಷಗಳಲ್ಲಿ ಜಗತ್ತಿನ ಬಹಳಷ್ಟು ನಗರಗಳನ್ನು (ಉದಾಹರಣೆಗೆ ನ್ಯೂಯಾರ್ಕ್) ಮತ್ತು ದೇಶಗಳನ್ನು (ಉದಾ: ಮಾಲ್ಡೀವ್) ಜಲಾಂತರವಾಗಿಸಲಿರುವ ಪ್ರಾಕೃತಿಕ ವಿಕೋಪಗಳ ನಡುವೆ ಸಂಬಂಧವಿದೆಯೇ?


ಅಲ್ ಗೋರ್ ಪ್ರಕಾರ ಸಂಬಂಧವಿದೆ. ವೈಜ್ಞಾನಿಕ ಸಂಶೋಧನೆಗಳನ್ನೇ ಆಧರಿಸಿ ಅವರು ನೀಡುವ ಮಾಹಿತಿ ಪ್ರಕಾರ ಇನ್ನು ಹಲವೇ, ಹೌದು ಹಲವೇ ವರ್ಷಗಳಲ್ಲಿ ಜಗತ್ತಿನ ಹಲವೆಡೆ ಅತಿಯಾದ ಚಂಡಮಾರುತಗಳು, ಹಲವೆಡೆ ನಿರಂತರವಾಗಿ ಮಳೆ, ಹಲವೆಡೆ ಕೊನೆ ಇಲ್ಲದಂತಹ ಬರಗಾಲ ಕಾಣಿಸಿಕೊಳ್ಳುತ್ತದೆ. ಅವರು ತೋರಿಸುವ ಚಿತ್ರಗಳಲ್ಲಿ ಸಾವಿರಾರು ವರ್ಷಗಳ ಕಾಲ ಸುರಕ್ಷಿತವಾಗಿಯೇ ಇದ್ದ ಹಿಮಪ್ರವಾಹಗಳು ಕಳೆದ ಕೆಲವೇ ಶತಮಾನಗಳಲ್ಲಿ ಕರಗಿ ಹೋಗಿರುವುದನ್ನು ಕಾಣಬಹುದು. ಇದು ಹೀಗೆ ಮುಂದುವರೆದರೆ ಮಂಜುಗಡ್ಡೆಯ ಮೇಲೆ ನಿಂತಿರುವ ಗ್ರೀನ್‌ಲ್ಯಾಂಡ್ ಸದ್ಯದಲ್ಲೇ ಕರಗಿ, ಜಗತ್ತಿನ ಹಲವಾರು ದ್ವೀಪಗಳು ಮುಳುಗಿ ಹೋಗಲಿವೆ. ಅಷ್ಟೇ ಅಲ್ಲ ನದಿಗಳು ಬತ್ತಿ ಹೋಗಿ, ನೂರಾರು ಜೀವ ಸಂಕುಲಗಳು ಮಾಯವಾಗಿ, ಕಾಡುಗಳು ನಾಶವಾಗಲಿವೆ. ಇದೆಲ್ಲ ಎಷ್ಟು ಘೋರವಾಗಿರುತ್ತದೆ ಎಂಬುದಕ್ಕೆ ಒಂದು ಉದಾಹರಣೆ: 20 ಅಡಿ ಎತ್ತರದ ಸುನಾಮಿ ಅಪ್ಪಳಿಸಿ ಮಾಯವಾಯಿತು. ಆದರೆ ಜಾಗತಿಕ ತಾಪಮಾನ ಏರಿಕೆಯಿಂದ ಇಡೀ ನಗರಗಳು/ದೇಶಗಳು ಇಪ್ಪತ್ತು ಅಡಿ ನೀರಿನಲ್ಲಿ ಶಾಶ್ವತವಾಗಿ ಜಲಸಮಾಧಿ ಆಗುತ್ತವೆ.

ಇದೆಲ್ಲ ಅತಿಶಯೋಕ್ತಿ ಅಲ್ಲ. ಗೋರ್‌ರವರು ನೀಡುವ ಅಂಕಿ ಅಂಶಗಳ ಪ್ರಕಾರ ಇತಿಹಾಸದಲ್ಲೇ ಅತಿಹೆಚ್ಚು 'ಸೆಖೆ' ಕಂಡ ಹತ್ತು ವರ್ಷಗಳು ಕಳೆದ ಹದಿನಾಲ್ಕು ವರ್ಷಗಳಲ್ಲಿ ಕಾಣಿಸಿಕೊಂಡಿವೆ. ಅಷ್ಟೇ ಅಲ್ಲ ಜಗತ್ತಿನ ಇತಿಹಾಸದಲ್ಲಿ ಮೊತ್ತ ಮೊದಲ ಬಾರಿಗೆ ದಕ್ಷಿಣ ಅಮೆರಿಕದಲ್ಲಿ ಚಂಡಮಾರುತಗಳು ಬೀಸಿವೆ. ಜಪಾನ್ ಮತ್ತು ಪೆಸಿಫಿಕ್ ಪ್ರದೇಶಗಳು ಅಪರೂಪದ ತೂಫಾನುಗಳನ್ನು ಎದುರಿಸಿವೆ.



ಫ್ಲೋರಿಡಾವನ್ನು ತತ್ತರಿಸುವಂತೆ ಮಾಡಿದ ಚಂಡಮಾರುತ ಕ್ಯಾಟ್ರಿನಾ, ಕೊಲ್ಲಿ ಪ್ರದೇಶವನ್ನು ತಲುಪಿ, ಅಲ್ಲಿನ ಸೆಖೆಯನ್ನು ತಡೆಯಲಾರದೆ, ಕ್ಯಾಟಗೆರಿ ಮೂರರಿಂದ ಐದಕ್ಕೆ ಏರಿತು. ಕೊಲ್ಲಿ ಹರಿವು ಮತ್ತು ಜೆಟ್ ಹರಿವಿನಲ್ಲಿ ಬದಲಾವಣೆಗಳಾಗಿರುವುದನ್ನು ಸಂಶೋಧನನೆಗಳು ಸಾಬೀತು ಪಡಿಸಿವೆ. ಧ್ರುವಗಳ ಹಿಮದಲ್ಲಿ ಇಂಗಾಲ ಡೈ ಆಕ್ಸೈಡ್ ಹೆಚ್ಚಾಗಿರುವುದನ್ನು ಗೋರ್ ತೋರಿಸುತ್ತಾರೆ. ಹಿಂದೆಲ್ಲ ಪ್ರಕೃತಿಯಲ್ಲಿ ಈ ಇಂಗಾಲ ಡೈ ಆಕ್ಸೈಡ್ ತಿರುಗುತ್ತಿರುವ ಚಕ್ರದಂತೆ ಏರುತ್ತಾ ಮತ್ತು ಕಡಿಮೆ ಆಗುತ್ತಾ ಇರುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ವಾಯುವಿನಲ್ಲಿ ಇಂಗಾಲ ಡೈ ಆಕ್ಸೈಡ್‌ನ ಪ್ರಮಾಣ ಎಷ್ಟು ಹೆಚ್ಚಾಗಿದೆ ಎಂದರೆ, ಅದು ಚಕ್ರದಂತೆ ಏರುತ್ತಾ-ಇಳಿಯುತ್ತಾ ಹೋಗುವ ಬದಲಾಗಿ ಕಳೆದ ಐದು ನೂರು ವರ್ಷಗಳಲ್ಲಿ ಬರೀ ಏರುತ್ತಾ ಸಾಗಿದೆ.

ಈ ಇಂಗಾಲ ಡೈ ಆಕ್ಸೈಡ್ ಇವತ್ತಿನ ಏರುತ್ತಿರುವ ಜಾಗತಿಕ ತಾಪಮಾನಕ್ಕೆ ಪ್ರಮುಖ ಕಾರಣವಾಗಿದೆ. ಇದು ಯಾಕೆ ಮತ್ತು ಹೇಗೆ ಆಗುತ್ತಿದೆ? ಇದಕ್ಕೆ ಪ್ರಮುಖ ಕಾರಣ ನಾವೆಲ್ಲರೂ ದಿನನಿತ್ಯ ಬಳಸುತ್ತಿರುವ ಭೂಗರ್ಭದ ಇಂಧನಗಳು. ಲಕ್ಷಾಂತರ ವರ್ಷಗಳಿಂದ ಕಲ್ಲಿದ್ದಿಲು, ಅನಿಲ, ತೈಲ ರೂಪದಲ್ಲಿ ಸಂಗ್ರಹವಾಗಿದ್ದ ಇಂಧನಗಳನ್ನು ನಾವು ಈಗ ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಾ ಇಂಗಾಲ ಡೈ ಆಕ್ಸೈಡ್‌ಅನ್ನು ಪರಿಸರದಲ್ಲಿ ಬಿಡುತ್ತಿರುವುದೇ ಜಾಗತಿಕ ತಾಪಮಾನ ಏರುವಿಕೆಗೆ ಪ್ರಮುಖ ಕಾರಣವಾಗಿದೆ. ಹೀಗೆ ಬಿಡುಗಡೆಗೊಂಡ ಇಂಗಾಲ ಡೈ ಆಕ್ಸೈಡಿನಿಂದಾಗಿ ಸೂರ್ಯನ ಕಿರಣಗಳನ್ನು ಪ್ರತಿಫಲಿಸುವ ಹಿಮಪರ್ವತಗಳು ಕರಗುತ್ತಿವೆ ಮಾತ್ರವಲ್ಲ ಸೂರ್ಯ ಉಷ್ಣತೆ ಏರುವ



ಸಮುದ್ರಗಳು ಬಿಸಿಯಾಗುತ್ತಿವೆ. ಅಂದರೆ ಒಂದೆಡೆ ಕರಗುತ್ತಿರುವ ಹಿಮಪರ್ವತಗಳು, ಇನ್ನೊಂದೆಡೆ ಬಿಸಿಯಾಗುತ್ತಿರುವ ಸಮುದ್ರಗಳು. ಈ ಭೂಮಿಯ ಬಹಳಷ್ಟು ಭಾಗ ಈ ಪ್ರಕ್ರಿಯೆಯಲ್ಲಿ ಮುಳುಗದೇ ಇರುತ್ತದೆಯೇ?

ಭೂಭಾಗದ ವಿಷಯ ಬದಿಗಿರಲಿ. ಆದರೆ ಕರಗುತ್ತಿರುವ ಹಿಮಪರ್ವತಗಳು ಮತ್ತು ಕಾವೇರುತ್ತಿರುವ ಸಮುದ್ರಗಳ ನಡುವೆ ಮಾನವರು ಹೇಗೆ ತಾವು ವಿನಾಶದ ಅಂಚಿನಲ್ಲಿರುವುದರ ಬಗ್ಗೆ ಅರಿವೇ ಇಲ್ಲದಂತೆ ಬದುಕುತ್ತಿದ್ದಾರೆ? ಇದಕ್ಕೆ ಗೋರ್ "ಬಿಸಿ ನೀರು ಮತ್ತು ಕಪ್ಪೆ"ಯ ಉದಾಹರಣೆಯನ್ನು ನೀಡುತ್ತಾರೆ. ನೀವು ಕುದಿಯುತ್ತಿರುವ ನೀರಿನ ಪಾತ್ರೆಯಲ್ಲಿ ಕಪ್ಪೆಯನ್ನು ಬಿಸಾಡಿದರೆ ಅದು ತಕ್ಷಣವೇ ಹಾರಿ ಹೊರಬರುತ್ತದೆ. ಆದರೆ ಅದೇ ಕಪ್ಪೆಯನ್ನು ತಣ್ಣೀರಿನ ಪಾತ್ರೆಯಲ್ಲಿ ಹಾಕಿ; ಅದು ಸುಮ್ಮನಿರುತ್ತದೆ. ನಿಧಾನವಾಗಿ ಆ ಪಾತ್ರೆಯಲ್ಲಿನ ನೀರನ್ನು ಕಾಯಿಸಲಾರಂಭಿಸಿ ನೋಡಿ, ನೀರು ಕುದಿಯಲಾರಂಭಿಸಿದರೂ ತನಗೆ ಏನಾಗುತ್ತಿದೆ ಎಂದು ಅರಿಯಲಾಗದ ಕಪ್ಪೆ ತಾನು ಬೆಂದು ಹೋಗುವವರೆಗೂ ಅಲ್ಲೇ ಇರುತ್ತದೆ!

ಮನುಷ್ಯರು ಕೂಡ ಆ ಕಪ್ಪೆಯಂತೆ ಕಾವೇರುತ್ತಿರುವ ಭೂಮಂಡಲದಲ್ಲಿ ತಮಗರಿವಿಲ್ಲದಂತೆ ಬೆಂದು ವಿನಾಶದ ಅಂಚನ್ನು ತಲುಪುತ್ತಿದ್ದಾರೆ. ಆದರೆ ಗೋರ್ ಪ್ರಕಾರ ಮಾನವ ಕಪ್ಪೆಯಲ್ಲ, ಆತನಲ್ಲಿ ತನ್ನ ಸುತ್ತ ಆಗುತ್ತಿರುವ ಬದಲಾವಣೆಗಳ ಬಗ್ಗೆ ಅರಿವು ಮೂಡಿಸಬಹುದು. ಆ ಮೂಲಕ ಆತ ಕಾವೇರುತ್ತಿರುವ ಭೂಮಿಯನ್ನು ತಣ್ಣಗಾಗಿಸಿ ಪರಿಸರ ನಾಶವನ್ನು ತಡೆದು ಎಲ್ಲವನ್ನು ಸರಿಪಡಿಸಬಹುದು ಎಂದು ಹೇಳುತ್ತಾರೆ.

ಆದರೆ ಇದು ಇನ್ನು ಹತ್ತು ವರ್ಷಗಳಲ್ಲೇ ನಡೆಯಬೇಕಿದೆ. ಏಕೆಂದರೆ ನಾವು ಈಗಿನ ಪ್ರಮಾಣದಲ್ಲೇ ಇಂಗಾಲ ಡೈ ಆಕ್ಸೈಡ್ ಅನ್ನು ಪರಿಸರದಲ್ಲಿ ಹರಡುತ್ತಾ ಹೋದರೆ, ಈ ಭೂಮಂಡಲವನ್ನು ರಕ್ಷಿಸಲಾಗದಷ್ಟು ಪರಿಸ್ಥಿತಿ ಕೈಮೀರಿ ಹೋಗಿರುತ್ತದೆ.

ಅಂದರೆ ಇಡೀ ಮಾನವ ಸಂಕುಲ ಇವತ್ತು ಒಂದು ಟೈಮ್‌ಬಾಂಬ್ ಮೇಲೆ ಕೂತಿದೆ. ಇದನ್ನು ಬ್ರಿಟನ್ನಿನ ವಿಜ್ಞಾನಿ ಸರ್ ಜೇಮ್ಸ್ ಲವ್‌ಲಾಕ್‌ರವರೂ ದೃಢೀಕರಿಸುತ್ತಾರೆ. ಅವರು ಇತ್ತೀಚಿಗೆ ಪ್ರಕಟಿಸಿರುವ ಪುಸ್ತಕದಲ್ಲಿ ಏನು ಹೇಳಿದ್ದಾರಂತೆ ಗೊತ್ತಾ? ಮನುಷ್ಯ ತನ್ನ ಪರಿಸರವನ್ನು ಹೀಗೆ ನಾಶ ಮಾಡುತ್ತಾ ಸಾಗಿದರೆ, ಇನ್ನೆರಡು ತಲೆಮಾರುಗಳಲ್ಲಿ ಇಡೀ ಭೂ ಪ್ರದೇಶ ಮುಳುಗಡೆಯಾಗಿ ಮಾನವ ಸಂಕುಲ ಎಂಬುದು ಉತ್ತರ ಅಥವಾ ದಕ್ಷಿಣ ಧ್ರುವಗಳಲ್ಲಿ ವಾಸಿಸುವ ಹಲವೇ ಹಲವು ಸಂಖ್ಯೆಯಾಗುವ ಹಂತ ತಲುಪುತ್ತದೆ.

ಒಂದು ಕ್ಷಣ ಯೋಚಿಸಿ: ಇಡೀ ಹಿಮಾಲಯ ಪರ್ವತಗಳು ಕರಗಿದರೆ ಏನೇನಾಗುತ್ತದೆಂದು? ನಮ್ಮ ಮಕ್ಕಳನ್ನು ಭೂಕಂಪನಗಳಿಗೆ, ಸುನಾಮಿಗಳಿಗೆ, ಜ್ವಾಲಾಮುಖಿಗಳಿಗೆ, ಚಂಡಮಾರುತಗಳಿಗೆ ತುತ್ತಾಗಿಸುವ ಬಯಕೆ ನಮ್ಮದಾ? ಇಲ್ಲವಾದರೆ ನಾವು ಮಾಡಬೇಕಿರುವುದು ನಮ್ಮ ಜೀವನ ಶೈಲಿಯಲ್ಲಿ ಒಂದಿಷ್ಟು ಬದಲಾವಣೆಗಳನ್ನು ಮಾತ್ರ.

ಹೈಡ್ರೋ ಫ್ಲೋರೋಕಾರ್ಬನ್‌ಗಳನ್ನು ಕಡಿಮೆಗೊಳಿಸಿ ಹೇಗೆ ಓಜೋನ್ ಪದರದಲ್ಲಿನ ರಂಧ್ರಗಳನ್ನು ಕಡಿಮೆಗೊಳಿಸಲಾಗಿತ್ತೋ, ಹಾಗೆಯೇ ಇಂಗಾಲ ಡೈ ಆಕ್ಸೈಡ್ ಅನ್ನು ಹೊರ ಚೆಲ್ಲುವ ಕ್ರಿಯೆಗಳನ್ನು ಕಡಿಮೆಗೊಳಿಸಿದರೆ ಜಾಗತಿಕ ತಾಪಮಾನ ಏರುವಿಕೆಯನ್ನು ತಡೆಯಬಹುದು, ನಮ್ಮ ಮಕ್ಕಳನ್ನು ರಕ್ಷಿಸಬಹುದು.

ವಿಚಿತ್ರ ನೋಡಿ, ಈ ಭೂಮಂಡಲ ಕೊನೆಗೂ ನಾಶವಾಗುವುದು ನಾಸ್ಟ್ರೋಡ್ಯಾಮಸ್‌ನಂತಹ ಯಾವನೋ ಒಬ್ಬ ಅಸಾಮಿ ಹಾಗುತ ಭವಿಷ್ಯ ನುಡಿದಿದ್ದ ಎಂಬ ಕಾರಣಕ್ಕಲ್ಲ, ಬದಲಾಗಿ, ಮಾನವನೇ ತನ್ನ ಕೈಯಾರೆ ಪರಿಸರಕ್ಕೆ ಮಾಡುತ್ತಿರುವ ಘೋರ ಹಾನಿಗಳಿಂದ.

ನಾವು ಬಿಸಿಯಾಗುತ್ತಿರುವ ನೀರಿನಲ್ಲಿರುವ ಕಪ್ಪೆಯಂತಿರಬಾರದಲ್ಲವೇ....


-ಗೌರಿ ಲಂಕೇಶ್

ಚಾನೆಲ್ ಕೇಬಲ್ ಗುಟ್ಟು!

ರವೀಂದ್ರ ರೇಶ್ಮೆ

ಜೆಡಿಎಸ್ ಶಾಸಕಾಂಗ ಪಕ್ಷದ ತುರ್ತುಸಭೆಯಲ್ಲಿ (ಆಗಸ್ಟ್ 17, ಗುರುವಾರ) ಹುಲಿಯೂರು ದುರ್ಗದ ಎಮ್ಮೆಲ್ಲೆ ಹಾಗು ಮಾಜಿ ಸಚಿವ ಡಿ. ನಾಗರಾಜಯ್ಯನವರ ವಾಗ್ಝರಿ ತುಂಬಾ ನಿಚ್ಚಳವಾಗಿತ್ತು; ಸಾಕಷ್ಟು ಕಠೋರವೂ ಆಗಿತ್ತು.


"ಕರ್ನಾಟಕದ ಇತಿಹಾಸದಲ್ಲೇ ಹೀಗೆ ಕೇವಲ ಐದಾರು ತಿಂಗಳ ಅವಧಿಯಲ್ಲಿ ಅತ್ಯಂತ ಕೆಟ್ಟ ಹೆಸರು ಪಡೆದಿರೋ ಮುಖ್ಯಮಂತ್ರಿ ನೀವೇ ಅನ್ನೋ ಹಂಗಾಯ್ತಲ್ಲ ಕುಮಾರಸ್ವಾಮಿಯವರೇ?....."



ಇದೇ ಧಾಟಿಯಲ್ಲಿ ಅಬ್ಬರಿಸಿದ ಚೆನ್ನರಾಯಪಟ್ಟಣದ ಶಾಸಕ ಹಾಗು ಸರಳ-ನಿಷ್ಠುರವಾದಿ ನಾಯಕ ಪುಟ್ಟೇಗೌಡರ ಸವಾಲೂ ಅಷ್ಟೇ ತೀಕ್ಷ್ಣವಾಗಿತ್ತು:

"ರೀ ಕುಮಾರಣ್ಣನವರೇ, ನಿಮ್ಮನ್ನು ಸಿ.ಎಂ. ಮಾಡಲಿಕ್ಕೆ ನಾವೇನಾದ್ರೂ ನಿಮ್ಮಿಂದ ಏನನ್ನಾದ್ರೂ ಸ್ವಂತಕ್ಕೇಂತ ಲಾಭ ಮಾಡಿಕೊಂಡ್ವಾ? ಫೈವ್‌ಸ್ಟಾರ್ ರೆಸಾರ್ಟ್‌ಗೆ ಕರದೊಯ್ದವ್ರು ನೀವೆ, ಆಮೇಲೆ ಗೋವಾಕ್ಕೆ ಕರ್ಕೊಂಡೋದವ್ರು ನೀವೇ... ಅಲ್ಲೊಂದಿಷ್ಟು ಒಳ್ಳೇ ಊಟ ಹಾಕಿಸಿರಬಹುದು... ಅಮ್ಯಾಕೆ ಧರ್ಮಸ್ಥಳಕ್ಕೆ ಯಾತ್ರೆಗೆ ಕರ್ಕೊಂಡೋಗಿ ಒಂದು ಧರ್ಮದೂಟ ಹಾಕಿಸಿದ್ರಿ, ಅಷ್ಟೇ.... ಆದ್ರೆ ಇವತ್ತು ನಿಮ್ಮಿಂದಾಗಿ ನಾವುಗಳು ನಮ್ಮ ಕ್ಷೇತ್ರದಲ್ಲಿ ಮುಖಾ ತೋರ್ಸೋದೂ ಕಷ್ಟವಾಯ್ತಲ್ಲ ಸ್ವಾಮಿ...."

ಹೀಗೆಯೇ ಸರ್ವಶ್ರೀ ಮಾಗಡಿ ಬಾಲಕೃಷ್ಣ ಎಚ್.ಡಿ. ಕೋಟೆ ವೆಂಕಟೇಶು, ಕಡೂರಿನ ಎಸ್ಸೆಲ್ ಧರ್ಮೇಗೌಡ ಮುಂತಾದ ಒಂದು ಕಾಲದ ಅಖಂಡ ಆಪತ್-ಬಾಂಧವರೂ ಆರ್ಭಟಿಸುತ್ತಲೇ ಸಾಗಿದ್ದನ್ನು ಕಂಡು ಕಂಗಾಲಾದ ಮುಖ್ಯಮಂತ್ರಿ ಕುಮಾರಸ್ವಾಮಿ ಕಟ್ಟಕಡೆಯಲ್ಲೊಮ್ಮೆ ಮಾತ್ರ ಬಾಯ್ಬಿಟ್ಟು "ನಾನು ಬೇಕಾದ್ರೆ ರಾಜೀನಾಮೆ ಕೊಡ್ತೇನೆ" ಎಂಬ ನಿರೀಕ್ಷಿತ ಬ್ರಹ್ಮಾಸ್ತ್ರ ಪ್ರಯೋಗಿಸಿ ಈ ಭಿನ್ನಮತೀಯರನ್ನು ತಣ್ಣಗಾಗಿಸಿದರು......



ಕಬಡ್ಡಿ ಬಾಬು

ಆದರೆ 'ಕೃಷ್ಣಾ'ದಲ್ಲಿ ಜರುಗಿದ ಈ ರಹಸ್ಯ(?) ಸಭೆಯ ನಂತರ ಹೊರಬಂದು ಪತ್ರಿಕಾಗೋಷ್ಠಿಯಲ್ಲಿ ಪ್ರತ್ಯಕ್ಷರಾದ ಕುಮಾರಸ್ವಾಮಿ ಕಿಡಿಕಾರಿದ್ದು ಪತ್ರಿಕೆಗಳ ಮೇಲೆ. "ನಿಮ್ಮ ಟೀಕೆ-ಟಿಪ್ಪಣಿಗಳಿಂದಲೇ ನನ್ನ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಡ್ಡಗಾಲು ಹಾಕ್ತಿದ್ದೀರಿ" ಎಂದು ಗುಡುಗಿದರು ಈ ಅಭಿವೃದ್ಧಿ ರಂಗ ಸರ್ಕಾರದ ಅನನುಭವಿ ಸಿ.ಎಮ್ಮು!

ಯಾವ ಗಳಿಗೆಯಲ್ಲಾದ್ರೂ ಬಳ್ಳಾರಿಯಲ್ಲಿ ಜನಾರ್ಧನ ರೆಡ್ಡಿಯ 150 ಕೋಟಿ ರೂಪಾಯಿ ಲಂಚ ವೀಡಿಕೆ ಪುರಾವೆಗಳ ಬಾಂಬ್ ಸ್ಫೋಟಗೊಳ್ಳಬಹುದೆಂಬ ಭೀತಿ-ಆತಂಕದ ಕರಾಳ ಛಾಯೆಯಲ್ಲೇ ಜರುಗಿದ ಜೆಡಿಎಲ್‌ಪಿ ಮೀಟಿಂಗಿನಲ್ಲಿ ಅವರದ್ದೇ ಪಾರ್ಟಿಯ ಪ್ರಬುದ್ಧ ಶಾಸಕರು ಇದೊಂದನ್ನು ಮಾತ್ರ ನೇರವಾಗಿ ಉಲ್ಲೇಖಿಸಲಿಲ್ಲವೆಂಬುದೊಂದೇ ಕುಮಾರಸ್ವಾಮಿಗೆ ಪ್ಲಸ್ ಪಾಯಿಂಟ್ ಆಗಿ ಕಂಡಿತು..

ಫ್ಯಾಮಿಲಿ ಬಿಸಿನೆಸ್ಸು, ಪಾರ್ಟಿ ಪಾಲಿಟಿಕ್ಸು


ಇತ್ತೀಚೆಗೆ ತಮ್ಮ ಸೋದರರಾದ ಬಾಲಣ್ಣ ಮತ್ತು ಮುನ್ನಾಭಾಯಿ-ರಮೇಶಣ್ಣನವರ ಗಣಿ ವ್ಯಾಪಾರ ಮತ್ತು ತಮ್ಮ ಕುಟುಂಬದ "ಸ್ತ್ರೀಶಕ್ತಿ ಗುಂಪಿನ" ಸದಸ್ಯರೆಲ್ಲರೂ ಸೇರಿ ಖರೀದಿಸಿದ 36ಕೋಟಿ ರೂ. ವೈಟ್‌ಫೀಲ್ಡ್ ಕಾಂಪ್ಲೆಕ್ಸ್ ಖರೀದಿಯ ವ್ಯವಹಾರ ಜಾಹೀರುಗೊಂಡಾಗಿನಿಂದ ಸಾಕಷ್ಟು ಮುಜುಗರಕ್ಕೊಳಗಾದ ಕುಮಾರಸ್ವಾಮಿ ಆ ಬಗ್ಗೆ ಸಾರ್ವಜನಿಕವಾಗಿ ಪ್ರತಿಕ್ರಿಯಿಸಿದ ವೈಖರಿಯೇ ಹೇಗೆ ವಿಲಕ್ಷಣವಾಗಿತ್ತು ನೋಡಿ:

"ನಾವುಗಳು ರಾಜಕೀಯದಲ್ಲಿದ್ದಷ್ಟಕ್ಕೆ ಮಾತ್ರವೇ ನಮ್ಮ ಕುಟುಂಬ ವರ್ಗದವರು ತಮ್ಮ ಪಾಡಿಗೆ ತಾವು ಖಾಸಗಿ ವ್ಯವಹಾರ, ವ್ಯಾಪಾರ ಮುಂತಾದ ಬಿಸಿನೆಸ್ಸು ಮಾಡೋದೇ ತಪ್ಪಾ?"

ಇನ್ನು ಅವರ ಪಿತಾಶ್ರೀ ಸನ್ಮಾನ್ಯ ದೇವೇಗೌಡರೋ ಕಳೆದ ಆಗಸ್ಟ್ 8, ಮಂಗಳವಾರದಂದು ಉದಯ-ನ್ಯೂಸ್ ಚಾನೆಲ್ಲಿನ ಸಮೀವುಲ್ಲಾರ ಜತೆ ಒಂದೂವರೆ ಗಂಟೆ ಕಾಲ 'ವಿಚಾರ-ವಿವಾದ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಮಸ್ತ ಕನ್ನಡಿಗ ವೀಕ್ಷಕರೆದುರು ಮಂಡಿಸಿದ್ದಾದರೂ ಏನು ಗೊತ್ತೇ: ಒಂದು ಕೈಯಲ್ಲಿ ತಮ್ಮ ಕುಟುಂಬದ ಹೆಣ್ಣುಮಕ್ಕಳು ನಡೆಸಿದ 36 ಕೋಟಿ ರೂ. ಆಸ್ತಿ ಖರೀದಿಯ ಸೇಲ್ ಡೀಡ್ ಕಾಪಿ ಹಾಗು ಮತ್ತೊಂದು ಕೈಯಲ್ಲಿ ತಮ್ಮ ಜೆಡಿಎಸ್ ಪಾರ್ಟಿಯ 2004 ರ ಚುನಾವಣಾ ಪ್ರಣಾಳಿಕೆ...

ಸೇಲ್‌ಡೀಡ್ ಪ್ರದರ್ಶಿಸುತ್ತ ತಮ್ಮ ಪರಿವಾರದ ಸದಸ್ಯರು ಹೀಗೆ ಕ್ರಮಬದ್ಧವಾಗಿ, ಮಾರುಕಟ್ಟೆ ದರ ಮತ್ತು ಸಬ್‌ರಿಜಿಸ್ಟ್ರಾರ್ ದರಪಟ್ಟಿಗನುಸಾರವಾಗಿಯೇ ಆಸ್ತಿ ಖರೀದಿ ಮಾಡಿದ್ದರಲ್ಲಿ ಅಕ್ರಮ ಏನಿತ್ತು ಎಂದೆನ್ನುತ್ತ ಎಂದಿನಂತೆ ಟಿವಿ ಕ್ಯಾಮರಾದ ಎದುರೇ ಮೋಜು ಕುಟ್ಟಿದರು ನಮ್ಮ ಮಾಜಿ ಪ್ರಧಾನಿ......

ಪಾರ್ಟಿ ಪ್ರಣಾಳಿಕೆಯನ್ನು ಎತ್ತಿ ಹಿಡಿದುಕೊಂಡ ದೇವೇಗೌಡ್ರು ತಮ್ಮ ಕುಟುಂಬದ ವಿರುದ್ಧ ಅಕ್ರಮ ಆಸ್ತಿ ಗಳಿಕೆ ಆರೋಪ ಮಾಡ್ತಿರೋ ರಾಜಕೀಯ ಎದುರಾಳಿಗಳ "ಭೂಕಬಳಿಕೆ" ವಹಿವಾಟುಗಳ ತನಿಖೆ ಮಾಡಲಿಕ್ಕೆ ಚುನಾವಣಾ ಘೋಷಣೆಯನುಸಾರ ವಿಶೇಷ ನ್ಯಾಯಲಯವನ್ನು ಅತೀ ಶೀಘ್ರದಲ್ಲಿಯೇ ರಚಿಸ್ತೇವೆ ಎಂಬ ಬೆದರಿಕೆಯನ್ನೂ ಬತ್ತರಿಸಿದರು....



Registration No. ______ THE COMPANIES ACT, 1956 Filing Fee Rs. 500/-
Nominal Capital Rs. 1,00,00,000/-

FORM No. 32

PARTICULARS OF APPOINTMENT OF DIRECTORS AND MANAGER AND CHANGES AMONG THEM

[Pursuant to Section 303 (2)]

Name of the Company KASTHURI MEDIAS PRIVATE LIMITED

Presented by SMT. ANITHA KUMARASWAMY

A. Appointment of and changes among Directors

Name or names and surname in full (1)	Father's/Husband's name (2)	Usual residential address (3)	Nationality (4)	Date of appointment or changes (5)	Brief particulars of changes (6)
1) SMT ANITHA KUMARASWAMY	W/O SRI H.D.KUMARASWAMY	No. 286, 3rd Main Road, J.P.Nagar-3rd Phase, Mini Forest Road, Bangalore-560078.	Indian	From the date of incorporation	- Nil -
2) SRI H.D.KUMARASWAMY	S/O SRI H.D.DEVEGOWDA	No.286, 3rd Main Road, J.P.Nagar-3rd Phase, Mini Forest Road, Bangalore-560078.	Indian	From the date of incorporation	- Nil -

REC/NO.

1 MAR 2005

FORM 32

21/02/2005


21/02/2005

ಕಸ್ತೂರಿ ಮೀಡಿಯಾ ಪ್ರೈ ಲಿ., ರಿಜಿಸ್ಟ್ರೇಷನ್ ದಾಖಲೆ

ಪಾಪ, ಎಂತಹ ದಯನೀಯ ಪರಿಸ್ಥಿತಿ... ಎಂತಹ ದೈನೇಸಿ ಸನ್ನಿವೇಶ ಈ ಅಪ್ಪ-ಮಕ್ಕಳಿಗೆ ನೋಡಿ: ಹೀಗೆ ಇಡೀ ರಾಜ್ಯ ಸರ್ಕಾರವನ್ನೇ ತಮ್ಮ ಕುಟುಂಬದ ಕಪಿಮುಷ್ಟಿಯಲ್ಲಿಟ್ಟುಕೊಂಡು ಮನಸೋಇಚ್ಛೆ ಆಸ್ತಿ ಖರೀದಿ, ಐ[illegible]ಓರ್ ವ್ಯಾಪಾರ, ಕೇಬಲ್ ಟಿವಿ ಚಾನೆಲ್ಲು ಮುಂತಾದ [illegible]ಧೀರ್ ಹಣ ಗಳಿಕೆ ಮತ್ತು ಸ್ಥಿರಾಸ್ತಿ ಸಂಪತ್ತು [illegible]ಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ಬಿಡುವ[illegible]ಚಿತ್ಯ (Propriety) ಹಾಗು ಸಾರ್ವಜನಿಕ ನೈತಿಕತೆ (Public morality)ಯ ಪ್ರಶ್ನೆಗಳೇ ಇವರುಗಳನ್ನು ಬಾಧಿಸುತ್ತಿಲ್ಲ...

ಸ್ವಕುಟುಂಬ ಪ್ರೇಮ, ಸ್ವಜನ ಪಕ್ಷಪಾತ ಹಾಗು ಪುತ್ರ ವ್ಯಾಮೋಹದಂತಹ ಪ್ರವೃತ್ತಿಗಳು ಅಧಿಕಾರಸ್ಥ ರಾಜಕೀಯ ಪರಿವಾರಗಳಲ್ಲಿ ಇಷ್ಟೊಂದು ಸ್ವಚ್ಛಂದವಾಗಿ ವಿಜೃಂಭಿಸುತ್ತಿದ್ದಲ್ಲಿ ಅದು ಪ್ರಜಾಸತ್ತೆಗಾಗಲಿ, ಸೆಕ್ಯುಲರ್ ವ್ಯವಸ್ಥೆಗಾಗಲಿ ಎಂತಹ ಅಪಾಯಕಾರಿ ದ್ರೋಹವೆಂಬುದು ದೇವೇಗೌಡರಿಗಾಗಲಿ ಅಥವಾ ಅವರ ಸುಪುತ್ರ ಕುಮಾರಣ್ಣನಿಗಾಗಲಿ ಮನದಟ್ಟಾಗುತ್ತಿಲ್ಲವೆಂಬುದೇ ಇಡೀ ಕರ್ನಾಟಕದ ದುರಂತವಾಗಿದೆ....

ಕುಮಾರಣ್ಣನ ಬಿಸಿನೆಸ್ ಡೀಲ್ 1- ಅಮೋಘ್ ಕೇಬಲ್ ಟಿವಿ



ಹೌದು, ವೃತ್ತಿ ರಾಜಕಾರಣಿಯಾಗಿಯೂ ಸ್ವಂತ ಜೀವನೋಪಾಯಕ್ಕಾಗಿ ಕುಮಾರಸ್ವಾಮಿ ಆರಂಭದಿಂದಲೂ ಸಿನಿಮಾ ವಿತರಣೆ, ಸಿನಿಮಾ ಥೇಟರ್ ಬಿಸಿನೆಸ್ಸು, ತದನಂತರ ಸದಭಿರುಚಿಯ ಸಿನಿಮಾ ಪ್ರೊಡಕ್ಷನ್ ವ್ಯವಹಾರ ನಡೆಸುತ್ತಿದ್ದರಲ್ಲಿ ಆಕ್ಷೇಪಣೀಯವಾದದ್ದೇನೂ ಇರಲಿಲ್ಲ ನಿಜ....

2004 ರ ಚುನಾವಣಾ ನಾಮಪತ್ರ ಸಲ್ಲಿಕೆಯಲ್ಲಿಯೇ ಕುಮಾರಸ್ವಾಮಿ ತನ್ನ ಒಟ್ಟು ಆಸ್ತಿ ಮೌಲ್ಯ ಸುಮಾರು 10 ಕೋಟಿ ರೂ. ಎಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಅಫಿಡೆವಿಟ್ಟಿನಲ್ಲಿ 'ಪ್ರಾಮಾಣಿಕವಾಗಿಯೆ' ಘೋಷಿಸಿಕೊಂಡಿದ್ದೂ ಸತ್ಯವೇ.....

ಇದೀಗ ಕುಮಾರಸ್ವಾಮಿಯವರ ಮುಖ್ಯಮಂತ್ರಿ ಪದವಿಗೇ ಸಂಚಕಾರ ತಂದಿರಬಹುದಾದ ಬಿಸಿನೆಸ್ ವಹಿವಾಟುಗಳು ಮಾತ್ರ ಅವುಗಳ ಸಂದರ್ಭ, ಕಾಲ ಹಾಗು ಸಹಭಾಗಿತ್ವದ ಸ್ವರೂಪದಿಂದಾಗಿಯೇ ವಿವಾದಾತ್ಮಕವೆನಿಸಿಬಿಟ್ಟಿವೆ....

ಉದಾಹರಣೆಗೆ ಅವರ ಕೇಬಲ್ ಟಿವಿ ಸೇವಾ ಸರಬರಾಜುದಾರ ಸಂಸ್ಥೆಯಾದ 'ಅಮೋಘ್ ಬ್ರಾಡ್‌ಬ್ಯಾಂಡ್ ಸರ್ವೀಸಸ್ ಪ್ರೈ ಲಿ' ಎಂಬ ಕಂಪನಿಯ ಪರಿಚಯಾತ್ಮಕ ಮಾಹಿತಿಯನ್ನೇ ಕೊಂಚ ಗಮನವಿಟ್ಟು ಅವಲೋಕಿಸಿ....

ಅಮೋಘ್ ಕಂಪನಿಯ ರಿಜಿಸ್ಟ್ರೇಷನ್ ನೆರವೇರಿದ ದಿನಾಂಕವೇ ಗಮನಾರ್ಹ. 26 ನೇ ಮೇ, 2004... ಅಂದರೆ ಕೇವಲ ಮೂರು ದಿನಗಳ ಮುಂಚೆಯಷ್ಟೇ ಅರ್ಥಾತ್ ದಿನಾಂಕ 23.5.2004 ರಂದೇ ಕಾಂಗ್ರೆ-ಜೆಡಿಎಸ್ ಮೈತ್ರಿ ಕೂಟ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು.

ಹಾಗೆಯೇ ಚುನಾವಣಾ ಫಲಿತಾಂಶ ಪ್ರಕಟಗೊಂಡು ಕುಮಾರಸ್ವಾಮಿ ರಾಮನಗರ ಕ್ಷೇತ್ರದಿಂದ ಜೆಡಿಎಸ್ ಎಮ್ಮೆಲ್ಲೆಯಾಗಿ ಆಯ್ಕೆಗೊಂಡದ್ದೂ ದಿನಾಂಕ 13.5.2004 ರಂದು...

ಅಷ್ಟೊತ್ತಿಗಾಗಲೇ ಕಾಂಗ್ರೆಸ್‌ನ ಧರಂಸಿಂಗರನ್ನು ಸಿಎಂ ಪದವಿಗೇರಿಸುವಲ್ಲಿ ಮತ್ತು ತಮ್ಮದೇ ಪಾರ್ಟಿಯ ಸಿದ್ಧರಾಮಯ್ಯನವರನ್ನು ಡಿಸಿಎಂ ಪದವಿಯಲ್ಲಿ ಮತ್ತೊಮ್ಮೆ ಕೂರಿಸಿ ಅವರ ಆಕಾಂಕ್ಷೆಯನ್ನು ಭಗ್ನಗೊಳಿಸುವಲ್ಲಿ ನಡೆದ ತೆರೆಮರೆಯ ರಾಜಕೀಯದಲ್ಲಿ ತಮ್ಮ ಅಪ್ಪಾಜಿ ದೇವೇಗೌಡರ ಜತೆ ಸ್ವತಃ ಕುಮಾರಣ್ಣನ ಕೈಜೋಡಿಸಿ ತನ್ನ ರಾಜಕೀಯ ಬಲಿಷ್ಠತೆಯನ್ನು ಸಾಬೀತು ಮಾಡಿದ್ದಾಗಿತ್ತು....

ಬೋರ್ಡ್ ಆಫ್ ಡೈರೆಕ್ಟರ್ಸ್‌ನಲ್ಲಿ ಬ್ರದರ್ 'ಕಬಡ್ಡಿ ಬಾಬು' ಮತ್ತು ಸಿಸ್ಟರ್ಸ್ ಅನುಸೂಯ, ಶೈಲಾ!!

ಬಾಕ್ಸ್‌ನಲ್ಲಿ ಅನಾವರಣಗೊಳಿಸಿರುವ 'ಅಮೋಘ್' ಕಂಪನಿಯ ನಿರ್ದೇಶಕರ ಪಟ್ಟಿಯಲ್ಲೂ ಹಲವಾರು ಸೋಜಿಗಮಯ ಹೆಸರುಗಳಿವೆ...

ಕ್ರಮಸಂಖ್ಯೆ 3 ಮತ್ತು 4 ರಲ್ಲಿ 'ಬಿಸಿನೆಸ್ ವುಮನ್' ಎಂದು ಸೂಚಿಸಲ್ಪಟ್ಟಿರುವವರು ಕುಮಾರಸ್ವಾಮಿ ಸೋದರಿಯರಾದ ಶ್ರೀಮತಿ ಅನುಸೂಯಾ ಮಂಜುನಾಥ್ ಮತ್ತು ಶ್ರೀಮತಿ ಶೈಲಾ ಚಂದ್ರಶೇಖರ್‌ರವರು.

ಅಫ್‌ಕೋರ್ಸ್, ಕ್ರಮಸಂಖ್ಯೆ 5 ರಲ್ಲಿ ಕಂಪನಿಯ ಅಸಲಿ ಬಾಸ್, ಕುಮಾರಣ್ಣನವರ ಪತ್ನಿ ಅನಿತಾ ಕುಮಾರಸ್ವಾಮಿಯವರ ಹೆಸರೇ "ಬಿಸಿನೆಸ್ ವುಮನ್" ನಾಮಾಂಕಿತದಲ್ಲಿ ಕಂಗೊಳಿಸುತ್ತಿದೆ....

ಅಂತೂ ತೀರ ಇತ್ತೀಚೆಗೆ ಕುಮಾರಸ್ವಾಮಿ ಸಿ.ಎಂ. ಪದವಿಗೇರಿದ ನಂತರವೇ ಅಂದರೆ, ಮಾರ್ಚ್ 24, 2006 ರಂದಷ್ಟೇ ವೈಟ್‌ಫೀಲ್ಡಿನ RMZ ಪ್ರಾಪರ್ಟಿ ಖರೀದಿಯ 36 ಕೋಟಿ ರೂ. ವಹಿವಾಟಿನಲ್ಲಿ ಪಾರ್ಟ್‌ನರುಗಳಾದ ಗೌಡರ ಕುಟುಂಬದ ಮಹಿಳಾಮಣಿಗಳೆಲ್ಲರೂ ಸಹ 2004 ಮೇ 26 ರಿಂದಲೇ ಅಧಿಕೃತವಾಗಿ "ಬಿಸಿನೆಸ್ ವುಮನ್" ಪದವಿಗೇರಿದ ರೆಂದಾಯ್ತು ಅಲ್ಲವೆ...!

ಈ ಕುಟುಂಬ ಸದಸ್ಯರಿಗಿಂತಲೂ ಹೆಚ್ಚು ಪ್ರಸಿದ್ಧವಾದ ಹೆಸರು, ಆ ಪಟ್ಟಿಯಲ್ಲಿ ಕ್ರಮಸಂಖ್ಯೆ 11 ರಲ್ಲಿ ವಿಜೃಂಭಿಸಿರುವ ಎಂ.ವಿ.ಪ್ರಸಾದ್ ಬಾಬು ಸನ್ ಆಫ್ ಲೇಟ್ ಎಂ.ವಿ. ನಾಯ್ಡು ಎಂಬ ಮಹನೀಯರದ್ದು!



ಕಳೆದ ಒಂದು ದಶಕದಿಂದಲೂ ಕುಮಾರಸ್ವಾಮಿಯವರ ಪ್ರೊಫೆಷನಲ್ ಪಾಲಿಟಿಕ್ಸು ಮತ್ತು ಬಿಸಿನೆಸ್ ವ್ಯವಹಾರಗಳಲ್ಲಿ ಅವರ ಅತ್ಯಂತ ನಂಬಿಗಸ್ಥ ಬಲಗೈ ಬಂಟನೆಂದೇ ಗುರುತಿಸಲ್ಪಟ್ಟಿರುವ ಹಾಗು ಅವರು ಸಿ.ಎಂ. ಪಟ್ಟಕ್ಕೇರುವ ಗಳಿಗೆಯವರೆಗೂ ಕುಮಾರಣ್ಣನ ಅತ್ಯಂತ ಖಾಸಾ ಅಂಗರಕ್ಷಕನಂತೆಯೇ ಇದ್ದ ಈ ಪ್ರಸಾದ್ ಬಾಬುವಿನ ಜನಪ್ರಿಯ ನಾಮಧೇಯವೇನು ಗೊತ್ತಾ? "ಕಬಡ್ಡಿ ಬಾಬು"....

ಸದರಿ "ಕಬಡ್ಡಿ ಬಾಬು"ವೇ ಸುಪ್ರಸಿದ್ಧ ಪಿಇಎಸ್ ಕಾಲೇಜು ಸಮುಚ್ಚಯದ ಯಜಮಾನರಾದ ಪ್ರೊ. ದೊರೆಸ್ವಾಮಿ ನಾಯ್ಡುರವರ ಅಣ್ಣನ ಮಗ ಎಂಬ ಹೆಗ್ಗಳಿಕೆಯೂ ಉಂಟು....

ಆದರೆ ಬೆಂಗಳೂರು ಮಹಾನಗರದ ಸಮಕಾಲೀನ ಇತಿಹಾಸವನ್ನು ಕೊಂಚ ಹಿಂದಕ್ಕೆ ತಿರುವಿ ಹಾಕಿ ನೋಡಿದಲ್ಲಿ 'ಕಬಡ್ಡಿ ಬಾಬು'ವಿನ ಹೆಸರು ಸುಳಿದಾಡುವುದು 1980 ರ ದಶಕದಲ್ಲಿ ಇಲ್ಲಿನ ನಾಗರಿಕರನ್ನು ಬೆಚ್ಚಿ ಬೀಳಿಸಿದ್ದ 'ಚೈನ್ ಸ್ನ್ಯಾಚಿಂಗ್' ಪ್ರಕರಣದಲ್ಲಿ ಎಂಬುದು ಮಾತ್ರ ಕೊಂಚ ಆಘಾತಕಾರಿಯೇ....

ಇಂದಿರಾ ನಗರ, ಆಸ್ಟಿನ್ ಟೌನ್ ಮುಂತಾದ ಕಡೆ ರಸ್ತೆ ಮೇಲೆ ನಡೆಯುತ್ತಿದ್ದ ಅಮಾಯಕ ಮಹಿಳೆಯರ ಕತ್ತಿನ ಸರಗಳನ್ನು ಕಿತ್ತುಕೊಂಡು ಮೋಟರ್ ಬೈಕಿನಲ್ಲಿ ಪರಾರಿಯಾಗುತ್ತಿದ್ದ 'ನವಯುವಕರ' ತಂಡವನ್ನು ಬಹುಶಃ ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಅಶೋಕ್‌ಕುಮಾರ್‌ರೇ ಪತ್ತೆಹಚ್ಚಿ ಜೈಲಿಗಟ್ಟಿದ್ದರೆಂದು ನೆನಪು!

ಇರಲಿ, ಪೂರ್ವಾಶ್ರಮದ ಇತಿಹಾಸವೇನೇ ಇದ್ದರೂ ಪಾಪ, ಬಾಬು ಇವತ್ತು ಜಂಟಲ್‌ಮನ್ ಆಗಿ ಪರಿವರ್ತನೆಯಾಗಿದ್ದು, ಕುಮಾರಣ್ಣನವರ ಕೃಪಾಕಟಾಕ್ಷಕ್ಕೆ ಪಾತ್ರನಾದದ್ದೂ ಒಂದು ಪವಾಡವೇ ಇದ್ದೀತು...!!

ಇತ್ತೀಚಿನ ಕನಸು: ಕಸ್ತೂರಿ ಟೀವಿ

ಎರಡನೇ ಬಾಕ್ಸ್‌ನಲ್ಲಿ ಬಿಂಬಿಸಲ್ಪಟ್ಟ 'ಕಸ್ತೂರಿ

ಕುಮಾರ್ ಕಂಪನಿ 1

ಅಮೋಘ್ ಬ್ರಾಡ್‌ಬ್ಯಾಂಡ್ ಸರ್ವೀಸಸ್ ಪ್ರೈ. ಲಿ.

ರಿಜಿಸ್ಟ್ರೇಷನ್ ದಿನಾಂಕ 26.5.2004, ರಿಜಿಸ್ಟ್ರೇಷನ್ ನಂ: CIN U64202 KA 2004 , PTC 034006

ಡೈರೆಕ್ಟರ್‌ಗಳ ಮಂಡಲಿ

ಹೆಸರು	ತಂದೆ/ಗಂಡನ ಹೆಸರು	ವಯಸ್ಸು (ವರ್ಷಗಳು)	ವೃತ್ತಿ	ವಿಳಾಸ
1. ಎ.ಕೆ.ಎಂ. ಮೀಡಿಯಾ ಕನ್‌ಸಲ್ಟೆಂಟ್ಸ್- ಫಿರೋಜ್ ಘನಿ ಸೈಯ್ಯದ್	ಅಬ್ದುಲ್ ಘನಿ ಸೈಯ್ಯದ್	38	ಬಿಸಿನೆಸ್	1104/A 'ಇಟರ್ನಿಯಾ,' ಹಿರಾಂಬಿ ಸೊಸೈ, ಮುಂಬೈ -76
2. ಅರುಣ್ ಕೆ. ಮೋಹನ್	ಎಲ್.ಕೆ. ಮೋಹನ್	45	ಬಿಸಿನೆಸ್	B- 40, ಫಸ್ಟ್ ಫ್ಲೋರ್, ಗುಲ್‌ಮೊಹರ್ ಪಾರ್ಕ್ ನ್ಯೂ ಡೆಲ್ಲಿ -110049
3. ಅನುಸೂಯಾ ಮಂಜುನಾಥ್	W/o ಡಾ. ಸಿ.ಎನ್. ಮಂಜುನಾಥ್	44	ಬಿಸಿನೆಸ್ ವುಮನ್	281, 80 ಫೀಟ್ ರೋಡ್ ಪದ್ಮನಾಭನಗರ, ಬೆಂಗಳೂರು
4. ಶೈಲಾ ಚಂದ್ರಶೇಖರ್	W/o ಡಾ. ಎಚ್.ಎಸ್. ಚಂದ್ರಶೇಖರ್	39	ಬಿಸಿನೆಸ್ ವುಮನ್	281, 80 ಫೀಟ್ ರೋಡ್, ಪದ್ಮನಾಭನಗರ,ಬೆಂಗಳೂರು
5. ಅನಿತಾ ಕುಮಾರಸ್ವಾಮಿ	W/o ಎಚ್.ಡಿ. ಕುಮಾರಸ್ವಾಮಿ	-	ಬಿಸಿನೆಸ್ ವುಮನ್	ನಂ. 86, 3 ನೇ ಮೈನ್, I ಫೇಸ್, ಫಾರೆಸ್ಟ್ ರೋಡ್ ಜೆ.ಪಿ. ನಗರ, ಬೆಂಗಳೂರು -78
6. ಕೆ.ಎಸ್. ಪ್ರಸನ್ನಕುಮಾರ್	ಲೇಟ್ ಕೆ.ಎಸ್. ಶ್ರೀನಿವಾಸಮೂರ್ತಿ	45	ಬಿಸಿನೆಸ್	279, ಪದ್ಮನಾಭನಗರ, ಬೆಂಗಳೂರು
7. ಬಿ.ಎಚ್. ಸುಧಾ	W/o ಡಿ. ವೆಂಕಟೇಶ್	37	ಹೌಸ್‌ವೈಫ್	701, 11 ನೇ ಮೈನ್, 4 ನೇ ಕ್ರಾಸ್, ಪದ್ಮನಾಭನಗರ, ಬನಶಂಕರಿ, III ಸ್ಟೇಜ್, ಬೆಂಗಳೂರು -70
8. ಗಿರೀಶ್ ಅನಾನಿ ಜೋಗ್	ಅನಾನಿ ದತ್ತಾತ್ರೇಯ್ ಜೋಗ್	38	ಹೌಸ್‌ವೈಫ್	ನಂ. 10, ಮಧುರಾ ಕುಂಜ್ ಅಪಾರ್ಟ್‌ಮೆಂಟ್ಸ್, No. 126, LIC ಕಾಲನಿ, ಪೋಡ್‌ರೋಡ್, ಪುಣೆ
9. ಸುಜಾತಾ ಜವರೇಗೌಡ	W/o ಡಾ. ನಿತೀಶ್ ಜವರೇಗೌಡ	60		ಅಗ್ರಿಕಲ್ಚರ್ ಆಫೀಸ್ ಎದುರು ಹೊಳೆನರಸೀಪುರ ಹಾಸನ ಜಿಲ್ಲೆ
10. ಸೂರಿ ಗಿರೀಶ್	W/o ಗಿರೀಶ್ ಆನಂದ್	34	ಬಿಜಿನೆಸ್	ಡೋರ್ ನಂ. 9, 126, ನಿಯರ್ ಎಲ್‌ಐಸಿ ಕಾಲೋನಿ, ಪುಣೆ -411038
11. ಎಂ.ವಿ. ಪ್ರಸಾದ್ ಬಾಬು	S/o ಲೇಟ್ ಎಂ.ವಿ. ನಾಯ್ಡು	47		ನಂ. 15, ಸಾಯಿ ನಿಲಯ 5 ನೇ ಮೇನ್, ಸಿ.ಡಿ. ಕಾಲೋನಿ, ಎಸ್. ಪುರ ಮೇನ್ ರೋಡ್, ಬೆಂಗಳೂರು -560006

ಕುಮಾರ್ ಕಂಪನಿ 2

ಕಸ್ತೂರಿ ಮೀಡಿಯಾ ಪ್ರೈ. ಲಿ.

ರಿಜಿಸ್ಟ್ರೇಷನ್ ದಿನಾಂಕ 1.3.2005, ರಿಜಿಸ್ಟ್ರೇಷನ್ ನಂ: CIN UO 921 KA 2005 , PTC 035718

ಕಂಪನಿ ಸ್ಥಾಪನೆಯ ದಿನಾಂಕ: 18.2.2005

ನಿರ್ದೇಶಕರ ಮಂಡಲಿ

1. ಅನಿತಾ ಕುಮಾರಸ್ವಾಮಿ	W/o ಎಚ್.ಡಿ. ಕುಮಾರಸ್ವಾಮಿ	-	ಬಿಜಿನೆಸ್ ವುಮನ್	ನಂ. 86, 3 ನೇ ಮೈನ್, I ಫೇಸ್, ಫಾರೆಸ್ಟ್ ರೋಡ್ ಜೆ.ಪಿ. ನಗರ, ಬೆಂಗಳೂರು -78 ಇಕ್ವಿಟಿ ಶೇರುಗಳು-1000
2. ಎಚ್.ಡಿ. ಕುಮಾರಸ್ವಾಮಿ	S/o ಎಚ್.ಡಿ. ದೇವೇಗೌಡ	-	ಬಿಜಿನೆಸ್	ನಂ. 86, 3 ನೇ ಮೈನ್, I ಫೇಸ್, ಫಾರೆಸ್ಟ್ ರೋಡ್ ಜೆ.ಪಿ. ನಗರ, ಬೆಂಗಳೂರು -78 ಇಕ್ವಿಟಿ ಶೇರುಗಳು-1000

ಮೀಡಿಯಾ ಪ್ರೈ.ಲಿ' ಎಂಬ ಕಂಪನಿ ಮಾತ್ರ 'ಅಮೋಘ್'ನ ಒಂದು ವರ್ಷದ ಅನುಭವವನ್ನಾಧರಿಸಿ, ಅದರ ಯಶಸ್ಸಿನ ಅಲೆಯನ್ನೇರಿಕೊಂಡೇ ಸೃಷ್ಟಿಸಲಾದ ಕುಮಾರಣ್ಣನವರ ಅತ್ಯಂತ ಅಚ್ಚುಮೆಚ್ಚಿನ ಕನಸಿನ ಕೂಸು....

ಕರ್ನಾಟಕದಲ್ಲಿ ಹುಟ್ಟಾ ಕನ್ನಡಿಗರೇ ಆದ 'ಮುಗ್ಧನ ಮಕ್ಕಳೇ' ಒಂದು ಕನ್ನಡ ಟಿವಿ ಚಾನೆಲ್ಲನ್ನು ಸ್ವತಂತ್ರವಾಗಿ ಸ್ಥಾಪಿಸ ಲಾಗಲಿಲ್ಲವೆಂಬ ಕೊರತೆಯನ್ನು ತುಂಬ ಲೆಂದೇ ಕಳೆದ ವರ್ಷದ ಮಾರ್ಚ್ 1 ರಂದು ಈ 'ಕಸ್ತೂರಿ ಮೀಡಿಯಾ' ಕಂಪನಿ ಯನ್ನು ರಿಜಿಸ್ಟ್ರಾರ್ ಕಚೇರಿಯಲ್ಲಿ ನೊಂದಣಿ ಮಾಡಿಸಿದರು ಕುಮಾರಸ್ವಾಮಿ.

ಬಿಸಿನೆಸ್ ವುಮನ್ ಅನಿತಾ ಕುಮಾರಸ್ವಾಮಿ ಕಸ್ತೂರಿ ಮೀಡಿಯಾದ ಡೈರೆಕ್ಟರ್ ಆದದ್ದು

Anitha Kumaraswamy

Signature

SMT ANITHA KUMARASWAMY
(Director)

Designation

ಕೇವಲ ತಮ್ಮ ಧರ್ಮಪತ್ನಿ ಹಾಗು ಇಂಜಿನಿಯರಿಂಗ್ ಪದವೀಧರೆ ಶ್ರೀಮತಿ ಅನಿತಾ ಮತ್ತು ಕುಮಾರಸ್ವಾಮಿ ದಂಪತಿಗಳು ಮಾತ್ರವೇ ನಿರ್ದೇಶಕರುಗಳಾಗಿರುವ ಈ ಕಂಪನಿಯಲ್ಲಿ ಇಬ್ಬರಿಗೂ ತಲಾ 1 ಸಾವಿರ ಇಕ್ವಿಟಿ ಶೇರುಗಳಿವೆ ಎಂದು ನಮೂದಿಸಲಾಗಿದೆ....

ಆದರೆ ಕಂಪನಿ ರಿಜಿಸ್ಟ್ರಾರ್ ದಾಖಲೆಗಳಲ್ಲಿ ನಮೂದಿಸಿಲ್ಲದ ಒಂದು ವಹಿವಾಟು ಮಾತ್ರ ಅತ್ಯಂತ ಪ್ರಬಲವಾದ ವದಂತಿಯಾಗಿ ಸುಳಿದಾಡುತ್ತಿದೆ। ಅದೇನೆಂದರೆ, 'ಕಸ್ತೂರಿ ಮೀಡಿಯಾ' ಕಂಪನಿ ಅಸ್ತಿತ್ವಕ್ಕೆ ಬಂದ ನಂತರ ಅದರ ಬ್ಯಾಂಕ್ ಖಾತೆಗೆ ಯಾರೋ ಒಬ್ಬ 'ಹಿತೈಷಿ'ಗಳಿಂದ 6 ಕೋಟಿ ರೂಪಾಯಿಗಳಷ್ಟು ಹಣ ಇನ್‌ವೆಸ್ಟ್‌ಮೆಂಟ್ ಅರ್ಥಾತ್ ಬೀಜಧನದ ರೂಪದಲ್ಲಿ ಸಂದಾಯವಾಯಿತಂತೆ!!

ಈ ಗಾಳಿಮಾತು ನಿಜವೇ ಇದ್ದಲ್ಲಿ ಅಂತಹ ಹಿತೈಷಿಯಾದರೂ ಯಾರು? ಅವರ ನಿಜ ನಾಮವೇನು? ಅವರ ವ್ಯಾಪಾರಿ ಹಿನ್ನೆಲೆಯಾದರೂ ಏನು? ಮುಂತಾದ ಪ್ರಶ್ನೆಗಳಿಗೆ ಸ್ವತಃ ಕುಮಾರಣ್ಣನವರೇ ಉತ್ತರಿಸಿದರೂ ಸಾಕು... ಅವರ ಸತ್ಯನಿಷ್ಠತೆ ಸ್ಪಷ್ಟವಾದೀತು....

"ಮಾಡು ಇಲ್ಲವೇ ಮಡಿ"

ಕುಮಾರಸ್ವಾಮಿಯವರೇ ಪವರ್ ಪಾಲಿಟಿಕ್ಸ್ ಮತ್ತು ಬಿಸಿನೆಸ್ ಪ್ರಾಫಿಟ್ಸ್ ಇವೆರಡನ್ನೂ ಒಟ್ಟೊಟ್ಟಿಗೆಯೇ ಅನುಭವಿಸಲು ಹೊರಟರೆ ಎದುರಾಗುವ ಜಂಜಾಟವೇ ಇದು.

ಸಾರ್ವಜನಿಕ ಬದುಕಿನ ದ್ವಂದ್ವವೇ ಇದು... ಹಾಗೆಯೇ ನಾವು ರಾಜ್ಯಾಂಗದತ್ತವಾಗಿ ಅವಳಡಿಸಿಕೊಂಡಿರುವ ಡೆಮಾಕ್ರಸಿ ಎಂಬ ರಾಜಕೀಯ ವ್ಯವಸ್ಥೆಯ ಸೊಬಗೇ ಇಂತಹದ್ದು.... (Beauty of Democracy).

ಅಧಿಕಾರ ಪೀಠವೇರಲು ಬಯಸುವವರಿಂದ ನಮ್ಮ ಪ್ರಜಾತಂತ್ರ ವ್ಯವಸ್ಥೆ ಅಪೇಕ್ಷಿಸುವ ಬಹುಮುಖ್ಯ ಕೊಡುಗೆಯೆ ಅವರ ಖಾಸಗಿ ಬದುಕಿನ ಸುಖ, ಭೋಗ, ಲಾಭದಾಸೆಗಳ ತ್ಯಾಗ!!

ಆದರೆ ಬಿಡಿ, ನಿಮ್ಮ ಅಪ್ಪಾಜಿಯವರು ಪಾರ್ಟಿ ವೇದಿಕೆಯಿಂದಲೇ ಸಾರಿಬಿಟ್ಟಿದ್ದಾರಲ್ಲವೇ: "ಸರ್ಕಾರವೇ ಬೇರೆ, ಪಾರ್ಟಿ ಬೇರೆ" ಅಂತ. ಅದ್ದರಿಂದ ಕುಮಾರಣ್ಣನವರೇ.... ನಿಮ್ಮದೇನಿದ್ದರೂ ಸರ್ಕಾರ ಹಾಸೇ.... ಅಲ್ಲಿ ಇನ್ನೂ ತಮ್ಮ 14 ತಿಂಗಳ ಬಾಕಿ ಅವಧಿಯುದ್ದಕ್ಕೂ ಸುಖವಾಗಿ party ಮಾಡುತ್ತ ಸುಖವಾಗಿರಿ....

ನಿಮ್ಮ ಪಾರ್ಟಿಯ ಕಾರ್ಯಕರ್ತರುಗಳೂ ಮತ್ತು ಅಭಿಮಾನಿಗಳೂ ತಮ್ಮ ಅಪ್ಪಾಜಿಯವರ 'ತೀರ್ಥಯಾತ್ರೆ' ಯನ್ನು ಹಿಂಬಾಲಿಸುತ್ತಾ 'ಮಾಡು ಇಲ್ಲವೇ ಮಡಿ' ಎಂದು ಘೋಷಣೆ ಕೂಗುತ್ತ ಕೃತಾರ್ಥರಾಗಲಿ..... ಬಿಡಿ!!


ಗಣಿಯಿಂದ, ಭಾಪಾಗೆ: ಐಬಿಎ ಟೈಮಿಂಗ್

ಈ ಕಡೆಯಿಂದ ಗಣಿಭೂತ ಮುಖ್ಯಮಂತ್ರಿ ಕುಮಾರಸ್ವಾಮಿಯ ಹೆಗಲೇರುತ್ತಿದ್ದಂತೆ, ಮರದಲ್ಲಿ ನೇತಾಡುತ್ತಿದ್ದ ತೆಲಗಿಯ ಛಾಪಾ ಕಾಗದದ ಬೇತಾಳ ಕಾಂಗ್ರೆಸ್ ಮುಖಂಡರ ಬೆನ್ನು ಬಿದ್ದಿದೆ. ಆದರೆ ಇದರ ಹಿಂದಿರುವ ಗಣಿತದ - x -- = + ಫಾರ್ಮುಲಾದ ಪ್ರಕಾರ ಯೋಚಿಸಿದರೆ ಇದೊಂದು ಸಮಯೋಚಿತ ತಂತ್ರ ಎಂಬ ಅನುಮಾನ ಮೂಡುತ್ತದೆ.

ಕಳೆದ ವರ್ಷ ಸಿಎನ್‌ಎನ್ ಐಬಿಎನ್ (ಇಂಡಿಯಾ ಬಿಸಿನೆಸ್ ನ್ಯೂಸ್) ಚಾನೆಲ್‌ನ ಉದ್ಘಾಟನಾ ಕಾರ್ಯಕ್ರಮ ಒಂದು ಬೆಂಗಳೂರಿನಲ್ಲಿ ನಡೆಯಿತು. ಐ.ಬಿ.ಎನ್. ಮುಖ್ಯಸ್ಥ ರಾಜ್‌ದೀಪ್ ಸರ್‌ದೇಸಾಯಿ ಮತ್ತು ಮುಖ್ಯಮಂತ್ರಿ ಕುಮಾರಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ತಮ್ಮ ಉದ್ದೇಶಿತ 'ಕನ್ನಡ ಕಸ್ತೂರಿ' ಟಿವಿ ಚಾನೆಲ್‌ನೊಂದಿಗೆ ಐಬಿಎನ್ ಏಕೆ ಹೊಂದಾಣಿಕೆ ಮಾಡಿಕೊಳ್ಳಬಾರದೆಂಬ ಪ್ರಶ್ನೆಯನ್ನು ಕುಮಾರಸ್ವಾಮಿ, ರಾಜ್‌ದೀಪ್‌ರವರ ಸೀನಿಯರ್ ಮುಂದಿಟ್ಟರು. ದಕ್ಷಿಣ ಭಾರತದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿಸಲು ಯತ್ನಿಸುತ್ತಿರುವ CNN-IBN ಈ ಪ್ರಸ್ತಾವನೆಗೆ ಒಪ್ಪಿಗೆ ನೀಡಿತು. ನಂತರ ಕುಮಾರಸ್ವಾಮಿಯವರೊಂದಿಗೆ ದೀರ್ಘ ಚರ್ಚೆ ಕೂಡ ನಡೆಯಿತು.

ಆದರೆ ಏಕಾಏಕಿ ತೆಲಗಿ ಮತ್ತವನ ಮಾಜಿ ವಕೀಲನ ನಡುವೆ ನಡೆದ ಸಂಭಾಷಣೆಯನ್ನು ಪ್ರಸಾರ ಮಾಡುವುದರ ಮೂಲಕ ಸಿಎನ್‌ಎನ್ ಐಬಿಎನ್ ಟೆಲಿವಿಷನ್ ಕಾಂಗ್ರೆಸ್ ವಲಯದಲ್ಲಿ ಚಳಿಜ್ವರ ಹುಟ್ಟು ಹಾಕಿತು. ತೆಲಗಿ ಎಪಿಸೋಡ್‌ನಲ್ಲಿ ಕಾಂಗ್ರೆಸ್ಸಿಗರೂ ಭಾಗಿಗಳಾಗಿರುವುದರಲ್ಲಿ ಸಂದೇಹವಿಲ್ಲ. ಆದರೆ ಗಣಿ ವಿವಾದ ಹತ್ತಿಕೊಂಡು ಉರಿಯುತ್ತಿರುವಾಗ ಇದಕ್ಕಿದ್ದಂತೆ ತೆಲಗಿಯ 'ಭೂತವನ್ನು' ಮೂಡಿಸಿ ಜನತೆಯ ಗಮನವನ್ನು ಬೇರೆಡೆಗೆ ತಿರುಗಿಸುವ ಈ 'ಟೈಮಿಂಗ್' ಹಿಂದೆ CNN-IBN ಮತ್ತು ಕುಮಾರ ಸ್ವಾಮಿಯ ಕಳೆದ ವರ್ಷದ ಒಪ್ಪಂದವೇನಾದರು ಉಪಯೋಗಕ್ಕೆ ಬಂದಿದಿಯೇ?

ನಾನು ಗೌಡ್ರು ಮಗಾಗಿದ್ರೆ ಅಬ್ಕಾರಿ ಮಂತ್ರಿಯಾಗಿ ಮೆರಿತಿದ್ದೆ ಕಣಕ್ಕ!



ಕೌಳಮಾವ ಎಲ್ಲವನ್ನು ಮರೆತು ಜುಮ್ಮಿಯ ಜೊತೆ ಭಂಗ ಮಾತನಾಡುತ್ತ ಕುಳಿತಿದ್ದ. ಅದೇ ಯಾಕೋ ತುಂಬ ಹಿತವಾಗಿ ಕಾಣುತ್ತಿತ್ತು.

"ನಿಮ್ಮ ಗಣೇಸನ ಮಗಳ ಯಾವೂರಿಕ್ಕೊಟ್ಟುಲೆ ಜುಮ್ಮಿ?"

"ನೀಲಗಿರಿಕ್ಕೊಟ್ಟುಂತೆ ಕಣಮಾವ. ಅವು ಬಾಯಿಗೆ ಮಣ್ಣಾಕ. ಮದಿವಿಗೆ ಬಂದವು ಒಂದಾರ ಕನಡದಲ್ಲಿ ಮತಾಡುತಿದ್ರೆ, ಬರೀ ತಮುಳು ಮಾತಾಡವುಕಣ ಮಾವ."

"ಅಂಗರೀವುದುಗಿ ಕತೆ ಹೇಳೂ?"

"ಏ, ಅವುರಮನಿಯೋರು ಕನಡದಲ್ಲೂ ಮಾತಾಡ್ತರೆ. ಇಲ್ಲೆ ನರುಗಲೋರಲವೆ. ಯಾವಾಗ್ಲೊ ಹೋಗಿ ಊಟ ಸೇರಿಕಂಡಿದ್ರೊ. ಆದ್ರು ಏನಂಗೆ ತಮುಳ್ರು ತಿಗದಲ್ಲಿ ಕಸುಗಂಡು ಬದ್ಕೋರಂಗೆ ಲಳಿ ಲಳಿ ಅಂತ ತಮುಳನೆ ಉಚ್ಚುತಿದ್ರೊ. ಅವು ಮನಿ ಮಾರತ್ತ."

"ಮದ್ಲೆ ಕನ್ನಡದವು ತಗಲು ಗ್ಯಾಪಾಳದವಲವೆ. ನನಿಗೆ ಬ್ಯಾರೆ ಮಾತೂ ಬತ್ತವೆ ಅನ್ನದ ತೋರಸಕ್ಕೆ ಅಂಗಾಡತವೆ" ಎಂದ ಕಾಳಮಾವ.

"ಉಗಿಬೇಕಾಗಿತ್ತು ಕಣೆ ನೀನು, ಕನ್ನಡ ಬಂದ್ರು ತಮುಳಲ್ಯಾಕೆ ಮಾತಾಡ್ತಿರಿ ಅಂತವಾ?" ಎಂದ ಉಗ್ರಿ.

"ಮನಿಗೆ ಬಂದ ನಂಟ್ರಿಗೆ ಅಂಗನ್ನಕ್ಕಾದತ್ಲ? ಅದ್ರಲ್ಲು ಹುಡುಗನ ತಾಯಿ ನಮ್ಮ ಜಯ್ಯಕ್ಕ ದ್ವಡಪ್ಪನ ಮಗಳು. ಗಂಡ ಕುಡಕಂಡು ತಿರುಗ್ತನಂತೆ. ಇವುಳು ಹಸ ಕಟಗಂಡು ಹಾಲು ಮಾರಿಕಂಡು ಮಕ್ಕಳ ಬ್ಯಳಸಿದ್ಲು. ಈಗ ಮೂರುದ್ರು ಕೈಯಿಗೆ ಬಂದವೆ. ಮದುಲ್ನೆ ಹುಡುಗನಿಗೆ ಇಲ್ಲಿಂದ ಹೆಣ್ಣು ತಂದ್ರು."

"ಹುಡುಗೇನು ಮಾಡ್ತ ಅವುನೆ?"

"ಹುಡುಗ ಊಟಲಿಲ್ಲ, ಬೆಂಗಳೂರಲ್ಲಿದ್ದನಂತೆ, ಬೋರಿಂಗ್ ಬಾವಿ ಮಡಿಕಂಡು ನೀರು ಮಾರ್ತನಂತೆ."

"ನೀರನೂ ಮಾರ್ತರೇನ್ಲೆ?" ಎಂದು ಕಾಳಮಾವ ಅಚ್ಚರಿಗೊಂಡ.

"ಓ ನೀರಿನ ಬಾಟ್ಲಿ ರೇಟು ಕೇಳಿದ್ದಿಯಾ ನೀನು? ಹತ್ತು ರೂಪಾಯಿಂದ ಹಿಡುದು ಹದುನೈದು ರೂಪಾಯಿ ಗಂಟ ನ್ಯಡಿತಾ ಅದೆ ಕಣಮಾವ. ಅಂಗೆ ನೋಡಿದ್ರೆ ಹಾಲು, ಯಳ ನೀರೆ ಅಗ್ಗವಾಗಿ ಸಿಗತಾಯಿರದು" ಎಂದು ಜುಮ್ಮಿ ವಿಷಾದ ನಗೆ ನಕ್ಕಳು.

"ಅಂಗರೆ ನೀರನೂ ಮಾರೊ ಕಾಲ ಬಂದೇ ಬುಡ್ತ?"

"ಅಯ್ಯೋ ಅದು ಬಂದ್ಯಾವ ಕಾಲಾಯ್ತು ತಗೊ" ಎಂದು ಜುಮ್ಮಿ ಮದುವೆ ಮನೆ ಎಲೆಯನ್ನು ಕಾಳಮಾವನ ಮುಂದಿಡಿದಳು. ಎಲೆ ಬೆನ್ನಿಗೆ ಸುಣ್ಣ ಹಚ್ಚಿದ ಕಾಳಮಾವ ಅಡಿಕೆಯೊಂದಿಗೆ ಬಾಯಿಗಿಡುತ್ತಾ,

"ಆ ನಿಮ್ಮ ಸಣ್ಣ ನಂಜನೂ ನೀಲಗಿರಿಲೆ ಅಲವೆ ಇರದು?" ಎಂದ.

"ಅವುನಾಗಲೆ ಸತ್ತು ಭಾಳ ದಿನಾಯ್ತು ಕಣಮಾವ, ಮೂರೆಣ್ಣಿದ್ದೊ ಅವುನಿಗೆ. ಅವನು ಸತ್ತ ಮ್ಯಾಲೆ ಯಾರ್‍ಯಾರೊ ಮದಿವಾದ್ರು. ಗಂಡು ಮಕ್ಕಳು ಬಂದು ಬೆಂಗಳೂರು ಸೇರಿಕಂಡು ಬದುಕ್ತ ಅವಂತೆ."

"ಯಂಗೊ ಬದಿಕ್ಕಳ್ಳಿ ಬುಡು. ಆರು ಮಕ್ಕಳ ಬಾಣಂತನಕ್ಕೆ ಅಂತ ಮುಂಡೆ ಮಗ ಹಿರಿಸಾಯಿತ್ತಯಿದ್ದ. ಜಮೀನ್ನಲ್ಲ ಮಾರಿ, ಕಡಿಗೆ ಹೆಂಡತಿ ಮಕ್ಕಳ ಕಟಗಂಡು ನೀಲಗಿರಿಗೋಗಿದ್ದ ಅವನು."

"ಈಗ ನೀಲಗಿರಿಲ್ಯಾರು ಇರದಿಲ್ಲ, ಯಲ್ಲಾ ಬೆಂಗಳೂರಿಗೆ ಬತ್ತಾ ಅವುರೆ ಕಣಮಾವ" ಎಂದ ಉಗ್ರಿ. ಅಷ್ಟರಲ್ಲಿ ಕೆಟ್ಟ ಸುದ್ದಿ ಹೊತ್ತ ಮುಖಭಾವದಲ್ಲಿ ಬಂದ ಸೀರ,

"ಪುಡಸಾಮಿಗೌಡ ತೀರೋದನಂತೆ ಕಂಡ್ರೊ" ಎಂದ. ಗಧಗಾತರಿಸಿದ ಜುಮ್ಮಿ ರೋಧನದ ದನಿಯಲ್ಲಿ

"ಅಯ್ಯೋ ಏನಾಗಿತ್ತು ಮಾವ. ವತ್ತರೆಲೆ ಇಲ್ಯಾಸಿ ಹೋದದ್ದು ನಾನೆ ನೋಡಿದೆ ಕಣಮಾವ" ಎಂದಳು.

"ಸಾವ ಏನು ಅಂತ ತಿಳಕಂಡಿದ್ದಿಲೆ ನೀನು? ಯಾವಾಗ್ಲು ನಮ್ಮ ಬೆನ್ನಿಂದಲೆ ಇರತದೆ, ಯಾವಾಗಾದ್ರು ಸಾಯಬವುದು. ಯಂತದೊ ಒಂದು ನ್ಯವುಕೆ ಕಾಯ್ತದೆ" ಎಂದ ಕಾಳಮಾವ.

"ಆಪ್ಸೆಂಟಾಯ್ತೆನೊ ಮಾವ?"

"ಆಪಸೆಂಟಾಗಕ್ಕೆ ಅವುನೇನು ಕೂಟ್ರೊಡುಸ್ತಿದ್ನೆ?"

"ಏ ಇದೇನೊ ಮಾವ ಹಿಂಗಂತಿ. ಬುಲೆಟ್ ಮಡಿಕಂಡು ಯಾವಾಗ್ಲು ಅದರಲ್ಲೇ ಓಡಾಡ್ತನೆ ಗೊತ್ತೆ?"

"ಓ ನೀನೇಳದು ಎಲ್ಐಸಿ ಪುಡಸಾಮಿಗೌಡ ಕಣೆ. ಸೀರಮಾವ ಹೇಳತಾಯಿರದು ವಳೆನರಸೀ ಪುರದ ಪುಟ್ಟಸ್ವಾಮಿಗೌಡನ ಸುದ್ದಿ."

"ಅಂಗರೋಗೆ ಬುಟ್ನೆ ಪುಡಸಾಮಿಗೌಡ" ಎಂದು ಕಾಳಮಾವ ಉದ್ಗಾರ ತೆಗೆದ.

"ಊ ಕಣ ಮಾವ, ಆಗ್ಲೆ ಯಪ್ಪತ್ತು ಮೂರೊರ್ಸಾಗಿತ್ತು, ಕುಡಿತಿದ್ದನೇನೊ. ಇನ್ನೇಟು ದಿನಿದ್ದನೂ?" ಎಂದ ಉಗ್ರಿ.

"ಏ ಅವುನಿಗಿಂತ ಹಿರಿಯೋನು ದ್ಯಾವೇಗೌಡಿಲವೇನ್ಲ ಯಾರೊ ಮಾಡಿಸಿದ್ದರಂತೆ" ಎಂದು ಸೀರ ಮಾರ್ಮಿಕವಾಗಿ ಕಣ್ಣುಬಿಟ್ಟ.

"ಮಾಡಸದಾದ್ರೆ ಇನ್ಯಾರು ಮಾಡಿಸ್ಯರೂ?" ಎಂದಳು ಜಮ್ಮಿ.

"ದ್ಯಾವೇಗೌಡನ ಅದೃಷ್ಟವೇ ಅದೃಷ್ಟ ಕಣಯ್ಯ. ಅವುನಿಗಾಗದೋರ್‍ಯಲ್ಲ ವಳ್ಳೆ ಟೈಮಿನಲ್ಲಿ ಹಿಂಗೇ ಹೋದರಲ್ಲ ಹೇಳು" ಎಂದ ಉಗ್ರಿ.

"ಆಯಿಸು ಮುಗುದು ಸತ್ತುದುಕೂ, ದ್ಯಾವೇಗೌಡನಿಗೂ ಏನ್ಲ ಸಮಂದ?" ಎಂದ ಕಾಳಮಾವ.

"ಆಯಸು ಮುಗದಾರ ಸಾಯಲಿ, ಮಾಟದಿಂದಾರ ಸಾಯಲಿ. ಆದಲ್ಲ ಕಣಮಾವ, ಯಾರ್‍ಯಾರು ದ್ಯಾವೇಗೌಡನಿಗೆ ಎದುರು ನಿಂತರೋ ಅವುರ್‍ಯಲ್ಲ ಯುದ್ಧ ಮಾಡದಕೂ ಮದ್ಲೆ ಗ್ವಾತ ಯಸ್ತರಲ್ಲ ಹೇಳು?"

"ಗಂಡು ಅಂದ್ರೆ ಪುಡಸಾಮಿ ಕಂಡ್ಯ, ಯರಡಸತಿ ದ್ಯಾವೇಗೌಡುನ್ನ ಸೋಲ್ಸಿ ಒಂದು ಸತಿ ಅವುನ ಮಗುನ್ನ ಕೆಡಗಿ ಹಾಸನದಲ್ಲಿ ಧೀರ ಅನ್ನಿಸಿಗಂಡಿದ್ದ" ಎಂದು ಸೀರ ಕೊಂಡಾಡಿದ.


"ಆಗ ದ್ಯಾವೇಗೌಡ ವೀರೇಂದ್ರ ಪಾಟೀಲ್ರಿಗೆ ಕೈ ಕೊಟ್ಟಿದ್ದೆ, ಪಾಟೀಲ್ರು ಸರಿಯಾಗಿ ಸೇಡು ತೀರಿಸಿಗಂಡಿದ್ರು."

"ಅದ್ಯಾವ ತರ ಸೇಡು ತೀರಿಸಿಗಂಡಿದ್ರುಲಾ?" ಎಂದಳು ಜುಮ್ಮಿ.

"ಆಗ ದ್ಯಾವೇಗೌಡ ಯಗಡೆ ಕಾಲ್ದಲ್ಲಿ ಪಿಡಬ್ಲ್ಯೂಡಿ ಮಿನಿಸ್ಟ್ರಾಗಿದ್ದ. ಆಗ ನ್ಯಡದ ಯಲಕ್ಸನ್ನಲ್ಲಿ ಸೋತು ಪುಡಸಾಮಿ ಗೌಡ ಗೆದ್ದು, ವೀರೇಂದ್ರ ಪಾಟೀಲ್ರು ಮುಖ್ಯಮಂತ್ರಿಯಾಗಿದ್ರು. ಆಗೇನು ಮಾಡಿದ್ರು ಅಂದ್ರೆ, ದ್ಯಾವೇಗೌಡ ನಿಭಾಯಿಸಿದ್ದ ಖಾತೆನೆ ಪುಡಸ್ವಾಮಿಗೌಡನಿಗೆ ಕೊಟ್ಟು ಅದೇ ಬಂಗ್ಲೆ ಅಲಾಟ್ ಮಾಡಿದ್ದ. ಅದೊಂದು ಟೇಮಲ್ಲಿ ದ್ಯಾವೇಗೌಡನ ಕತೆನೆ ಮುಗಿತು ಅನ್ನಕಂಡಿದ್ರು. ಆದ್ರೆ ಜನ ಕೈ ಬುಡ್ಲಿಲ್ಲ, ತಿರಗ ಗೆದ್ದು ಬಂದು ಪ್ರಧಾನಿನೂ ಆಗ್ಹೋದ ಅತ್ತಗೆ."

"ಅಂಗರೀಗ ವಳೆ ನರಸಿಪುರದಲ್ಲಿ ದ್ಯಾವೇಗೌಡನೆದ್ರಿಗೆ ಯಾರೂ ಇಲ್ದಂಗಾಯ್ತು?" ಎಂದ ಸೀರ.

"ಅಂಗನ್ನಕ್ಕೋಗಬ್ಯಾಡ ಚಿಗಪ್ಪ, ಅಲ್ಲಾಗ್ಲೆ ಮರಿ ಪುಟಸಾಮಿಗಳು ಹುಟ್ಟಿಗಂಡ್ರು ಅಂತ ತಿಳಕೊ" ಎಂದುಕೊಂಡು ವಾಟಿಸ್ಸೆ ಹಾಜರಾದ.



"ಮೂರು ದಿನಾಯ್ತಲ್ಲ ನಿನ್ನ ಮಕ ನೋಡಿ, ಎಲ್ಲಿಗೋಗಿದ್ದ?"

"ಎಲ್ಲಿಗೊ ಹೋಗಿದ್ದೆ ಕಣಕ್ಕ ನಿನ್ನತ್ರ ಕೂತಿದ್ರೆ ಜೀವನ ನ್ಯಡಿಬೇಕಲ್ಲ."

"ಇವುಳತ್ರ ಇರದಕಿಂತ ನೀನು ದ್ಯಾವೇಗೌಡನ ಸ್ವಸೆ ಅತ್ರ ಇದ್ರೆ ವಳ್ಳೆ ಲಕ್ಕಿತ್ತು ಕಣೊ ವಾಟಿಸ್ಸೆ" ಎಂದ ಉಗ್ರಿ.

"ಅದೇನಪ್ಪ ಅಂತ ಲಕ್ಕು?"

"ದ್ಯಾವೇಗೌಡನ ಸ್ವಸೆ ಕವಿತಾ ಅಂತ ಅವುಳಲ್ಲ, ಅವುಳು ಬ್ರಹ್ಮಾಪುರದತ್ರ ಜಮೀನು ತಗಂಡಿದ್ಲಂತೆ. ಅದು ಈ ಪೇಪ್ರಿನೋರಿಗ್ಯಲ್ಲ ಗೊತ್ತಾಗಿ ಹೆದ್ರಿಕಂಡು, ಜ್ವತೆಲಿದ್ದೋರೆಸರಿಗೆ ಬರದುಬುಟ್ಟಂತೆ. ನೀನೇನಾರ ಅವುಳತ್ರ ಇದ್ರೆ ನಿನಿಗೇ ಸಿಗದು ಕಣೊ ಅದು."

"ಅದ್ಯಂಗೇಳ್ತಿಯಪ್ಪ ನನಿಗೇ ಸಿಗದು ಅಂತ?"

"ಅರ್ಜೆಂಟಿಗೆ ಅಲ್ಲೊಬ್ಬನೆಸರಿಗೆ ಬರಿಬೇಕಾಗಿತ್ತು, ಬರದ್ಲು, ಆಗ ನೀನಿದ್ರೆ ಅಂತ ಅಂಗಂದೆ."

"ನೋಡೊ ಉಗ್ರಿ, ಈ ಮಣ್ಣಿನ ಮಗನ ಮಕ್ಕಳು ಮಾಡಿರೋ ಮಣ್ಣುಗುಡ್ಡೆ ಬುಟ್ಟು, ಮಣ್ಣಾಗಿ ಹೋಗದ ನಾನ್ನೋಡದಿಲವೇನೊ? ಇವತ್ತು ಅರಸು ಕುಟುಂಬ ಏನಾಗ್ಯದೊ. ನೀನು ಆಸ್ತಿ ಕೊಳ್ಳತಾ ಹೋದ್ರೆ, ಮಾರತಾ ಹೋಗೋನು ವಬ್ಬ ಬಂದೇ ಬತ್ತನೆ. ಅದನ್ನ ಈ ಸಾಯಿಲ್ ಬಡ್ಡೆತ್ತವು ತಿಳಕಬೇಕು. ಯಾವತ್ನು ಮನ್ಸ ತನಿಗೆ ಎಷ್ಟು ಜಮೀನು ಬೇಕೊ ಅಷ್ಟನ್ನೆ ಇಟಗಬೇಕು ಕಣೊ."

"ಅದು ರೈತನ ಮಾತಾಯ್ತು ಕಣೊ, ಮಾರೋರಿಗೆ ಎಷ್ಟು ಜಮೀನಾದ್ರು ಇರಬವುದಲವೆ?"

"ಅದು ಸರಿಬುಡು, ಅಂತು ದ್ಯಾವೇಗೌಡನ ಇಡೀ ಕುಟುಂಬ ರಿಯಲ್ ಎಸ್ಟೇಟು, ಗಣಿ ವ್ಯವಾರ, ಟ್ರಾನ್ಸ್‌ಫರ್ ಧಂದೆವಳಗೆ ಮುಳುಗೋಗ್ಯದೆ ಅಂದಂಗಾಯ್ತು."

"ಯಲ್ಲಾರದೂ ಈಚೆಗೆ ಬತ್ತಾ ಅದೆ. ಚನ್ನಮ್ಮೇನು ಮಾಡ್ತಯಿದ್ದಳ್ಳ?" ಎಂದು ಜುಮ್ಮಿ ವ್ಯಂಗ್ಯವಾಗಿ ನಕ್ಕಳು.

"ಆ ಯಮ್ಮನೂ ಏನ್ನಾರ ಮಾಡ್ತಯಿರತದೆ. ಹೂಕಟ್ಟದು, ಬತ್ತಿವಸೆಯದು, ಹುಣಸೆಬೀಜ ಚಚ್ಚಿ ಮಾರದು ಹಿಂಗೆ... ಯಾವುದಾದ್ರು ಜಾಬ್ ಮಾಡ್ತಯಿರಬೇಕು ಕಣಕ್ಕ."

"ಆಹಹ, ಹುಣಸೆಬೀಜ ಚಚ್ಚಕ್ಕೋದಳೇನ್ಲ ಆಡಿಕಳಕ್ಕೂ ಒಂದಿದು ಬೇಕು."

"ನೋಡಕ್ಕ, ರೈತಾಪಿ ಹೆಣ್ಣುಮಕ್ಕಳು ಸಿರಿ ಬತ್ತು ಅಂತ ಯಾವತ್ತೂ ಸುಮ್ಮನೆ ಕುಂತೋರಲ್ಲ, ಏನ್ನಾರ ಮಾಡ್ತಯಿರತರೆ. ಪರೆಗ್‌ಜಾಂಪಲ್ ನೀನು ಪಂಚಾತಿ ಮೆಂಬ್ರಾದೆ ಅಂತ ಕೋಳಿ ಸಾಕದ ಬುಟ್ಟಿದ್ದಿಯಾ? ಯಮ್ಮೆ ಹಾಲು ಕರಿಯದ ಬುಟ್ಟಿದ್ದಿಯಾ. ಸಂತಿಗೆ ತಂಗಡೋಗಿ ಕೋಳಿ ಮಟ್ಟೆ ಮಾರಿ ಕಡ್ಡಿಪುಡಿ ತರದ ನಿಲ್ಸದ್ದಿಯಾ? ಕಮಾನ್ ಟೆಲ್ ಮಿ."

"ಥೂ ಅನ್ನೆಕಾರ ನನ್ನ ಮಗನೆ, ನಾನ್ಯಾವತ್ತು ಕೋಳಿಮಟ್ಟೆ ಮಾರಿ ಕಡ್ಡಿಪುಡಿ ತಂದಿಲ್ಲ, ಹಾಯ್ಕಂಡೂ ಇಲ್ಲ, ಅನ್ಯಾಯದ ಮಾತಾಡಬ್ಯಾಡ."

"ಅಂಗೆ ಚನ್ನಮ್ಮನ ಮ್ಯಾಲೂ ಅನ್ಯಾಯದ ಮಾತಾಡಬಾರ್ದು ಕಣಕ್ಕ. ನಾನೇನಾದ್ರು ಅವುಳೊಟ್ಟೆಲಿ ಹುಟ್ಟಿದ್ರೆ, ಇಪ್ಪೊತ್ತಿಗೆ ಅಬ್ಕಾರಿ ಖಾತೆ ಮಂತ್ರಿಯಾಗಿ ಮ್ಯರಿತಿದ್ದೆ."

"ಈಗ್ಲು ಹೋಗ್ಲ ಮಗ ಅಂತ ಹೇಳಿಕಂಡು?"

"ಹೋಗಬವುದಿತ್ತು ಕಣಕ್ಕ, ಈ ತಾಳ ದ್ಯಾವೇಗೌಡ್ರು ನಮ್ಮ ಪಟೇಲ್ರು ತರ ಇದ್ದಿದ್ರೆ ನಿನ್ನಂತ ಅವ್ವನ್ನ ಜೊತೆ ಮಾಡಿಕಂಡು ಹೋಗಿ ತಕರಾರು ತಗದು ಕಾಂಪನ್‌ಶೇಷನ್ ತಗಬವುದಿತ್ತು, ಏನು ಮಾಡ್ತಿ, ದೇವೇಗೌಡ್ರು ಅದ್ಕೂ ಅವುಕಾಸವಿಲ್ದದಂಗೆ ಪಾಲಿಟಿಕ್ಸ್ ಮಾಡಿರೋದ್ರಿಂದ ಅವರ ವಿರೋಧಿಗಳಿಗ್ಯಲ್ಲ ಬ್ಯಾಡಲಕ್ಕು ಕಣಕ್ಕ. ಸೀಯು ದ್ವಡಪ್ಪ ಬೈ" ಎಂದು ಹೊರಟು ಹೋದ.


"ಏನಂದಾ ಅವುನು?" ಎಂದ ಕಾಳಮಾವ.

"ತಿರಗ ಬಂದನಂತೆ."

-ಬಿ. ಚಂದ್ರೇಗೌಡ


Zero Hour ಮುನ್ನಿ

1. ಪ್ರೀತಿ ಏಕೆ ಭೂಮಿ ಮೇಲಿದೆ?



a) ಪ್ರೊಡ್ಯೂಸರ್ ಅಶ್ವಿನಿ ಪ್ರಸಾದ್ ಜೇಬಲ್ಲಿ 'ಜೋಗಿ' ಕಾಸಿದೆ
b) ಭೂಮಿ ಕೆಳಗೆ ಜಾಗವಿಲ್ಲದೆ....
c) ಏಯ್ ಮುನ್ನಿ ಪ್ರುಟ್ಟಿ, ಆ ಪ್ರೇಮ್‌ಗೆ ಹೇಳು, ಬೇರೆ ಗ್ರಹಗಳಲ್ಲಿ ಜೀವಿಗಳಿಲ್ಲಾಂತ...
d) ಸ್ವಲ್ಪ ತಡಿ, ಇನ್ನೇನು ಚಂದ್ರನ ಮೇಲೂ ಲವ್ವು ಸ್ಟಾರ್ಟ್ ಆಗ್ತೈತಿ

2. ಪೇಜಾವರ ಎಂಬ ಬಾಲಕನು ದಿನವೊಂದರಲ್ಲಿ ಸರಾಸರಿ 300 ಗ್ರಾಂನಂತೆ 4 ಸಲ ಆಹಾರ ಸೇವಿಸುತ್ತಾನೆ. ಪಕ್ಕದ ಸ್ಕೂಲಿನ ಗಂಗಾಧರನಾಥ ಎಂಬ ಬಾಲಕ ಸರಾಸರಿ 500 ಗ್ರಾಂಗಳಂತೆ ಎರಡೇ ಸಾರಿ ಆಹಾರ ಸೇವಿಸುತ್ತಾನೆ.



ಹೀಗಿದ್ದರೂ ಬಾಲಕ ಪೇಜಾವರ ಸರಪೇತಲನಂತೆ, ಬಾಲಕ ಗಂಗಾಧರನಾಥ ನೀರಾನೆಯಂತೆ ಇರಲು ಕಾರಣ?

a) 1200 ಗ್ರಾಂ ತಿನ್ನೋ ಪೇಜಾವರ ಬೇರೆಯವರ ತಲೆ ತಿನ್ನೋದರಲ್ಲೇ ಶಕ್ತಿ ಕಳೆದುಕೊಳ್ತಾನೆ
b) ಪೇಜಾವರನ ಅನ್ನ, ಮಜ್ಜಿಗೆಯಲ್ಲಿ ಪೌಷ್ಠಿಕಾಂಶ ಕಡಿಮೆ
c) ಗಂಗಾಧರನ 1000 ಗ್ರಾಂ ಆಹಾರದಲ್ಲಿ ಬರೀ ಭ್ರೋಟಿ, ಲೆಗ್‌ಪೀಸ್‌ಗಳಿರುತ್ತವೆ
d) ಅವರಿಬ್ರು ಎಷ್ಟಾದ್ರು ತಿನ್ಲಿ ಬಿಡು.... ಜನರ ಪ್ರಾಣ ತಿನ್ನದಿದ್ರೆ, ಅಷ್ಟೇ ಸಾಕು

3. ಪ್ರೇಮಪತ್ರ ಬೆಟರೋ, ಲವ್-ಇಮೇಲ್ ಬೆಟರೊ?



a) ಇ-ಮೇಲ್‌ನಲ್ಲಿ ಮೇಲ್ ಯಾರು, ಫಿಮೇಲ್ ಯಾರು ಅನ್ನೋದು ಗೊತ್ತಾಗದೇ 'ಫೈರ್' ಹೊತ್ತಿಕೊಳ್ಳುತ್ತೆ ಮುನ್ನಿ....
b) 'ಪ್ರೇಮ್' ಪತ್ರವೇ ಲವ್ಲಿ ಅಂತಾಳೆ ರಕ್ಷಿತಾ
c) ಅಯ್ಯೋ ಬಿಡು ಮುನ್ನಿ, ನಾಗ್ತಿಹಳ್ಳಿ ನಿನ್ನೇ ತಾನೇ ಪಬ್ಲಿಕ್ ಆಗಿ 279 ನೇ ಲವ್‌ಲೆಟರು ಬರೆದು ಸುಸ್ತಾಗ್ಯವ್ನೆ. ಚಿನ್ನು ಮಾತ್ರ ಕ್ಯಾರೆ ಅನ್ನುತ್ತಿಲ್ಲ
d) ದಡ್ಡಿ ಮುನ್ನಿ, ಲೆಟರೂ ಬೇಡ, ಇಮೇಲೂ ಬೇಡ... 'ಕಣ್ಣಿನ ಕಾಗುಣಿತ' ಸಾಕು ಬಿಡು

4. "ಮೊಬೈಲ್ ಫೋನ್ ಕದಿಯುವವರೆಲ್ಲ ಕಟ್ಟಡ ಕೆಲಸ ಮಾಡುವವರು..." -ಡಿಸಿಪಿ ಅಲೋಕ್‌ಕುಮಾರ್. ನಿಮ್ಮ ಅಭಿಪ್ರಾಯವೇನು?



a) ಮೊಬೈಲ್ ಕದಿವ ಗ್ಯಾಂಗ್ ಅಲೋಕ್‌ಗೊಂದು ಮೊಬೈಲ್ ಕೊಟ್ಟಿರಬೇಕು
b) ಲೋಕಜ್ಞಾನವಿಲ್ಲದ ಅ'ಲೋಕ್' ವಿಷಯ ಇಲ್ಯಾಕೆ ಬಿಡು
c) ಭಿಕ್ಷುಕರಿಂದ ಜನಸಂಖ್ಯೆ ಹೆಚ್ಚುತ್ತಿದೆ ಎಂದು ಅದ್ಯಾವನೋ ತಲೆಕೆಟ್ಟವ್ನು ಹೇಳಿದ್ನಲ್ಲ... ಅವ್ನ ದೋಸ್ತ್ ಇರ್‍ಬೇಕು ಈ ಅಲೋಕ್
d) 'ಸ್ಲಮ್‌ಗಳಲ್ಲಿರುವವರೆಲ್ಲ ಕಳ್ಳರು' ಎಂದು ಆ ಪೆದ್ದು ಸಾಂಗ್ಲಿಯಾನ ಹೇಳಿತ್ತಲ್ಲ...
e) ಹೀಗೆ ಮಾತಾಡೋರ್ನೆಲ್ಲ ತಿಹಾರ್ ಜೈಲಿಗೆ ಕಳಿಸ್ಬೇಕು

5. ಸಚಿವ ರಾಮಚಂದ್ರೇಗೌಡ 'ಪ್ಲೇಇನ್' ಶುರು ಮಾಡ್ಯವ್ರೆ. ಏನಾಗಲಿದೆ?

a) ಈ ಚಡ್ಡಿಗೆ ಬಡವರನ್ನು ಸಾಯಿಸೋ ಆಶೆ
b) 'ಪ್ಲೇವಿನ್ ಪ್ರವೀಣ'.ಅಂತಾ ಬಿರುದು ಕೊಡಿ ಆತನಿಗೆ
c) ಪ್ಲೇನೂ ಇಲ್ಲ, ವಿನ್ನೂ ಇಲ್ಲಾ... ಸರ್ಕಾರವೇ ಬೀಳುತ್ತೆ ಬಿಡು.
d) ಗಣಿಯ ಥ್ರಿ-ಡಿಜಿಟ್ ಲಾಟರಿ (150 ಕೋಟಿ) ಹೊಡೆತಕ್ಕೆ ಸರ್ಕಾರವೇ ಆತ್ಮಹತ್ಯೆ ಮಾಡಿಕೊಳ್ತಿದೆ ನೋಡು.

ಉತ್ತರಗಳು : (1) ಎಲ್ಲಾ O.K (2) d (3) d (4) d e (5) b

ತೊಂಭತ್ತನೆಯ ಹುಟ್ಟುಹಬ್ಬ


"ಕಾರ್ಮಿಕ ನಾಟಕದಲ್ಲಿ ನಟನಂತೆ ವರ್ತಿಸುವುದು ತಮಾಷೆಯಾಗಿರುತ್ತದೆ, ನಟ ಕಾರ್ಮಿಕನಂತೆ ಅಭಿನಯಿಸುವುದು ದುರಂತಮಯವಾಗಿ ಕಾಣುತ್ತದೆ..." ಹೀಗೆಂದವನು ಬರ್ಟೋಲ್ಟ್ ಬ್ರೆಶ್ಟ್. ಭಾರತದಲ್ಲಿ ತಪ್ಪಾಗಿ 'ಬ್ರೆಕ್ಟ್' ಅನ್ನುವುದುಂಟು. ಬಳಕೆಯಲ್ಲಿರುವುದರಿಂದ ಬ್ರೆಕ್ಟ್ ಎಂದೇ ಕರೆಯೋಣ. ಈತನ ಒಂದು ಮಾತು ತಲೆಯಲ್ಲಿ ಸುತ್ತತೊಡಗಿತು. ಒಂದು ಕತೆಯಲ್ಲಿ ಬ್ರೆಕ್ಟ್ ಬರೆಯುತ್ತಾನೆ. ಬಹಳ ಕಾಲದ ಬಳಿಕ ಸಿಕ್ಕ ಪರಿಚಿತನೊಬ್ಬನನ್ನು ಇನ್ನೊಬ್ಬ "ಏನಯ್ಯ ಹಾಗೇ ಇದ್ದೀ, ಸ್ವಲ್ಪವೂ ಬದಲಾಗಿಲ್ಲ!" ಅಂದ. ಅದನ್ನು ಕೇಳಿದ ಪರಿಚಿತ ನಾಚಿಕೆಯಿಂದ ಬಿಳಿಚಿಕೊಂಡ. ಯಾಕೆಂದರೆ ಬ್ರೆಕ್ಟ್ ಪ್ರಕಾರ ಮನುಷ್ಯ ಬದಲಾಗುತ್ತಾ ಹೋಗಬೇಕು, ಬೆಳೆಯುವ ಮಾರ್ಗ ಅದೊಂದೇ. ಬದಲಾವಣೆ ಜೀವನದ ಚಲನೆಯ ಗುರುತು. ಹಾಗೆಯೇ ಬ್ರೆಕ್ಟ್ ಇನ್ನೊಂದು ಮಾತು ಹೇಳಿದ. ಅದು ಮೊದಲಿನದರಷ್ಟೇ ಮುಖ್ಯಮಾತು. ನೀನು ನಿನ್ನ ಎರಡೂ ಕೈಯಲ್ಲಿ ಹೊರಬಲ್ಲಷ್ಟು ಸಾಮಗ್ರಿಗಳಿಂದ ಏನನ್ನು ಕಟ್ಟಬಲ್ಲೆ? ಗುಡಿಸಲನ್ನು ಮಾತ್ರ ಕಟ್ಟಿಕೊಳ್ಳಲು ಸಾಧ್ಯ. ಆದ್ದರಿಂದ ಎಲ್ಲರೊಂದಿಗೆ, ಎಲ್ಲರೂ ತಂದ ಸಾಮಗ್ರಿಗಳಿಂದ ಮಾತ್ರ ಭವ್ಯ ಕಟ್ಟಡ ನಿರ್ಮಿಸಬಹುದು. ವ್ಯಕ್ತಿಯಲ್ಲಿನ ಸಾಮಗ್ರಿಗಳು ಸೀಮಿತ; ಜನಸಮೂಹದ ಒಗ್ಗಟ್ಟು, ದರ್ಶನ, ಕ್ರಿಯೆ ಮಾತ್ರ ದೊಡ್ಡದನ್ನು ಸಾಧಿಸಲು ಸಾಧ್ಯ. ಸಮುದಾಯ ಕೂಡ ವ್ಯಕ್ತಿಯ ಉಡುಗೊರೆಯಿಂದಲೇ ರೂಪುಗೊಂಡದ್ದು.

ಮೇಲಿನ ಮಾತು ಮೆಚ್ಚಲು ಇಷ್ಟೇ ಕಾರಣವಲ್ಲ, ಬ್ರೆಕ್ಟ್ ತನ್ನ ಮಾತುಗಳ ಮೂಲಕ ಮನುಷ್ಯ ಜೀವನದ ಆಳದ ಗುಟ್ಟು ಹೇಳಿದ್ದಾನೆ. ಕಾರ್ಮಿಕನಿಗೆ ನಟನಾಗುವ ಆಸೆ; ಅದು ತಪ್ಪಲ್ಲ, ಆದರೆ ಕಾರ್ಮಿಕ ತಾನು ಯಾವುದನ್ನು ನಟನೆ, ಖ್ಯಾತಿಗೆ ರಹದಾರಿ ಎಂದು ತಿಳಿದಿರುತ್ತಾನೋ ಆ ನಟನೆಯಲ್ಲಿ ತೊಡಗಿ ತನ್ನ ಕಾರ್ಮಿಕ ಅನುಭವವನ್ನು ಮರೆಯುತ್ತಾನೆ. ಇಲ್ಲಿ ನಟನೆಯ ಭ್ರಮೆ ಬದುಕಿನ ಕರ್ಮದಿಂದ ಅವನನ್ನು ದೂರ ಮಾಡುತ್ತದೆ. ಹಾಗೆಯೇ ನಟ ಕಾರ್ಮಿಕನಾಗಿ ಅಭಿನಯಿಸುವಾಗ ಕಾರ್ಮಿಕನ ಚಲನವಲನಗಳನ್ನು ಮಾತ್ರ ಬಿಂಬಿಸುತ್ತಾನೆ. ಅದು ದುರಂತ, ಏಕೆಂದರೆ ಆತ ಕಾರ್ಮಿಕನ ದುರಂತವನ್ನು ಹೊರಗಿನಿಂದ ಕಂಡು ಹೇಳಲು ಮಾತ್ರ ಸಾಧ್ಯ.



ಜನ ಸಮುದಾಯದ ಬಗ್ಗೆ ಕೂಡ ಬ್ರೆಕ್ಟ್ ಹೇಳುವುದು ಸರಿ; ಯಾಕೆಂದರೆ ಯಾವ ಪಕ್ಷವೂ, ಗುಂಪೂ, ಕಚೇರಿಯೂ, ರಾಷ್ಟ್ರವೂ ಒಬ್ಬ ವ್ಯಕ್ತಿಯ ಸರಕನ್ನು ನಂಬಲಾಗುವುದಿಲ್ಲ. ಇಂದಿರಾ ಒಬ್ಬರನ್ನು, ರಾಜೀವ್ ಒಬ್ಬರನ್ನು ನಂಬಿ ವ್ಯಕ್ತಿ ಪೂಜೆ ಮಾಡುವ ಪಕ್ಷ ಏನಾಯಿತೆಂಬುದನ್ನು ಬಲ್ಲೆವು. ಜನರೆಲ್ಲ ಇವರೊಂದಿಗೆ ದಾಕ್ಷಿಣ್ಯವಿಲ್ಲದೆ ಚರ್ಚಿಸಿ, ಚಾರಿತ್ರ್ಯ ಬೆಳೆಸಿಕೊಳ್ಳಲು ಪ್ರಯತ್ನಿಸಿದ್ದರೆ ಈ ದೇಶ ಈಗಿನ ಸ್ಥಿತಿಯಲ್ಲಿ ಇರುತ್ತಿರಲಿಲ್ಲ.

ಹಾಗೆಯೇ ಸಾಹಿತ್ಯ ಕೃತಿ ಕೂಡ. ಕವಿ ತನ್ನ ಖಾಸಗಿ ಅಳಲಿನಿಂದ ಮಾತ್ರ ಬರೆದ ಕವನ ಬಡವಾಗಿರುತ್ತದೆ; ಅವನಂಥ ಎಲ್ಲ ವ್ಯಕ್ತಿಗಳ ಒಂದು ಜನಾಂಗದಿಂದ ಬಂದ ಕವನ ತೀವ್ರವೂ ಗಾಢವೂ ಆಗಿರುತ್ತದೆ. ನಾಟಕವೂ ಅಷ್ಟೇ.



ಜೂನ್ 12, 1988

ಹೀಗೆ ಯೋಚಿಸಿದ ಬ್ರೆಕ್ಟ್.... ಕವಿಯಾಗಿದ್ದ ಹಾಡುಗಾರನಾಗಿದ್ದ, ನಾಟಕಕಾರನಾಗಿದ್ದ. ಜರ್ಮನಿಯನ್ನೊಳಗೊಂಡು ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿನ ಬಡತನದ ಐಲು, ಸಿರಿತನದ ರೋಗವನ್ನು ಅರಿತಿದ್ದ. ಕವನ, ಹಾಡಿನಿಂದ ತನ್ನ ಸಾಹಿತ್ಯಸಾಹಸ ಶುರು ಮಾಡಿದ ಬ್ರೆಕ್ಟ್ ಬಂಡವಾಳಶಾಹಿಗಳು, ಅವರು ಅನಿವಾರ್ಯವಾಗಿ ಆರಂಭಿಸುವ ಯುದ್ಧದ ಹುಚ್ಚುತನವನ್ನು ತಿಳಿದಿದ್ದ. ಅವನ ಅತ್ಯಂತ ಪ್ರಖ್ಯಾತ ನಾಟಕಗಳಾದ 'ಮದರ್ ಕರೇಜ್' ಮತ್ತು 'ತ್ರೀ ಪೆನ್ನಿ ಅಪೆರಾ'ಗಳಲ್ಲಿ ಇದನ್ನೇ ಹೇಳಿದ. ಆಗಿನ ಪಶ್ಚಿಮ ಜಗತ್ತಿಗೆ ಬೇಕಾಗಿದ್ದ ಸಮತಾವಾದ, ಶೋಷಣೆಯಿಂದ ಮುಕ್ತವಾದ ವ್ಯವಸ್ಥೆಯ ಪರವಾಗಿ ಬರೆದ. ಹಾಡು, ಕತೆ ನಾಟಕಗಳೆಲ್ಲ ಒಂದಾಗಿ ಹೊಸತೊಂದು ರಂಗಭೂಮಿ ನಿರ್ಮಿತವಾಯಿತು.

ಇದನ್ನು ಎರಡನೆ ಯುದ್ಧದ ತರುವಾಯದ ಜರ್ಮನಿ ಸಹಿಸಲಿಲ್ಲ, ಅವನ ನಾಗರಿಕ ಹಕ್ಕನ್ನು ಕಿತ್ತುಕೊಂಡಿತು. ಬ್ರೆಕ್ಟ್ ಡೆನ್ಮಾರ್ಕ್, ನಾರ್ವೆ ಮುಂತಾದ ಕಡೆ ತಿರುಗಿ ರಂಗಭೂಮಿಯ ಚಟುವಟಿಕೆಗಳಲ್ಲಿ ತೊಡಗಿದ. ಅಮೆರಿಕೆಯಿಂದ ಆಹ್ವಾನ ಬಂತು. ತಾನೊಂದು ಮಹಾ ಪ್ರಜಾಪ್ರಭುತ್ವವೆಂದು ತಿಳಿದುಕೊಂಡ ಅಮೆರಿಕಾ ಬ್ರೆಕ್ಟ್‌ನ ಪ್ರತಿಭೆಗೆ ಧಂಡಾ ಹೊಡೆಯಿತು; ಆತನ ಚಟುವಟಿಕೆಗಳ ಮೇಲೆ ಕಣ್ಣಿಟ್ಟು ಟೀಕಿಸತೊಡಗಿತು. ಸರ್ಕಾರ ಕ್ರಮ ತೆಗೆದುಕೊಂಡಿತು. ಈ ಬಂಡವಾಳಶಾಹಿ ಅಮೆರಿಕಾದ ನಿಲುವನ್ನು ಕಂಡು ಸಿಟ್ಟಿಗೆದ್ದ, ಇಷ್ಟರಲ್ಲಿ ಕಮ್ಯುನಿಸ್ಟ್ ದೇಶವಾಗಿದ್ದ ಪೂರ್ವ ಜರ್ಮನಿ ಬ್ರೆಕ್ಟ್‌ನನ್ನು ಆಹ್ವಾನಿಸಿತು. ಈಗಿನ ತನ್ನ ಕ್ರಾಂತಿಕಾರಿ ದೇಶಕ್ಕೆ ಬ್ರೆಕ್ಟ್ ಸಂತೋಷದಿಂದ ಹಿಂದಿರುಗಿದ. ಅವನಿಗಾಗಿಯೇ ರಂಗಮಂದಿರವನ್ನು ಬಿಟ್ಟುಕೊಟ್ಟಿದ್ದರು. ಬ್ರೆಕ್ಟ್ ನಾಟಕ ಆಡತೊಡಗಿದ. ಆದರೆ ಅವು ಕಮ್ಯುನಿಸ್ಟ್ ನಾಟಕಗಳಾಗಿರಲಿಲ್ಲ, ಅಪ್ಪಟ ನಾಟಕಗಳಾಗಿದ್ದವು, ಜೀವನವನ್ನು ಅದರಲ್ಲಿ ಪ್ರಭೆಯೊಂದಿಗೆ ಮಂಡಿಸುವ ಬೃಹತ್ ನಾಟಕಗಳಾಗಿದ್ದವು.

ಆತ ಕಟ್ಟಿದ ಗುಂಪು- ಬರ್ಲಿನ್ ಎನ್‌ಸೆಂಬಲ್- ಯುರೋಪಿನ ದೊಡ್ಡ ಸಾಂಸ್ಕೃತಿಕ ತಂಡವಾಯಿತು.

ಇದನ್ನು ಕಂಡು ಸರ್ಕಾರಕ್ಕೆ ಬೇಸರವಾಯಿತು. ಆದರೆ ಬ್ರೆಕ್ಟ್ ತನ್ನ ಪಟ್ಟು ಬಿಡಲಿಲ್ಲ, ಎಲ್ಲ ಸಿದ್ಧಾಂತದ ಮೂಲಭೂತ ಜಡತ್ವ ಮತ್ತು ಎಲ್ಲ ಪ್ರತಿಭೆಯ ಮೂಲಭೂತ ಚಲನೆ, ಚಲುಮೆ ಅವನಿಗೆ ಗೊತ್ತಿತ್ತು.

ಈತ ಹುಟ್ಟಿದ್ದು 1898ರಲ್ಲಿ, ಮಡಿದದ್ದು 58ನೇ ವಯಸ್ಸಿನಲ್ಲಿ, ಈಗ ಈತನ 90ನೇ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿದೆ.

ಆತ ಹೇಳಿದ:

Make sure when leaving the world
Not just that you were good, but leave
A good world

(ನೀನು ಉತ್ತಮನಾಗಿದ್ದ ಬಗ್ಗೆ ಮಾತ್ರವಲ್ಲ, ಉತ್ತಮಗೊಳಿಸಿ ಜಗತ್ತ ಬಿಡುವಂತೆ ಬದುಕು) ■


ಲಂಕೇಶರಿಗೆ ಅರ್ಥವಾಗದೇ ಕಾಡಿದ ವಿಷಯ ಯಾವುದು?

ಬಸವರಾಜ್ ಹೂಗಾರ್, ಸವದತ್ತಿ
ದೇವರಿಗೂ ಆಗದಿರುವ ಕೆಲಸ ಯಾವುದು?
* ಆದಿರು ಸಾಗಾಣಿಕೆಯನ್ನು ನಿಲ್ಲಿಸುವುದು.

ಎಚ್.ಸಿ.ನಾಗರತ್ನ, ಬೆಂಗಳೂರು
ಗಾಂಧಿ, ನೆಹರು, ಶಾಸ್ತ್ರಿ, ಇಂದಿರಾ-ಇವರುಗಳ ಹೆಸರಿನ ನಗರಗಳಿರುವಂತೆ, ದೇವೇಗೌಡನಗರ ಏಕಿಲ್ಲ?
* ಇರೋ ನಗರಕ್ಕೆ ಹೆಸರಿಡಬಹುದು ಅಂತ ಗೊತ್ತಿಲ್ಲದೆ ಇಡೀ ನಗರ ಖರೀದಿ ಮಾಡಕ್ಕೋದ ಗೌಡರ ಮಕ್ಕಳು ಸಿಕ್ಕಿ ಹಾಕಿಕೊಂಡಿದ್ದಾರಲ್ಲಾ.

ಡಿ.ಎಲ್. ನಾಗರಾಜ್, ಹರಪನಹಳ್ಳಿ
ಡಬರಿ ಮೊಗದ ಧರ್ಮ್ರ, ಕಗ್ಗಂಟು ಮುಖದ ಖರ್ಗೆ, ನಿಜವಾದ ವಿರೋಧ ಪಕ್ಷದ ನಾಯಕರೇ?
* 'ಲಂಕೇಶ್' ಎದುರಿಗೆ ಇವರನ್ನು ನಿವಾಳಿಸಿ ಬಿಸಾಕಬೇಕು ಬಿಡ್ರೀ ಅಂತಾವ್ರೆ ಜನ.

ಆ.ರಾ. ಮಂಜುನಾಥ್, ಗೆದರೆ
ಈಗೀಗ ಆಂಟಿಯರೂ ಸೀರೆ ಬಿಟ್ಟು, ಬಿಗಿ ಡ್ರೆಸ್ ಹಾಕ್ತಿದ್ದಾರಲ್ಲಾ, ಇನ್ನು ಹುಡ್ಗೀರ ಗತಿ?
* ಹುಡುಗರ ಗತಿ ಬಗ್ಗೆ ಯೋಚನೆ ಮಾಡಿ ಸಾಹೇಬ್ರೇ



ಬಸವರಾಜ್ ಚೆಸ್ತರ್, ಹರಪನಹಳ್ಳಿ
'ಪತ್ನಿ'ಯೇ ಆಗದ ಶೋಭಾ 'ಕರೋಡ್ ಪತ್ನಿ' ಯಾದಳಲ್ಲ?
* ಯಡ್ಡಿಗೆ ಮಸಾಜ್ ಮಾಡಿದ್ದರ ಪ್ರತಿಫಲ.


ಬಿ.ಎಸ್. ಇಮ್ಮಾನುವೇಲ, ಮಸರಕಲ
'ಗೌರಿ' ಅಂತ ಹೆಸರಿಟ್ಟುಕೊಂಡ ಮಾತ್ರಕ್ಕೆ 'ಸೀರೆನೇ' ಉಡಬೇಕಾ?
* ಆಗೀರಿ ಮಿಸ್ಸೆ! ನಮ್ಮ ಎಡಿಟರು ಯಾವತ್ತಾದ್ರೂ ಸೀರೆ ಉಟ್ಟಿದ್ದು ನೋಡಿದ್ದೀರಾ.

ಉಮಾ ಮಂಚಾಲಿಗುರುರಾಜ, ಬಳ್ಳಾರಿ
ಗಂಡ ಹೆಂಡತಿ ಮಧ್ಯೆ ಕೂಸು ಬಡವಾಯ್ತು, ಅತ್ತೆ ಸೊಸೆಯ ಮಧ್ಯೆ?
* ಮಾವ, ಅಳಿಯ 'ಮದ್ಯ' ಕುಡಿದು ಟೈಟ್ ಆದರು.

ಪೂರ್ಣಿಮಾ, ಹಗರಿಬೊಮ್ಮನಹಳ್ಳಿ
ಕುಮಾರರಾಮನ ಸೋಲಿಗೂ ಕುಮಾರಸ್ವಾಮಿಯ ಸೋಲಿಗೂ ಏನು ವ್ಯತ್ಯಾಸ?
* 'ಕುಮಾರ'ಣ್ಣನಿಗೆ 150 ಕೋಟಿ ಲಾಭ, ಕುಮಾರರಾಮನಿಗೆ ಬರೀ 8 ಕೋಟಿ ನಷ್ಟ.

ಬಿ.ಚಂದ್ರೇಗೌಡ, ಬೆಂಗಳೂರು
ಗಂಡಸರ ಬಹುದೊಡ್ಡ ದೌರ್ಬಲ್ಯ ಯಾವುದು?
* ಕ್ಷಣಕ್ಕೊಂದು ಚಾನಲ್ ಬದಲಾಯಿಸುವುದು ಅಂತಾರೆ ನಮ್ಮ ಫ್ರೆಂಡ್ಸು!

ಪಿ.ಎನ್. ಶ್ರೀವತ್ಸ, ಬೆಂಗಳೂರು
ಹೆಣ್ಣು ನೋಡಲು ಚೆನ್ನಾಗೇ ಇದ್ದರೂ ಗಂಡಿಗಿಂತ ಹೆಚ್ಚು ಅಲಂಕಾರ ಮಾಡಿಕೊಳ್ಳಲು ಕಾರಣ?
* ಶೃಂಗಾರ ಶಾಸ್ತ್ರ ಆಕೆಗೆ ಕರಗತ ಆಗಿರೋದ್ರಿಂದ.



ಕೆ.ಎನ್. ಹೇಮಂತ್, ಬೆಂಗಳೂರು
ಗೌಡ್ರ ವಂಶದವರು ಸರ್ಕಾರಿ ಆಸ್ತಿಯನ್ನು ಮುದ್ದೆ ನುಂಗಿದಷ್ಟೇ ಸಲೀಸಾಗಿ ನುಂಗುತ್ತಿದ್ದಾರಲ್ಲಾ?
* ಯೋಚನೆ ಮಾಡಬೇಡಿ, ಕಕ್ಕಸೋದಿಕ್ಕೆ ನಾವಿದ್ದೀವಲ್ಲಾ.

ಎಂ. ನಿಸರ್ಗ, ದಾವಣಗೆರೆ
ಸಚಿವ ಚಿನ್ನಿಗಪ್ಪ ಮಾತಾಡುವಾಗಲೆಲ್ಲಾ ದೇವರುಗಳ ಮೇಲೆ ಆಣೆ ಮಾಡುವುದೇಕೆ?
*33 ಕೋಟಿ ದೇವರುಗಳ ಹೆಸರಲ್ಲಿ ಸುಳ್ಳು ಹೇಳಿಕೊಂಡಿರಬಹುದು ಅಂತ ಗೊತ್ತಿರೋದ್ರಿಂದ.



ಶಿವಶಂಕರ್, ಜರಗನಹಳ್ಳಿ
ಚಂಪಾ ಸಾಹಿತ್ಯ ಪರಿಷತ್ ಕಟ್ಟಡ ಕೆಡವ್ಯೋದಕ್ಕೆ ನಿಂತವರಲ್ಲಾ?
* ಸಾಹಿತ್ಯ ಕಟ್ಟೋದಕ್ಕೆ ಗೊತ್ತಿಲ್ಲದವನು ಇನ್ನೇನು ಮಾಡಿಯಾನು!

ಲೋಕೇಶ್, ನೆಲಮಂಗಲ
'ತನನಂ ತನನಂ'ನಲ್ಲಿ ಗೆಲ್ಲೋದು ರಕ್ಷಿತಾನೋ, ರಮ್ಯಾನೋ?
* ಕವಿತಾ ಅಂತ ಅಕ್ಕನ ಅಭಿಪ್ರಾಯ.

ಡಿ.ಎನ್. ಶ್ವೇತಾ, ಹರಪನಹಳ್ಳಿ
ಜಿಲ್ಲಾ ಉಸ್ತುವಾರಿ ಸಚಿವರನ್ನು ಬದಲಾಯಿಸಿದ ಕೋ-ಜಾ ಸರ್ಕಾರದ CMಗೆ ಗಣಿ ವಿವಾದದಿಂದ ಮುಕ್ತರಾಗುವ ನಿರೀಕ್ಷೆ ಇರಬಹುದೇ?
* ಸದ್ಯದಲ್ಲೇ ಸಿ.ಎಂ. ಗಿರಿಯಿಂದ ಮುಕ್ತರಾಗುವುದಂತೂ ಖಚಿತ.

ಎಸ್. ಶಶಿಧರ, ಬೆಂಗಳೂರು
ಹೆಲ್ತ್ ಮಂತ್ರಿ ಸಮರ್ಪಕವಾಗಿ ಔಷಧಿ ಚಿಕಿತ್ಸೆ ವ್ಯವಸ್ಥೆ ಮಾಡದೆ 'ಚಿಕೂನ್ ಗುನ್ಯಾ ಮಾರಣಾಂತಿಕವಲ್ಲ' ಎಂದು ಭೋದಿಸುತ್ತಿದ್ದಾರಲ್ಲಾ?
* ಸರ್ಕಾರಕ್ಕೆ ಗಣಿ ಗುನ್ಯಾ ಬಡಿದಿದೆ. ಇನ್ನು ಚಿಕೂನ್ ಗುನ್ಯಾಕ್ಕೆ ಔಷಧಿಯೆಲ್ಲಿದೆ?

ಕವಿತಾ ಮಧುಸೂದನ್, ದಾವಣಗೆರೆ
ಗಂಡುಗಲಿ ಕುಮಾರಸ್ವಾಮಿ ಎಂಬ ಚಿತ್ರ ನಿರ್ಮಾಣವಾದರೆ ಅದರ ನಿರ್ದೇಶಕರಾಗಲು ಯಾರು ಸೂಕ್ತ?
* 'ಕೋ-ಜಾ'ಗಳಲ್ಲೇ ಪೈಪೋಟಿ ಇದೆಯಂತೆ.

ಚಾಮುಂಡಿ ಶಿವಕುಮಾರ್, ಮೈಸೂರು
ಲಂಕೇಶರಿಗೆ ಅರ್ಥವಾಗದೇ ಕಾಡಿದ ವಿಷಯ ಯಾವುದು?
* 'ನಾಚಿಕೊಳ್ಳದ ನಸ್ಯ ಗುಣ'.

ಬಹುಮಾನಿತ ಪ್ರಶ್ನೆ

ಛೀ ತುಂಟಿ!

ತನ್ನ ವೀರ್ಯವನ್ನು ಪರೀಕ್ಷಿಸಿಕೊಳ್ಳಲು ಮುದುಕನೊಬ್ಬ ಡಾಕ್ಟರ್ ಬಳಿ ಹೋದ. ಆ ಡಾಕ್ಟರ್ ಅವನಿಗೆ ಡಬ್ಬಿಯೊಂದನ್ನು ಕೊಟ್ಟು ಮರುದಿನ ವೀರ್ಯವನ್ನು ಅದರಲ್ಲಿ ತರಲು ಹೇಳಿದ. ಮರುದಿನ ಮುದುಕ ಖಾಲಿ ಡಬ್ಬಿಯೊಂದಿಗೆ ಹಿಂದಿರುಗಿದ. ಅದನ್ನು ನೋಡಿ "ಏನಾಯಿತು" ಎಂದು ಡಾಕ್ಟರ್ ಕೇಳಿದ.

"ಏನು ಹೇಳೋದು ಡಾಕ್ಟ್ರೇ, ಮೊದಲು ನನ್ನ ಎಡಗೈಯಿಂದ ಪ್ರಯತ್ನಿಸಿದೆ. ಏನೂ ಆಗಲಿಲ್ಲ. ಬಲಗೈಯಿಂದ ಪ್ರಯತ್ನಿಸಿದೆ, ಊಹೂಂ.. ಆಮೇಲೆ ನನ್ನ ಹೆಂಡತಿ ಬಂದು ಎರಡೂ ಕೈಗಳನ್ನು ಉಪಯೋಗಿಸಿ ನೋಡಿದಳು. ಏನೂ ಪ್ರಯೋಜನವಾಗಲಿಲ್ಲ, ನಮ್ಮ ಪಕ್ಕದ ಮನೆಯಾಕೆಯೂ ಬಂದು ಪ್ರಯತ್ನಿಸಿದಳು. ಯಾವುದು ಯಶಸ್ವಿಯಾಗಲಿಲ್ಲ" ಎಂದು ಲೊಚಗುಟ್ಟಿದ ಮುದುಕ.



"ಏನು ಇದಕ್ಕೆಂದು ಪಕ್ಕದ ಮನೆಯ ಮಹಿಳೆಯನ್ನೇ ಕರೆದಿದ್ದೀರಾ? ಎಂದು ಅಚ್ಚರಿಗೊಂಡ ಡಾಕ್ಟರು.

"ಹೌದು, ಆದರೆ ನಾವೆಲ್ಲಾ ಏನೇ ಮಾಡಿದರೂ ಈ ಡಬ್ಬದ ಮುಚ್ಚಳವನ್ನು ತೆಗೆಯಲಾಗಲೇ ಇಲ್ಲ" ಉತ್ತರಿಸಿದ ಮುದುಕ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಕುಮಾರಸ್ವಾಮಿಯವರು ಮೊನ್ನೆ '6 ವರ್ಷದಲ್ಲಿ ಸಾಧಿಸಬಹುದಾದ್ದನ್ನು ಅರೇ ತಿಂಗಳಲ್ಲಿ ಸಾಧಿಸಿದ್ದೇನೆ' ಎಂದಿರುವುದರ ಅರ್ಥ?

ಆಗಸ್ಟ್ 16ರ ಸಂಚಿಕೆಯ ನಮ್ಮ ಪ್ರಶ್ನೆ: ಸುಷ್ಮಾ ಸ್ವರಾಜ್‌ಳ ಪ್ಯಾಚ್-ಅಪ್ ಫ್ಲಾಪ್ ಆದದ್ದೇಕೆ?
ನಿಮ್ಮ ಉತ್ತರ: ಕ್ಲಿಕ್ ಆಗಾಕೆ ಅದು ವ್ರತಕ್ಕೆ ಒಲಿಯೋ ವರಮಹಾಲಕ್ಷ್ಮಿ ಅಲ್ಲ. ಬಳ್ಳಾರಿ ಬೆಟ್ಟದಿಂದ ಎದ್ದಿರೋ ಬೇತಾಳ.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಹನುಮನಾಯಕ್, ಶಿವಮೊಗ್ಗ

ಜಡೇಜಾ ರವಿಯ ಜೈಲು ಸ್ಕೆಚ್

ಚೇರದೇ ಬಿದ್ದ ಚೇರನಹಳ್ಳಿ



ಗುರುವಿನ ಋಣ ತೀರಿಸಲೆಂದು ಒಂದು ಕೊಲೆ. ಆವರಿಂದ ಬಚಾವಾಗುಳಿಯುವುದಕ್ಕೆಂದು ಮತ್ತೆರಡು ತಲೆ. ಹೀಗೆ ಒಂದರ ಮೇಲೊಂದರಂತೆ ಮೂರು ಬರ್ಭರ ಹತ್ಯೆಗಳನ್ನು ನೀಟಾಗಿ ಮಾಡಿ ಮುಗಿಸಿದ್ದಾನೆ ಜಡೇಜಾ ರವಿ.

ಇನ್ನು ಮಂಡ್ಯದ ಮಟ್ಟಿಗೆ ಆತನಿಗೆ ಶತ್ರುಗಳೇ ಇಲ್ಲ. ಇದ್ದ ಏಕೈಕ 'ಏಜಾ' ಚೇರನಹಳ್ಳಿ ಶಂಕ್ರನ ತಮ್ಮ, ಮಂಡ್ಯದ ಡಾನ್ ಎಸ್ಕೆ ರಾಮಣ್ಣನ ಹಂತಕ ಚೇರನಹಳ್ಳಿ ಶಿವರಾಮನನ್ನು ಆಗಸ್ಟ್ ಹತ್ತೊಂಬತ್ತರ ಸಂಜೆ ನಡುರಸ್ತೆಯಲ್ಲೇ ತಂಡನ ಹುಡುಗರು ಕೊಚ್ಚಿ ಹಾಕಿದ್ದಾರೆ.

ಅದು ಎಂಥಾ ಪೂರ್ವ ಯೋಜಿತ ಮತ್ತು ವ್ಯವಸ್ಥಿತ ಕೊಲೆಯೆಂದರೆ ಬೇಟೆ ತಪ್ಪಿಸಿಕೊಳ್ಳುವ ಛಾನ್ಸೇ ಇರಲಿಲ್ಲ. ಇಷ್ಟು ಬೇಗ ಸಾವು ತನ್ನನ್ನು ಬೆನ್ನಟ್ಟಿ ಬರಲಿದೆಯೆಂಬ ಕಿಂಚಿತ್ ವಾಸನೆ ಕೂಡ ಶಿವರಾಮನಿಗಿರಲಿಲ್ಲ. ಎಸ್ಕೆ ರಾಮಣ್ಣನನ್ನು ಕೊಂದು ಜೈಲು ಸೇರಿದ್ದ ಶಿವರಾಮನಿಗೆ ಇಲ್ಲಿಗೆ ಆರು ತಿಂಗಳ ಹಿಂದೆ ಜಾಮೀನು ಸಿಕ್ಕಿತ್ತು. ಆತನಿಗೆ ಚೆನ್ನಾಗಿ ಗೊತ್ತಿತ್ತು ರವಿ ಕಡೆ ಹುಡುಗರು ತನಗಾಗಿ ರೌಂಡಿಂಗ್ ಮಾಡುತ್ತಿರುವುದು. ತನ್ನನ್ನು ಹುಡುಕುತ್ತಾ ಬಂದವರು ಕೆಲವೇ ದಿನಗಳ ಹಿಂದೆ ತನ್ನ ಬಲಗೈ ಬಂಟ ಗೋಪಾಲಪುರದ ಕಿಟ್ಟಿಯನ್ನು ಕತ್ತರಿಸಿ ಕೊಂದದ್ದು, ತನ್ನ ಕಡೆಗಿದ್ದ ಹುಡುಗರೆಲ್ಲಾ ಭೀತಿಗೆ ಬಿದ್ದು ರವಿಯತ್ತ ವಾಲಿದ್ದು ಮತ್ತು ಅದಕ್ಕೆಂದೇ ಕೆ.ಆರ್. ನಗರದ ಜೈಲಲ್ಲಿದ್ದ ರವಿ ಇತ್ತೀಚೆಗಷ್ಟೇ ಮಂಡ್ಯ ಜೈಲಿಗೆ ಬಂದು ಕೂತಿದ್ದಾನೆಂದು ಚೇರನಹಳ್ಳಿ ಶಿವರಾಮನಿಗೆ ಚೆನ್ನಾಗಿ ಗೊತ್ತಿತ್ತು.



ಆದರೂ ಹುಂಬ ಧೈರ್ಯ. ಒಂದಷ್ಟು ದಿನ ಬೆಂಗಳೂರಿನಲ್ಲಿ ಆಟೋ ಓಡಿಸಿಕೊಂಡಿದ್ದವನು ಅಲ್ಲಿನ ಹುಡುಗರ ಜೊತೆ ಏನೋ ಕಿತ್ತಾಟ ಬಂದು ಇದ್ದಕ್ಕಿದ್ದಂತೆ ಮಂಡ್ಯಕ್ಕೆ ಬಂದುಬಿಟ್ಟ. ಹೇಗೂ ರವಿ ಜೈಲಲ್ಲಿದ್ದಾನೆ. ಆತನ ಅಷ್ಟೂ ಮಂದಿ ಹುಡುಗರೂ ಜೈಲು ಸೇರಿದ್ದಾರೆ. ಸದ್ಯಕ್ಕವರು ಹೊರಬರುವಂತಿಲ್ಲ, ಆನಂತರ ತಾನೇ ತಾನು ಹುಷಾರಾಗಿರಬೇಕು!

ಅಂಥಾದ್ದೊಂದು ನಿರ್ಲಕ್ಷದಲ್ಲೇ ಆಗಸ್ಟ್ ಹತ್ತೊಂಬತ್ತರ ಸಂಜೆ ಆನೆಕೆರೆ ಬೀದಿಗೆ ಬಂದಿದ್ದಾನೆ. ಬಂದವನು ಸೀದಾ ಮನೆ ಹೊಕ್ಕಿಬಿಟ್ಟಿದ್ದರೆ ಏನಾಗುತ್ತಿತ್ತೊ? ಆದರೆ ಮರಿಜನ್ನಿ ಕೃಷ್ಣನ ಮನೆ ಮುಂದೆ ಟೀ ಅಂಗಡಿಯಿತ್ತಲ್ಲ; ಅಲ್ಲಿದ್ದ ಇಬ್ಬರು ಹುಡುಗರನ್ನು ಮಾತಾಡಿಸಲೆಂದು ತೀರ ಅಸಡ್ಡಾಣಂತೆ ಹೋಗಿ ಟೀ ಕುಡಿಯುತ್ತಾ ಮಾತಿಗಿಳಿದಿದ್ದಾನೆ. ಬಹುಶಃ ಆ ಹುಡುಗರೇ ಹಂತಕರಿಗೆ ಟಿಪ್ಸ್ ಕೊಟ್ಟರೋ ಅಥವಾ ಹಂತಕರೇ ಆತನನ್ನು ಹಿಂಬಾಲಿಸಿ ಬಂದಿದ್ದರೋ, ಹತ್ತೇ ನಿಮಿಷದಲ್ಲಿ ಟಾಟಾ ಸುಮೋ ಒಂದು ಟೀ ಅಂಗಡಿಯೆದುರು ಪ್ರತ್ಯಕ್ಷವಾಗಿದೆ.


ಅಲ್ಲಿಗೆ ಅಪಾಯದ ವಾಸನೆ ಹಿಡಿದ ಶಿವರಾಮ ಎದುರಿಗಿದ್ದ ಎರಡು ದಾರಿಗಳ ಪೈಕಿ ಒಂದರತ್ತ ಓಡಿದ್ದಾನೆ. ಹಾಗೇ ಓಡಿ ಎದುರಿದ್ದ ನಾಲಬಂದವಾಡಿ ಸ್ಲಮ್ಮಿನ ತನ್ನ ಮನೆ ಹೊಕ್ಕುವುದು ಆತನ ಉದ್ದೇಶವಾಗಿತ್ತು. ದುರ್ವಿಧಿಯೆಂದರೆ ಆ ಹೊತ್ತಿಗಾಗಲೇ ಆ ಎರಡೂ ದಾರಿಗಳಲ್ಲಿ ರವಿ ಕಡೆ ಹುಡುಗರು ಕವರ್ ಆಗಿಬಿಟ್ಟಿದ್ದರು. ಬೆನ್ನಟ್ಟಿ ಬಂದ ಒಂದು ತಂಡ ಮತ್ತು ಆಗಲೇ ಹೊಂಚುಹಾಕಿದ್ದ ಮತ್ತೊಂದು ಪಡೆಯ ಮಧ್ಯೆ ಸಿಕ್ಕಿಬಿದ್ದ ಶಿವರಾಮನ ತಲೆ ಚಿಪ್ಪೇ ಹಾರಿ ಹೋಗುವಂತೆ ಕತ್ತರಿಸಿದ್ದಾರೆ. ತಲೆಯನ್ನೇ ಗುರಿಯಿಟ್ಟು ಬೀಸಿದ ಲಾಂಗ್ ಏಟಿಗೆ ಆತನ ಮೆದುಳಿನ ತುಂಡುಗಳು ರಸ್ತೆಗೆ ಬಿದ್ದಿದ್ದವು. ಅಕ್ಕಪಕ್ಕದ ನಿವಾಸಿಗಳು ಆತನನ್ನು ಮಂಡ್ಯದ ಸರ್ಕಾರಿ ಆಸ್ಪತ್ರೆಗೆ ಹೊತ್ತೊಯ್ದರಾದರೂ ಆಸ್ಪತ್ರೆ ಮುಟ್ಟುವ ಹೊತ್ತಿಗೆ ಶಿವರಾಮು ಹೆಣವಾಗಿದ್ದ.

ನಿರ್ಲಕ್ಷಕ್ಕೆ ಕ್ಷಮೆ ತಾನೇ ಎಲ್ಲುಂಟು?

ಇಲ್ಲಿಗೆ ವರ್ಷದ ಹಿಂದೆ ಅಂದರೆ 2005ರ ಮಾರ್ಚ್ ಒಂದರ ಬೆಳಿಗ್ಗೆ ಇಲ್ಲಿಗೆ ಫರ್ಲಾಂಗ್ ದೂರದ ಕಾಳಮ್ಮನ ದೇವಸ್ಥಾನದ ಎದುರಿಗೆ ಇಷ್ಟೇ ನಿರ್ಲಕ್ಷದಿಂದ ಕೊಲೆಯಾದವನು ಶಿವರಾಮನ ಅಣ್ಣ ಚೇರನಹಳ್ಳಿ ಶಂಕ್ರ. ಆವತ್ತು ಕೂಡ ಇದೇ ರೀತಿ ಜಡೇಜಾ ರವಿ ರಾಜಿಯ ನಾಟಕವಾಡಿದ್ದ. ಅದನ್ನು ನಂಬಿದ ಶಂಕ್ರ ಒಬ್ಬನೇ ಬಂದು ಕಾಳಮ್ಮನ ದೇವಸ್ಥಾನದ ಎದುರು ಕಣ್ಣುಮುಚಿ ಕೈಮುಗಿದು ನಿಂತಿದ್ದ. ಆಗ ಅವನ ಮೇಲೆ ಹಿಂದಿನಿಂದ ಜಡೇಜಾ ಗ್ಯಾಂಗ್ ದಾಳಿ ನಡೆಸಿತ್ತು. ಇವತ್ತೂ ಅಷ್ಟೇ; "ನಾನಿನ್ನು ಫೀಲ್ಡು ಬಿಟ್ಟು ಬಿಡ್ತೀನಿ, ಮುಂದಿನ ಚುನಾವಣೆಗೆ ನಿಲ್ತೀನಿ, ನನಗಿನ್ನು ರೌಡಿಸಂ ಸಾಕು" ಎಂದು ಕಂಡಕಂಡಲ್ಲಿ ಹೇಳಿಕೆ ಕೊಟ್ಟುಕೊಂಡೇ ಬಂದವನು ಜಡೇಜಾ ರವಿ.

ಅದು ಆತನ ಚಾಲಾಕು. ಇಲ್ಲಿಗೆ ತಿಂಗಳ ಹಿಂದೆ "ಶಿವರಾಮನ ತಂಟೆಗೆ ನಾನು ಹೋಗಲ್ಲ, ಹಾಗೊಮ್ಮೆ ನನ್ನ ತಂಟೆಗೆ ಬಂದರೆ ಸುಮ್ಮನಿರೋಕ್ಕಾಗುತ್ತಾ?" ಎಂದೇ ಡೈಲಾಗ್ ಹೊಡೆದಿದ್ದ ರವಿಯನ್ನು ಶಿವರಾಮ ನಂಬಿಬಿಟ್ಟ. ಅಷ್ಟಕ್ಕೂ ಚೇರನಹಳ್ಳಿ ಶಂಕ್ರ ಮತ್ತು ಜಡೇಜಾ ರವಿ ಒಟ್ಟೊಟ್ಟಿಗೇ ಫೀಲ್ಡಿಗಿಳಿದವರು. ಇಬ್ಬರಿಗೂ ಎಸ್ಕೆ ರಾಮಣ್ಣನೇ ಗುರು. ಪ್ರಾರಂಭದಲ್ಲಿ ಇಬ್ಬರೂ ಸೇರಿಕೊಂಡೇ ರೌಡಿ ಅಣ್ಣಯ್ಯನನ್ನು ಕೊಂದರು. ಜೊತೆಜೊತೆಗೆ ಇದ್ದ ಶಂಕ್ರ ಮತ್ತು ರವಿ ಮಧ್ಯೆ ಜಿದ್ದು ಮಡಗಿದ್ದು ಆಲ್ಕಾಟಿ ಚಾಕು ನಾಗ. ಅದೇ ಹೊತ್ತಿಗೆ ಮಂಡ್ಯದಲ್ಲಿ ಸಾರಾಯಿ ಯುದ್ಧ ಭುಗಿಲೆದ್ದಿತ್ತು, ಪ್ರಿಯಾ ಹೋಲ್‌ಸೇಲ್ ನಾಗಣ್ಣ ಶಂಕ್ರನ ಬೆನ್ನಿಗೆ ನಿಂತರೆ, ಆತನ ಎದುರಾಳಿ ಹಾಲಿ ಮಂಡ್ಯ ಮತ್ತು ಮುಳಬಾಗಿಲು ಸಾರಾಯಿ ಅಧಿಪತಿ ರಂಗಸ್ವಾಮಿ ಜಡೇಜಾನನ್ನು ಸಾಕಿಕೊಂಡ. ಇಬ್ಬರಿಗೂ ಒಬ್ಬರನ್ನೊಬ್ಬರನ್ನು ಮುಗಿಸಬೇಕಿತ್ತು, ಅದಕ್ಕೆ ಒಂದೊಂದು ಪಡೆಯನ್ನು ಸಾಕಿಕೊಂಡರು.

ಯಾವತ್ತು ಮಂಡ್ಯದ ಖಾಸಗಿ ಬಸ್‌ಸ್ಟ್ಯಾಂಡ್ ಮತ್ತು ತರಕಾರಿ ಮಂಡಿಯ ಉತ್ಪತ್ತಿಯ ಮೇಲೆ ಶಂಕ್ರ ಹಿಡಿತ ಸಾಧಿಸಿದನೋ ಆಗ ಹುಷಾರಾದವನು ಡಾನ್ ಎಸ್ಕೆ ರಾಮಣ್ಣ, ಆತನಿಗೆ ಜಡೇಜಾ ರವಿಯನ್ನು ಬೆಳೆಸಬೇಕಿತ್ತು, ಬಸ್‌ಸ್ಟ್ಯಾಂಡ್ ವಸೂಲಿಯನ್ನು ರವಿಗೇ ಬಿಟ್ಟು ಕೊಡುವಂತೆ ಶಂಕ್ರನಿಗೆ ಧಮಕಿ ಕೊಟ್ಟ ಅಷ್ಟೇ. ಶಂಕ್ರ ತನ್ನ ತಮ್ಮ ಶಿವರಾಮನನ್ನು ಛೂ ಬಿಟ್ಟು, ಎಸ್ಕೆ ರಾಮಣ್ಣನನ್ನೇ ಮುಗಿಸಿಬಿಟ್ಟ. ಅಲ್ಲಿಗೆ ಜಡೇಜಾ ರವಿಯ ಹುಟ್ಟಡಗುತ್ತದೆಯೆಂದೇ ಶಂಕ್ರ ಲೆಕ್ಕ ಹಾಕಿದ್ದ.



ಆವತ್ತು ಪುಡಿ ಹುಡುಗರನ್ನು ಕಟ್ಟಿಕೊಂಡು ಡಾನ್ ಎಸ್ಕೆ ರಾಮಣ್ಣನನ್ನು ನಡುರಸ್ತೆಯಲ್ಲಿ ಕೊಚ್ಚಿ ಹಾಕಿದ ಶಂಕ್ರನ ತಮ್ಮ ಶಿವರಾಮ ಮಂಡ್ಯದ ಘಾತುಕ ಲೋಕಕ್ಕೆ ಹಳಬನಾದರೂ ಸ್ವತಂತ್ರವಾಗಿ ಫೀಲ್ಡ್ ನಿಭಾಯಿಸಲಾರ. ಎಸ್ಕೆ ರಾಮಣ್ಣನ ಕೊಲೆಗೂ ಮುನ್ನ ರೇಷ್ಮೆ ಇಲಾಖೆ ಕಾಂಪೌಂಡ್ ಬಳಿ ಅಬ್ಬೇಪಾರಿಯೊಬ್ಬನನ್ನು ಕೊಂದು ಹಾಕಿದ್ದ. ಅಣ್ಣನ ಕೊಲೆಯಾದಾಗ ಆತ ರಾಮಣ್ಣನ ಕೊಲೆ ಕೇಸಲ್ಲಿ ಮಂಡ್ಯ ಜೈಲಲ್ಲಿದ್ದ. ಅಂಥ ಸಮಯ ಕಾದೇ ಶಂಕ್ರನನ್ನು ಮುಗಿಸಿದ ಜಡೇಜಾ ಶಿವರಾಮ ಜೈಲಲ್ಲಿದ್ದಷ್ಟೂ ದಿನ ಚನ್ನಪಟ್ಟಣದ ಕುಮಾರನ ಅಡ್ಡೆಯಲ್ಲಿ ತಲೆ ಮರೆಸಿಕೊಂಡಿದ್ದ. ಆವತ್ತು ಮಂಡ್ಯದ ಇನ್ಸ್‌ಪೆಕ್ಟರ್ ನಾಗೇಶ್‌ಕುಮಾರ್ ಆತನ ಇಡೀ ಪಡೆಯನ್ನು ಹಿಡಿದು ಜೈಲಿಗೆ ದಬ್ಬಿದ್ದರು. ಬಹುಶಃ ನಾಗೇಶ್‌ಕುಮಾರ್ ಕೈಗೇನಾದರೂ ರವಿ ಸಿಕ್ಕಿದ್ದರೆ ಆವತ್ತೇ ಆತನ ಎನ್‌ಕೌಂಟರ್ ಆಗುತ್ತಿತ್ತೇನೋ. ಯಾವತ್ತು ಶಿವರಾಮನಿಗೆ ರಾಮಣ್ಣನ ಕೊಲೆ ಕೇಸಲ್ಲಿ ಜಾಮೀನಾಯಿತೋ, ಅಲ್ಲಿಯ ತನಕ ಭೂಗತನಾಗಿದ್ದ ಜಡೇಜಾ ಡಿವೈಎಸ್‌ಪಿ ಲಾರೆನ್ಸ್‌ರನ್ನು ಬುಟ್ಟಿಗೆ ಹಾಕಿಕೊಂಡು ಕೋರ್ಟಿಗೆ ಶರಣಾದ. ನಾಗೇಶ್‌ಕುಮಾರ್ ಕೈಯಲ್ಲಿ ಒದೆ ತಿನ್ನುವುದೂ ತಪ್ಪಿತ್ತು.



ಸೇಫಾಗಿ ಜೈಲು ಹೊಕ್ಕಿ ಕೂತಂತಾಯ್ತು

ಘಾತಕಿಯೊಬ್ಬ ಪೊಲೀಸ್ ಟಾರ್ಚರ್ ಮತ್ತು ಶತ್ರು ದಾಳಿಯಿಂದ ಒಟ್ಟೊಟ್ಟಿಗೆ ಬಚಾವಾಗಿ ಸೇಫಾಗಿ ಜೈ[...] ಹೊಕ್ಕನೆಂದರೆ ಮತ್ತೊಂದು ಅನಾಹುತಕ್ಕೆ ಮುನ್ನುಡಿಯಿದ್ದ[...] ಶಿವರಾಮನ ವಿಷಯದಲ್ಲೂ ಅದೇ ಆಯಿತು. ಅ[...] ಬಿಡುಗಡೆಯಾದ ತಿಂಗಳಿಗೇ ಆತನ ಬಲಗೈ ಬಂಟನಂತಿ[...] ಗೋಪಾಲಪುರದ ಕಿಟ್ಟಿ ಕೊಲೆಯಾದ. ಜೈಲಲ್ಲಿದ್ದೇ ಶಿ[...] ಬಂಗಾರಪ್ಪನನ್ನು ಬಿಟ್ಟ ಜಡೇಜಾ ಕಿಟ್ಟಿಯ[...] ಮುಗಿಸಿದ. Of course ಕಿಟ್ಟಿಯ[...] ಮುಗಿಸುವ ಉದ್ದೇಶ ರವಿಗಿರಲಿಲ್ಲ. ಆದ[...] ಶಿವರಾಮನನ್ನು ಹುಡುಕಿ ಬಂದಿ[...] ಜಡೇಜಾನ ಹುಡುಗರು ಆತ ಸಿಗಲಿ[...] ಎಂದು ಸುಮ್ಮನಾಗುವ ಬದಲು ಕೈ[...] ಸಿಕ್ಕ ಕಿಟ್ಟಿಯನ್ನು ಕತ್ತರಿಸಿದರು.

ಯಾವತ್ತು ಕಿಟ್ಟಿಯೇ ಮುಗಿದ[...] ಹೋದನೋ ಶಿವರಾಮ ಮಂಡ್ಯವ[...] ತೊರೆದು ಬೆಂಗಳೂರಿಗೆ ಬಂದ. ಒಂದಷ[...] ದಿನ ಆಟೋ ಓಡಿಸಿಕೊಂಡಿದ್ದ. ಬೆಂಗಳೂ[...]ನಲ್ಲೂ ಅದೇನೋ ಕಿರಿಕ್ಕು ಮಾಡಿಕೊಂಡ. ಮತ್ತೆ ಮಂಡ[...] ವಾಪಸ್ಸಾದ. ಇಷ್ಟಾದಾಗ್ಯೂ ಶಿವರಾಮ ಸುಲಭ[...] ಯಾಮಾರುವವನಲ್ಲ, ಆದರೆ ರವಿ ಎಂಥ[...] ಚಾಲಾಕಿಯೆಂದರೆ, ಇಲ್ಲಿಗೆ ತಿಂಗಳ ಹಿ[...] ಪತ್ರಿಕೆಯೊಂದಕ್ಕೆ 'ನಾನು ಫೀಲ್ಡು ಬಿಡ್ತೀ[...] ಶಿವರಾಮನ ಮೇಲೆ ನನಗೆ ಜಿದ್ದೇ ಇ[...] ಎಂಬ ಹೇಳಿಕೆ ಕೊಟ್ಟ. ತನಗೆ ಮಂಡ್ಯದ[...] ಅಪಾಯ ಅಂತಿರಲೇಬಾರದೆಂದೇ ಇನ್ನೊ[...] ಶಿವರಾಮನನ್ನು ಆತನ ಅಣ್ಣ ಶಂಕ್ರನ[...] ನಾಜೂಕಾಗಿ ಮುಗಿಸುವುದು ಆತ[...] ಹುನ್ನಾರವಾಗಿತ್ತು.

"ಜಡೇಜಾ ರೌಡಿಸಂ ಬಿಟ್ಟು ಬಿಟ್ಟ[...] ನನ್ನ ತಂಟೆಗೆ ಬರೋಲ್ಲ ಅಂತ ಹೇಳವ್ನೆ" ಎಂದುಕೊಂಡ[...] ಮಂಡ್ಯದಲ್ಲಿ ಎಲ್ಲೆಂದರಲ್ಲಿ ಸುತ್ತತೊಡಗಿದ. ಜೊತೆಗ[...] ಒಂದಿಬ್ಬರು ಹುಡುಗರನ್ನೂ ವಾಪಸ್ಸು ಕಳಿಸಿದ್ದ. ಯಥಾ[...] ಆಗಸ್ಟ್ ಹತ್ತೊಂಬತ್ತರ ಸಂಜೆ ಮಾಮೂಲಿನಂತೆ ಆನೆಕ[...] ಬೀದಿಗೆ ಬಂದಿದ್ದಾನೆ. ಜಡೇಜಾನ ಹುಡುಗರನ್ನು ನೋಡಿ[...] ಆತನ ಜೊತೆಗಿದ್ದ ಇಬ್ಬರು ಹುಡುಗರೂ ನಾಪತ್ತೆಯಾಗಿದ್ದ[...]

ಅಣ್ಣ ಚೇರನಹಳ್ಳಿ ಶಂಕರನಂತೆ ತಮ್ಮನೂ ರವಿಯ[...] ನಂಬಿದ. ಆ ತಪ್ಪಿಗೆ ಅಣ್ಣನಂತೆಯೇ ಬಲಿಯಾದ. ಹುಂ[...] ಧೈರ್ಯಕ್ಕಿಂತಲೂ ನರಿಬುದ್ಧಿಯೇ ಗೆಲ್ಲುವುದು ಯು[...] ನಿಯಮ.

-ರಾ. ಸೋಮನಾಥ[...]

ಗೋರಿಪಾಳ್ಯ ಅಲ್ತಾಫ್ ಹೇಳಿದ್ದು

ಕುಚೋದ್ಯವೆಂದರೆ ಜೈಲಲ್ಲಿದ್ದ ಶಿವರಾಮನಿಗೆ ಅಲ್ಲಿದ್ದ ಗೋರಿಪಾಳ್ಯದ ಅಲ್ತಾಫ್ ಅಭಯ ಕೊಟ್ಟ. ಆನಂತರ ಆತನನ್ನು ಬೆಂಗಳೂರಿಗೆ ಕರೆಸಿಕೊಂಡು ಆಶ್ರಯ ಕೊಟ್ಟ. ಆ ಕಾರಣಕ್ಕೇ ಶಿವರಾಮ ಕೊಲೆಯಾದ ಎಂಬುದು!

ಈ ಬಗ್ಗೆ ಅಲ್ತಾಫ್ ಸ್ವತಃ ವಿವರಣೆ ಕೊಡುತ್ತಾನೆ.




"ನೋಡಿ ಸಾರ್, ಡಬ್ಬಲ್‌ಗೇಮು" ಬೆನ್ನಿಗೆ ಚೂರಿ ಹಾಕೋದು ನನ್ನ ರಕ್ತದಲ್ಲೇ ಬಂದಿಲ್ಲ. ಮಂಡ್ಯ ಜೈಲಲ್ಲಿದ್ದ ನಾನು ಬಿಡುಗಡೆಯಾಗಿದ್ದು 2006ರ ಮಾರ್ಚ್ ಹದಿನೇಳಕ್ಕೆ. ಶಿವರಾಮ ನನ್ನ ಜೊತೆಗಿದ್ದದ್ದು ಐದು ತಿಂಗಳ ಕಾಲ. ಆತನಿಗೆ ಜಾಮೀನು ಸಿಕ್ಕಿ ಬಿಡುಗಡೆಯಾದ ಹತ್ತೇ ದಿನಕ್ಕೆ ಜಡೇಜಾ ರವಿ ಅದೇ ಮಂಡ್ಯ ಜೈಲಿಗೆ ಬಂದ. ಒಂದೇ ಜೈಲು ಅಂದ ಮೇಲೆ ಪರಸ್ಪರ ವಿಷ್ ಮಾಡೋದು, ಮಾತಾಡೋದು ಇದ್ದೇ ಇರುತ್ತೆ. ನನ್ನ ಜೊತೆಗಿದ್ದಷ್ಟೂ ದಿನ ಶಿವರಾಮನಿಗೆ ಬುದ್ಧಿ ಹೇಳಿದ್ದೆ, ಆಗಿದ್ದು ಆಗಿಹೋಯ್ತು ಇನ್ನು ಮುಂದುವರೆಸೋದು ಬೇಡ, ರಾಜಿಯಾಗಿ ಬಿಡಿ ಅಂತಲೇ ಹೇಳಿದ್ದೆ. ಬಿಡುಗಡೆಯಾಗುವ ಮುನ್ನ ಯೋಚನೆ ಮಾಡಿ ಹೇಳ್ತೀನಿ ಸಾರ್ ಅಂತಲೇ ಶಿವರಾಮ ಹೇಳಿ ಹೋಗಿದ್ದ.

ಆನಂತರ ಜಡೇಜಾ ರವಿಗೂ ಅದನ್ನೇ ಹೇಳಿದೆ. ಮಂಡ್ಯ ಚಿಕ್ಕ ಊರು. ಹೆಚ್ಚು ದಿನ ಜಿದ್ದು ಸಾಧಿಸೋದು ಸರಿಯಲ್ಲ, ಇಬ್ಬರೂ ರಾಜಿಯಾಗಿ ಬಿಡಿ ಎಂದೇ ಬುದ್ಧಿ ಹೇಳಿದೆ. ಜಡೇಜಾ ಶಿವರಾಮನಂತೆ ಯೋಚಿಸಿ ಹೇಳ್ತೀನಿ ಅನ್ನದೇ ಆಯ್ತು ಸಾರ್ ನೀವು ಹೇಳಿದಂತೆ ಆಗಲಿ ಎಂದ. ರವಿ ಬಂದ ಒಂದು ತಿಂಗಳಿಗೇ ನಾನು ಬಿಡುಗಡೆಯಾದೆ. ಇದ್ದಷ್ಟೂ ದಿನ ಇಬ್ಬರನ್ನೂ ಒಂದೇ ರೀತಿ ಮಾತಾಡಿಸಿದ್ದೇನೆ. ಇಬ್ಬರನ್ನೂ ರಾಜಿ ಮಾಡಿಸಲು ನೋಡಿದ್ದೇನೆ. ಅದೇ ಕಾರಣಕ್ಕೆ ಶಿವರಾಮ ನನ್ನ ಜೊತೆ ಮಾತುಬಿಟ್ಟ. ಇನ್ನು ಆತನನ್ನು ಬೆಂಗಳೂರಿಗೆ ಕರೆಸಿಕೊಂಡು ಆಶ್ರಯ ಕೊಡುವುದು ಎಲ್ಲಿಂದ ಬಂತು? ಅಷ್ಟಕ್ಕೂ, ಮಂಡ್ಯದ ತರಲೆ ಕಟ್ಟಿಕೊಂಡು ನನಗೇನು ಲಾಭ? ಯಾರ್‍ಯಾರೋ ಯಾವುದೋ ಕಾರಣಕ್ಕೆ ನನ್ನ ಹೆಸರನ್ನು ಬಳಸುತ್ತಿದ್ದಾರಷ್ಟೇ.


ಇದು ಗೋರಿಪಾಳ್ಯದ ಅಲ್ತಾಫ್ ಉವಾಚ.

ಹಂತಕನ ಹೆಗಲಿಗೆ ಎಮ್ಮೆಲ್ಲೇ 'ಹಸ್ತ'!



ಜಡೇಜಾ ರವಿಯ ನೆಟ್‌ವರ್ಕು, ಮಂಡ್ಯದ ಪೇಟೆ ಬೀದಿಯ ಮಾರವಾಡಿಗಳಿಂದ ಸಿಗುತ್ತಿದ್ದ ಕುಮ್ಮಕ್ಕು, ಆತನ ಕೇಬಲ್ ಧಂದೆಯ ಲಾಭ, ಅಲ್ಲಿನ ಸಾರಾಯಿ, ಫೈನಾನ್ಸ್, ಬಸ್ ಧಂದೆಗಳಿಂದ ಬರುತ್ತಿದ್ದ ಉತ್ಪತ್ತಿಗೆ ಹೋಲಿಸಿದರೆ ಚೇರನಹಳ್ಳಿ ಶಿವರಾಮ ನಿಜಕ್ಕೂ ಆತನಿಗೆ ಅಪಾಯಕಾರಿಯಾಗಿರಲಿಲ್ಲ. ಭೈರ ಮತ್ತು ಚಿಕ್ಕ ಮಂಡ್ಯದ ಪುರುಷೋತ್ತಮರಂಥ ಶಂಕ್ರನ ಬಂಟರನ್ನು ರವಿಕಡೆ ಹುಡುಗರು ಎತ್ತೊಯ್ದು ಹೊಡೆದ ನಂತರ ಶಂಕ್ರನ ಅಳಿದುಳಿದ ಬಂಟರೆಲ್ಲ ಜಡೇಜನತ್ತ ಪಕ್ಷಾಂತರ ಗೈದಿದ್ದರು. ಏಕೈಕ ಆಸರೆಯಂತಿದ್ದ ಗೋಪಾಲಪುರದ ಕಿಟ್ಟಿಯೂ ಕೊಲೆಯಾದ ಮೇಲೆ ಶಿವರಾಮನಿಗೆ ಮಂಡ್ಯದಲ್ಲಿ ಅಸ್ತಿತ್ವವೇ ಇರಲಿಲ್ಲ.

ಆದರೂ ಜಡೇಜನಿಗೆ ಶಿವರಾಮನನ್ನು ಮುಗಿಸುವ ದುರಾಸೆಯೇಕೆಂದರೆ ಆತನಿಗಾಗಲೇ ರಾಜಕೀಯದ ಹುಚ್ಚು ಹಿಡಿದಿತ್ತು, ಅದಕ್ಕೆ ಕಾರಣನಾದವನು ಕೆರಗೋಡು ಶಾಸಕ ಎಚ್.ಬಿ. ರಾಮು. ಇಲ್ಲಿಗೆ ತಿಂಗಳ ಹಿಂದೆ ಮಂಡ್ಯ ಜೈಲಿಗೆ ಬಂದ ಎಮ್ಮೆಲ್ಲೇ ರಾಮು ಜಡೇಜಾನಿಗೆ ಎಂಟ್ರಿ ಹಾಕಿ ಕಾಂಗ್ರೆಸ್ಸಿಗೆ ಆಹ್ವಾನ ಕೊಟ್ಟಿದ್ದು, ಮುಂದಿನ ನಗರಸಭೆ ಚುನಾವಣೆಯಲ್ಲಿ ಮೂರನೇ ವಾರ್ಡಿನಿಂದ ಕಾಂಗ್ರೆಸ್ ಟಿಕೆಟ್ ಖಾತರಿ ಮಾಡಿಸಿದ್ದು, ಅದಕ್ಕೆ ಸಂಸದ ಅಂಬರೀ ಫೋನಾಯಿಸಿ ಮಾತಾಡಿಸಿದ್ದು ಇತ್ಯಾದಿ ಬೆಳವಣಿಗೆಗಳನ್ನು ಶಿವರಾಮ ಗಮನಿಸದೇ ಹೋದ.



ಮುಂದೊಮ್ಮೆ ತಾನು ಚುನಾವಣೆಗೆ ನಿಂತನೆಂದರೆ ಸಣ್ಣದೊಂದು ಅಪಾಯ ಕೂಡ ಇರಕೂಡದೆಂದು ಲೆಕ್ಕ ಹಾಕಿಯೇ ಜಡೇಜಾ ಅಶೋಕ್‌ನಗರದ ದತ್ತು ಎಂಬಾತನಿಗೆ ಇಜಾರೆ ಮಾಡಿದ್ದಾನೆ. ಏಕೆಂದರೆ ರವಿಯ ಇಡೀ ಗ್ಯಾಂಗಿನಲ್ಲಿ ಸದ್ಯ ಜೈಲು ಪಾಲಾಗದೇ ಉಳಿದದ್ದು ಅವನೊಬ್ಬನೇ!

ಜಿ. ಪುಟ್ಟಸ್ವಾಮಿಗೌಡ ನಿಧನ:

ಕಾಂಗ್ರೆಸ್ ಅನಾಥ ಶಿಶು

ಒಂದು ಕಾಲದಲ್ಲಿ ಇಂದಿನ ಮಾಜಿ ಪ್ರಧಾನಿ ದೇವೇಗೌಡರ ಆಪ್ತ, ಬಲಗೈ ಬಂಟ. ನಂತರದ ರಾಜಕೀಯದ ಚದುರಂಗದಾಟದಲ್ಲಿ ಅದೇ ದೇವೇಗೌಡರ ವಿರುದ್ಧ ತಿರುಗಿಬಿದ್ದು, 30 ವರ್ಷಗಳ ಕಾಲ ಅವರ ವಿರುದ್ಧ ಸೆಣಸಾಡಿದ ಮಾಜಿ ಸಚಿವ ಜಿ. ಪುಟ್ಟಸ್ವಾಮಿಗೌಡರ ನಿಧನದೊಂದಿಗೆ ಹಾಸನ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಬಹುತೇಕ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ.


ಆರಂಭದಲ್ಲಿ ಅಂದಿನ ಜನತಾ ಪಕ್ಷದಲ್ಲಿ ದೇವೇಗೌಡರೊಂದಿಗೇ ಗುರುತಿಸಿಕೊಂಡು 1978-83 ರ ಅವಧಿಯಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದ ಪುಟ್ಟಸ್ವಾಮಿಗೌಡರು, 1984 ರಲ್ಲಿ ಮತ್ತೆ ಟಿಕೆಟ್ ಪಡೆಯುವಲ್ಲಿ ವಿಫಲರಾದರು. ಆ ವಿಫಲತೆಯ ಹಿಂದೆ ದೇವೇಗೌಡರ ಕೈವಾಡವನ್ನು ಅರಿತು ಸಿಡಿದು ಬಂದ ಪುಟ್ಟಸ್ವಾಮಿಗೌಡರು, ನಂತರ ಎಂದೂ ದೇವೇಗೌಡರೊಂದಿಗೆ ಕೈ ಜೋಡಿಸಲಿಲ್ಲ. ಈ ಎರಡೂ ದಿಗ್ಗಜಗಳ ದ್ವೇಷ ಕೇವಲ ರಾಜಕೀಯಕ್ಕೆ ಸೀಮಿತವಾಗಿರಲಿಲ್ಲ. ಅದು ವೈಯಕ್ತಿಕ ಮಟ್ಟಕ್ಕೆ ಇಳಿಯಿತು.

ಹೊಳೆನರಸೀಪುರದಲ್ಲಿ ದೇವೇಗೌಡರನ್ನು ಪರಾಭವಗೊಳಿಸಿ ಪುಟ್ಟಸ್ವಾಮಿಗೌಡರು ಒಮ್ಮೆ ವಿಧಾನ ಸಭೆಗೆ ಆಯ್ಕೆಯಾದರು. 1999ರ ಲೋಕಸಭಾ ಚುನಾವಣೆಯಲ್ಲಿ 1.5 ಲಕ್ಷ ಮತಗಳ ಭಾರೀ ಅಂತರದಿಂದ ದೇವೇಗೌಡರನ್ನು, ಪುಟ್ಟಸ್ವಾಮಿ ಗೌಡರು ಸೋಲಿಸಿ ಅವಮಾನದಿಂದ ಕುದಿಯುವಂತೆ ಮಾಡಿದರು. ಆದರೂ ದೇವೇಗೌಡರು, ಪುಟ್ಟಸ್ವಾಮಿ ಗೌಡರ ಪತ್ನಿ ನಿಧನ ಹೊಂದಿದಾಗ ಸಂತಾಪ ಸೂಚಿಸಲು ಅವರ ಮನೆಗೆ ಹೋದರು. ಪುಟ್ಟಸ್ವಾಮಿಗೌಡರ ಛಲ, ದ್ವೇಷ ಎಂತಹದ್ದೆಂದು ನೋಡಿ, ಅಂತಹ ಸಂದರ್ಭದಲ್ಲೂ ತಮ್ಮ ಕಡು ವಿರೋಧಿ ದೇವೇಗೌಡರನ್ನು ಮನೆಯ ಮೆಟ್ಟಲು ತುಳಿಯಲು ಬಿಡದೆ ಅವಮಾನಿಸಿ ಹಿಂದಕ್ಕೆ ಕಳುಹಿಸಿದರು.

ಇಂತಹ ವೈಯಕ್ತಿಕ ದ್ವೇಷ ಸಾಧನೆಯಲ್ಲಿ ದೇವೇಗೌಡರೇನು ಹಿಂದೆ ಬೀಳಲಿಲ್ಲ. ತಾವು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಪುಟ್ಟಸ್ವಾಮಿ ಗೌಡರ ಜಮೀನಿಗೆ ಸರಬರಾಜಾಗುತ್ತಿದ್ದ ವಿದ್ಯುತ್ ಸಂಪರ್ಕವನ್ನು ಕಿತ್ತು ಹಾಕಿಸಿದರು, ನೀರು ಹಾಯಿಸುವುದನ್ನು ತಪ್ಪಿಸಿದರು. ಪುಟ್ಟಸ್ವಾಮಿಗೌಡರು ಈ ಬಗ್ಗೆ ಪೊಲೀಸರಿಗೆ ದೂರು ನೀಡಿ, ಪತ್ರಿಕಾಗೋಷ್ಠಿ ನಡೆಸಿ ಭಾರಿ ಸುದ್ದಿ ಮಾಡಿದ್ದರು. ಛಲ ಮತ್ತು ದ್ವೇಷದ ಪ್ರತಿರೂಪದಂತಿದ್ದ ಪುಟ್ಟಸ್ವಾಮಿ ಗೌಡರ ಮೇಲೆ ಭ್ರಷ್ಟಾಚಾರದ ಆಪಾದನೆಗಳಂತೂ ಇರಲಿಲ್ಲ. ಅಥವಾ ಅಂತಹ ಆರೋಪಗಳಿಗೆ ಸಿಲುಕಿ ಬೀಳುವ ಅವಕಾಶ-ಅಧಿಕಾರಗಳು ಅವರ ರಾಜಕೀಯ ಜೀವನದಲ್ಲಿ ಲಭಿಸಲಿಲ್ಲ.

ಅವರ ದ್ವೇಷ, ಸಿಟ್ಟು ಮತ್ತು ಛಲ ಕೇವಲ ದೇವೇಗೌಡರ ವಿರುದ್ಧವಾಗಿರಲಿಲ್ಲ, ಅವರದೇ ಪಕ್ಷದ ಹಿರಿಯ ಮುಖಂಡರಾದ, ಎಲ್ಲಕ್ಕೂ ಹೆಚ್ಚಾಗಿ ಅವರ ಖಾಸಾ ಬೀಗರಾದ ಮಾಜಿ ಸಚಿವ ಎಚ್.ಸಿ. ಶ್ರೀಕಂಠಯ್ಯನವರ ವಿರುದ್ಧ ಸತತ ಹದಿನೈದು ವರ್ಷಗಳ ಕಾಲ ಪುಟ್ಟಸ್ವಾಮಿ ಗೌಡರು ಸಮರ ನಡೆಸಿದರು. ಕೊನೆಗೆ ಇವರಿಬ್ಬರ ನಡುವೆ ರಾಜಿ-ಸಂಧಾನ ಮೂಡಿಸಲು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕರೇ ಆಗಮಿಸಬೇಕಾಯ್ತು. ಈ ದ್ವೇಷ, ಜಟಾಪಟಿಗಳ ನಡುವೆಯೂ ಪುಟ್ಟಸ್ವಾಮಿಗೌಡ ಕ್ಷೇತ್ರದ ಮತ್ತು ಜಿಲ್ಲೆಯ ಅಭಿವೃದ್ಧಿ ಕಾರ್ಯಗಳನ್ನು ನಿರ್ಲಕ್ಷಿಸುತ್ತಿರಲಿಲ್ಲವೆಂದು ಜಿಲ್ಲೆಯ ಜನತೆಯೇ ಒಪ್ಪುತ್ತಾರೆ.

ಒಂದು ಸಾವಿರ ಹಾಸಿಗೆ ವ್ಯವಸ್ಥೆಯುಳ್ಳ ಆಸ್ಪತ್ರೆ, ವಿಶ್ವವಿದ್ಯಾಲಯ, ನೂರಾರು ಏತನೀರಾವರಿ ಯೋಜನೆಗಳು ಜಿಲ್ಲೆಗೆ ದಕ್ಕಿದ್ದು ಪುಟ್ಟಸ್ವಾಮಿ ಗೌಡರ ಶ್ರಮದ ಫಲ ಎಂದು ಇಲ್ಲಿನ ಜನ ನೆನೆಯುತ್ತಾರೆ. ಆದರೆ ಪುಟ್ಟಸ್ವಾಮಿ ಗೌಡರು ಮಾಡಿದ ಏಕೈಕ ತಪ್ಪೆಂದರೆ ತಮ್ಮ ಕ್ಷೇತ್ರದಲ್ಲಿ ಎರಡನೇ ಸಾಲಿನ ನಾಯಕತ್ವವನ್ನು ಬೆಳೆಸುವ ಬಗ್ಗೆ ಗಮನ ಹರಿಸದೆ ಇದ್ದುದು. ಇವತ್ತು ಸಚಿವ ರೇವಣ್ಣ ಪ್ರತಿನಿಧಿಸುತ್ತಿರುವ ಹೊಳೆನರಸೀಪುರ ಕ್ಷೇತ್ರದಲ್ಲಿ ಅವರಿಗೆ ಸರಿಸಮಾನರಾಗಿ ನಿಲ್ಲಬಲ್ಲ ಏಕೈಕ ಕಾಂಗ್ರೆಸ್ ಮುಖಂಡ ಕಣ್ಣಿಗೆ ಕಾಣುತ್ತಿಲ್ಲ. ಬೆರಳೆಣಿಕೆಯಷ್ಟಿರುವ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅನಾಥಪ್ರಜ್ಞೆ ಮೂಡಿದೆ. ಅವರಿಗಿರುವ ದಾರಿ ಈಗ ಎರಡು. ಒಂದು, ರೇವಣ್ಣನಿಗೆ ಶರಣಾಗಿ ಜೆಡಿಎಸ್ ಸೇರುವುದು, ಇಲ್ಲವೆ ರಾಜಕೀಯವನ್ನೇ ಬಿಟ್ಟು ಮನೆ ಸೇರುವುದು.



ಜಿಲ್ಲಾ ಕಾಂಗ್ರೆಸ್ ಪರಿಸ್ಥಿತಿ ಇದಕ್ಕಿಂತ ಹೊರತಾಗಿಲ್ಲ. ಕಾಂಗ್ರೆಸ್ಸಿನ ಒಂದು ಕಾಲದ ಹೆವಿವೈಟ್ ಎಚ್.ಸಿ. ಶ್ರೀಕಂಠಯ್ಯ ಈಗ ವೈಟ್ ಕಳೆದುಕೊಂಡಿದ್ದಾರೆ. ಇತ್ತೀಚೆಗೆ ಅವರಿಗೆ ನಡೆದ ಸನ್ಮಾನದಲ್ಲಿ ನೀಡಿದ ಖಡ್ಗವನ್ನು, ಸಂಘಟಕರಿಗೆ ಹಿಂದಿರುಗಿಸಿ ಮಾತಾಡಿದ ಶ್ರೀಕಂಠಯ್ಯ "ಈ ಕತ್ತಿನ ಹಿಡ್ಕಂಡು ಯಾರ್ ಮೇಲಪ್ಪ ಯುದ್ಧ ಮಾಡ್ಲಿ? ಅದೆಲ್ಲ ಮುಗ್ದು ಹೋಯ್ತು, ಇದೆಲ್ಲಾ ಏನಿದ್ರು ಈಗ ನಿಮ್ಗೆ" ಎಂದು ಹೇಳಿ ಭಾವುಕರಾಗಿ ಗಳಗಳನೆ ಅತ್ತು ಕುಸಿದು ಕುಳಿತಿದ್ದಾರೆ. ಇದು ಅವರ ರಾಜಕೀಯ ಹತಾಶೆ, ದೈಹಿಕ ಅಸಹಾಯಕತೆಯ ಸಂಕೇತ.

ಕಾಂಗ್ರೆಸ್ಸಿಗೆ ಈಗ ಹಾಸನ ಜಿಲ್ಲೆಯಲ್ಲಿ ಉಳಿದಿರುವ ಏಕೈಕ ಡೈನಾಮಿಕ್ ನಾಯಕನೆಂದರೆ ಮಾಜಿ ಸಚಿವ ಗಂಡಸಿ ಶಿವರಾಮು. ಗಂಡಸಿ ಕ್ಷೇತ್ರಕ್ಕೆ ಶಿವರಾಮು ಪಾಳೆಗಾರರೇ ಸರಿ, ಅಂತಹ ಎದೆಗಾರಿಕೆ ಅವರಿಗಿದೆ. ಆದರೆ ಜಿಲ್ಲಾ ಮಟ್ಟದಲ್ಲಿ ಮಾಜಿ ಪ್ರಧಾನಿ, ಹಾಲಿ ಮುಖ್ಯಮಂತ್ರಿ, ಹಾಲಿ ಮಂತ್ರಿ ಮೂವರೂ ಕೂತಿರುವಾಗ ಈ ತ್ರಿಶಕ್ತಿಗಳನ್ನು ಏಕಾಂಗಿಯಾಗಿ ಎದುರಿಸುವಷ್ಟು ಬೆಂಬಲವನ್ನು ಹಾಸನ ಜಿಲ್ಲಾ ಕಾಂಗ್ರೆಸ್ ಶಿವರಾಮುವಿಗೆ ನೀಡಲಾರದು.

ನಿನ್ನೆ ನಿಧನರಾದ ಪುಟ್ಟಸ್ವಾಮಿಗೌಡರ ಅಂತಿಮ ದರ್ಶನಕ್ಕಾಗಲಿ, ಅಂತ್ಯಕ್ರಿಯೆಗಾಗಲಿ, ಹಾಸನ ಜಿಲ್ಲೆಯಲ್ಲೇ ಇದ್ದ ದೇವೇಗೌಡರು ಹಾಜರಿರಲಿಲ್ಲ ಎಂದ ಮೇಲೆ ಇವರಿಬ್ಬರ ನಡುವಣ ದ್ವೇಷ ಎಷ್ಟರ ಮಟ್ಟನದು ಎಂಬುದನ್ನು ಯೋಚಿಸಿ. ಪುಟ್ಟಸ್ವಾಮಿಗೌಡರ ನಿಧನದಿಂದ ಸದ್ಯಕ್ಕೆ ಹಾಸನ ದೇವೇಗೌಡರ ಕುಟುಂಬದ ಪಾಳಯಪಟ್ಟಾಗಿ ಪರಿವರ್ತನೆಯಾಗಿದೆ. ಮುಂದಿನ ದಿನಗಳಲ್ಲಿ ಇದು ಇನ್ನಾವ ತಿರುವು ಪಡೆಯುವುದೋ ಕಾದು ನೋಡಬೇಕು. ●

ಒಳ ಮೀಸಲು ಹರಿಕಾರನ ಉದಯ

ಅರಸು ಜನ್ಮ ದಿನಾಚರಣೆಯ ಈ ಸಮಯದಲ್ಲಿ ಜೆಡಿಎಸ್‌ನ ಗಡವಗಳು ಸದ್ಯ ಬದುಕಿರುವ ದೇವೇಗೌಡರನ್ನೇ ಅಭಿನವ ಅರಸು ಎಂದು ಕೊಂಡಾಡತೊಡಗಿದ್ದಾರಂತಲ್ಲಾ. "ನಮ್ಮ ಗೌಡರು ಅಂತಿಂಥ ಗೌಡರಲ್ಲ, ಕರ್ನಾಟಕದ ಕಾರ್ಮುಗಿಲಾಗಸದಲ್ಲಿ ಉದಯಿಸಿರುವ ಒಳಮೀಸಲು ಹರಿಕಾರ. ಹಾಗೆ ನೋಡಿದರೆ ನಮ್ಮ ಗೌಡರು ಆ ಅರಸುವಿಗಿಂತ ಒಂದು ಗುಲಗಂಜಿ ತೂಕ ಹೆಚ್ಚಿಗೇ ಭಾರವಾಗಿದ್ದಾರೆ. ಅದೂ ಕರ್ನಾಟಕದ ಮಟ್ಟಿಗೆ ಇನ್ನೂ ಭಾರವಾಗಿದ್ದಾರೆ" ಎಂದು ಹೇಳುತ್ತಾ ಒಳಮೀಸಲು ನಾಯಕನನ್ನು ಹೊತ್ತು ಜಿಲ್ಲೆಗಳ ದರ್ಶನ ಮಾಡಿಸಲು ಹೊರಟಿದ್ದಾರಂತಲ್ಲ. ಸದರಿ ಒಳಮೀಸಲು ಹರಿಕಾರನನ್ನು ಅರಸುಗೆ ಹೋಲಿಸುತ್ತಿರುವ ಜೆಡಿಎಸ್‌ನ ಬಟಾವಡೆ ಜನ, "ಆ ದೇವರಾಜು ಅರಸು ಕಚ್ಚೆಪಂಚೆ ಹಾಕುತ್ತಿದ್ದರು, ಆದರೆ ನಮ್ಮ ಗೌಡರು ಅಡ್ಡ ಪಂಚೆಯುಡುತ್ತಾರೆ. ಅರಸು ಗೂಳಿಯಂತೆ ಕಾಣುತ್ತಿದ್ದರೆ, ನಮ್ಮ ಗೌಡರು ತಂಜಾವೂರು ಡೋಲು ಕಲಾವಿದರಂತೆ ಕಾಣುತ್ತಾರೆ. ಆ ಡೋಲಿನ ಹೊಡೆತಕ್ಕೆ ಬಿಜೆಪಿಗಳು, ಜೆಡಿಎಸ್‌ನವರೆಲ್ಲಾ ಹೆದರಿ ನಡುಗುತ್ತಾರೆ. ಇನ್ನು ಆ ವಿಜಪಿಜೆಡಿಗಳಂತೂ ಹೆದರಿ ತತ್ತರಿಸಿ ಕಾಂಗ್ರೆ ಗುಡಾರ ಸೇರುತ್ತಿವೆ" ಎಂದು ಮಾತನಾಡುತ್ತಿದ್ದಾರಂತಲ್ಲಾ, ಥೂತ್ತೇರಿ!




* * * * * * *

ಈ ಒಳಮೀಸಲು ಉದಯಸೂರ್ಯನ ಬಗ್ಗೆ ಅಂಕೆ ಮೀರಿ ಆಡಿಕೊಳ್ಳುತ್ತಿರುವ ಜೆಡಿಎಸ್ ಜನ "ಆ ದೇವರಾಜ ಅರಸು ಜುಜುಬಿ ಕರ್ನಾಟಕಕ್ಕೆ ನಾಯಕನಾದರೆ, ನಮ್ಮ ಗೌಡರು ದೇಶಕ್ಕೆ ನಾಯಕ. ಆ ದೇವರಾಜ ಅರಸುವಿಗೆ ಮೂರೆಕರೆ ಭೂಮಿ ಇರಲಿಲ್ಲ, ಅದೇ ನಮ್ಮ ನಾಯಕನಿಗೆ ಬೆಂಗಳೂರಿನಿಂದ ಮೈಸೂರಿನ ವರೆಗೂ ಇದೆ. ಅರಸುಗೆ ಗಂಡುಮಕ್ಕಳಿರಲಿಲ್ಲ, ಅದೇ ನಮ್ಮ ನಾಯಕನಿಗೆ ಒಂದಲ್ಲ, ಎರಡಲ್ಲ ನಾಲ್ಕರು ಗಂಡು ಮಕ್ಕಳಿದ್ದಾರೆ. ಕಡೆಗಾಲದಲ್ಲಿ ಯಾರ ಹಂಗೂ ಅಗತ್ಯವಿಲ್ಲ, ಆ ಅರಸುಗೆ ಸ್ವಾರ್ಥವೇ ಮುಖ್ಯ ರಾಜಕಾರಣವಾಗಿತ್ತು, ನಮ್ಮ ಗೌಡರಿಗೆ ಸ್ವಾರ್ಥವೆಂಬ ಪದಕ್ಕೆ ಅರ್ಥವೇ ಗೊತ್ತಿಲ್ಲ, ಏನು ಮಾಡಿದರೂ ಕಾರ್ಯಕರ್ತರಿಗಾಗಿ ಮಾಡುತ್ತಾರೆ. ಮಕ್ಕಳನ್ನು ಕೂಡ ಕಾರ್ಯಕರ್ತರೆಂದೇ ಭಾವಿಸಿದ್ದಾರೆ. ಅರಸು ಹಾವನೂರು ವರದಿಯನ್ನು ಜಾರಿ ಮಾಡಿಯೇಬಿಟ್ಟರು. ಅದೇ ನಮ್ಮ ನಾಯಕ ನಿಸ್ವಾರ್ಥಿಯಾದ್ದರಿಂದ ವೆಂಕಟಸ್ವಾಮಿ ವರದಿ, ಚಿನ್ನಪ್ಪರೆಡ್ಡಿ ವರದಿಯನ್ನು ಅಂಡಿನ ಕೆಳಕ್ಕೆ ಹಾಕಿಕೊಂಡು ಕುಳಿತರು. ಹಾಗೆ ಕುಳಿತ ಫಲವಾಗಿ ಈಗ ಅವರ ತಲೆಯಲ್ಲಿ ಒಳಮೀಸಲು ಚಿಗುರೊಡೆದಿದೆ. ಇನ್ನೇನು ಎಲೆ, ಹೂ, ಹಣ್ಣು ಕಾಣಿಸಿಕೊಳ್ಳಲಿವೆ. ಅದರ ಫಲಾನುಭವಿಗಳು ನಾವೇ. ಅರಸು ಇತಿಹಾಸ ಪುರುಷನಾದರೆ, ನಮ್ಮ ಗೌಡ ಹೊಸ ಇತಿಹಾಸ ನಿರ್ಮಿಸಿದ ಪುರುಷ ಶ್ರೇಷ್ಠ" ಎಂದು ಅರಸು ಜಯಂತಿ ಕಲಕ್ಷನ್ನಿನ ಹಣದಲ್ಲಿ ಒಳಮೀಸಲು ಸಭೆ ನಡೆಸೇಬಿಟ್ಟರಂತಲ್ಲಾ, ಥೂತ್ತೇರಿ!!

* * * * * * *

ಈ ಒಳಮೀಸಲು ನಾಯಕರ ಒಳಗಣ್ಣಿಗೆ ತುತ್ತಾಗಿ ಹೋದ ಜೆ.ಎಚ್. ಪಟೇಲರ ಮಗ ಮಹಿಮಾ ಪಟೇಲನೆಂಬ ಪಡ್ಡೆಹುಡುಗ ಕಡೆಗಳಿಗೆಯಲ್ಲಿ ಮಂತ್ರಿಯಾಗಿ ಜನ್ಮ ಸಾರ್ಥಕ ಮಾಡಿಕೊಳ್ಳುವ ಹಂಬಲದಿಂದ ಒಳ್ಳೆ ಡ್ರೆಸ್ ಹೊಲಿಸಿಕೊಂಡು ಒಳಮೀಸಲು ನಾಯಕನ ಕರೆಗೆ ಕಾಯುತ್ತಾ ಕುಳಿತಿರಬೇಕಾದರೆ, ಒಳಮೀಸಲು ಪದ್ಧತಿ ಫಲಾನುಭವಿ ಕುಮಾರಣ್ಣ ಫೋನ್ ಮಾಡಿ "ಸಾರಿ ಬ್ರದರ್" ಎಂದುಬಿಟ್ಟರಂತಲ್ಲಾ, ಬ್ರದರ್ ಎಂಬ ಮಾತಿಗೆ ಬೆಚ್ಚಿಬಿದ್ದ ಮಹಿಮಾ ಮಾತನ್ನೇ ಕಳೆದುಕೊಂಡು, ಕೂಡಲ ಸಂಗಮಕ್ಕೆ ಹೋಗಿ ಒಂದು ತಿಂಗಳು ಕುಳಿತಿದ್ದರಂತಲ್ಲಾ, ಮಹಿಮಾ ಅತ್ತ ಕುಳಿತಿರಬೇಕಾದರೆ, ಇತ್ತ ಒಳಮೀಸಲು ಬ್ರದರ್ ಚನ್ನಗಿರಿಯ ಜೆಡಿಎಸ್ ಬಟಾವಡೆ ಕಾರ್ಯಕರ್ತರನ್ನು ಸಂಪರ್ಕಿಸಿದರಂತಲ್ಲಾ, ಆಗ ಚನ್ನಗಿರಿಯ ಹೈದರು ಊರಿನ ಅಷ್ಟೂ ಬಾರ್ ಅಂಡ್ ರೆಸ್ಟೋರೆಂಟುಗಳನ್ನು ಖಾಲಿ ಮಾಡಿ "ಮಹಿಮಾನ ದೆಸೆಯಿಂದ ಚನ್ನಗಿರಿ ಕೆಟ್ಟಗಿರಿಯಾಗಿದೆ. ಇಲ್ಲಿ ಹೇಳೋರು ಕೇಳೋರು ಯಾರು ಇಲ್ಲ, ಇದನ್ನು ಹೇಳಲು ಹೋದರೆ ಮಹಿಮಾ ಮೌನಿಯಾಗಿದ್ದಾರೆ. ಉಳಿದ ವಡ್ಡಾಳನ ಹತ್ತಿರ ಹೋದರೆ ಅಡಿಕೆ ಬಣ್ಣದ ಬಗ್ಗೆ ಹೊಸ ಬೋರ್‌ವೆಲ್ ಬಗ್ಗೆ ಮಾತನಾಡುತ್ತಾನೆ. ಅಧಿಕಾರಿಗಳ ಹತ್ತಿರ ಹೋದರೆ ದೊಡ್ಡ ಜೇಬು ತೋರುತ್ತಾರೆ" ಎಂದು ಗೋಳಿಡುತ್ತ ಕಡೆಗೂ ಮಹಿಮಾನನ್ನು ಎಳೆದು ತಂದು ಒಳಮೀಸಲು ಕಾಯಕನ ಎದುರು ನಿಲ್ಲಿಸಿದರಂತಲ್ಲಾ. ಆಗ ಮಹಿಮಾ "ಇದು ನಾನಿರಬೇಕಾದ ಜಾಗವಲ್ಲ" ಎಂದು ಕೂಡಲೇ ಜಾಗ ಖಾಲಿ ಮಾಡಿದರಂತಲ್ಲಾ, ಥೂತ್ತೇರಿ!!

* * * * * * *



ದಶದಿಕ್ಕಿನಿಂದಲೂ ಆಪಾದನೆಗಳು, ಅವಘಡಗಳು ಮತ್ತು ನಿಂದನೆಗಳ ಸುರಿಮಳೆಯಾಗುತ್ತಿರುವುದನ್ನು ನೋಡಿದ ದೇವೇಗೌಡರು, ಇವೆಲ್ಲದರಿಂದ ಪಾರಾಗಲು ಏನು ಮಾಡಬೇಕೆಂದು ಕೂದಲಿಲ್ಲದ ತಲೆ ಕೆರೆಯುತ್ತಿರಬೇಕಾದರೆ ಕಾರೆ ಮೆಳೆಯಂತಹ ಕೂದಲ ಸಾಯಿಬಾಬಾ ತಲೆಗೆ ಹೊಳೆದರಂತಲ್ಲಾ. ಕೂಡಲೇ ಜ್ಞಾನೋದಯ ಪಡೆದ ಗೌಡರು "ಆ ಮಹಾತ್ಮನ ಬಾಯಿಂದ ನಾನು ಪ್ರಧಾನಿ ಎಂಬ ಉದ್ಗಾರ ಎಂದು ಬಂದಿತೋ ಅಂದೇ ನಾನು ಪ್ರಧಾನಿಯಾದೆ, ಇಲ್ಲದಿದ್ದರೆ ನನ್ನ ಜನ್ಮದಲ್ಲಿ ಅದು ಸಾಧ್ಯವಿರಲಿಲ್ಲ. ಈಗಿನ ಕಷ್ಟ ಕಾಲದಲ್ಲೂ ಅವರನ್ನೆ ಆಶ್ರಯಿಸಿ ಈ ಕೆಟ್ಟ ಗಳಿಗೆಯಿಂದ ಪಾರಾಗಬೇಕು" ಎಂದು ತೀರ್ಮಾನಿಸಿ ನೂರೈವತ್ತು ಕೋಟಿ ಹಣದಲ್ಲಿ ಬರೋಬರಿ ಇಪ್ಪತ್ತು ಕೋಟಿ ಕಿತ್ತುಕೊಂಡು ಹೋಗಿ ಸಾಯಿ ಬಾಬನ ಕೈಗಿತ್ತು "ನನ್ನ ಕುಟುಂಬವನ್ನು ಕಾಪಾಡಿ" ಎಂದರಂತಲ್ಲಾ. ಆಗ ಆ ಮುದಿ ಈಚಲು ಮರ ಗೌಡರ ವಂಶದ ಶ್ರೇಯೋಭಿವೃದ್ಧಿಗಾಗಿ ಯಜ್ಞ ಆರಂಭಿಸಿದ ಕೂಡಲೇ ಇತ್ತ, ಪುಟ್ಟಸ್ವಾಮಿಗೌಡರು ಸ್ವರ್ಗಸ್ಥರಾಗಲಾಗಿ ಗೌಡರು ಇಪ್ಪತ್ತು ಕೋಟಿ ಹೋದರೂ ಪರವಾಗಿಲ್ಲ, ಅಂತೂ ಹಾಸನದ ಶನಿ ತೊಲಗಿತು ಎಂದು ಪುಟ್ಟಪರ್ತಿಯಿಂದ ಪ್ರಸನ್ನವಧನವಾಗಿ ಹೆಲಿಕಾಪ್ಟರ್ ಹತ್ತಿದರಂತಲ್ಲಾ, ಥೂತ್ತೇರಿ!!

* * * * * * *


ಗೌಡರ ಪಾಳಯದ ಪತನಗಳು ಈ ರೂಪದಲ್ಲಿ ಆರಂಭವಾಗಿರಬೇಕಾದರೆ, ಇತ್ತ ನಮ್ಮ ಗಾರ್ದಭ ಗಂಟಲ ಸಿ. ಅಶ್ವತ್ಥ್ ಎಂಬ ಹಾಡುಗಾರ, ತನ್ನಂತೆಯೇ ಕೂಗುವವರ ಹಿಂಡು ಮಾಡಿಕೊಂಡು ಅಲ್ಲಲ್ಲೇ ಕಾರ್ಯಕ್ರಮಗಳನ್ನು ಚಚ್ಚುತ್ತಿದ್ದಾರಂತಲ್ಲಾ, ಅವರು ಹೀಗೇ ಸಾಗುತ್ತಿರಬೇಕಾದರೆ, ಮಂಡ್ಯ ಜಿಲ್ಲೆಯ ಹಳ್ಳಿಯೊಂದರ ಜನ ಕೈತುಂಬಾ ಕಾಸು ಕೊಟ್ಟು, ಮೈತುಂಬ ಶಾಲು ಕೊಟ್ಟು, ಗಂಟಲು ತುಂಬ ಎಣ್ಣೆಯನ್ನು ಕೊಟ್ಟು "ಹಾಡಿ ಗುರು ಕೇಳನಾ" ಎಂದವಂತಲ್ಲಾ.

ಆ ಕೂಡಲೇ ಅಶ್ವತ್ಥ್ "ಯಾವನ್ಲ ಅವುನು ದನ ಬಿಟ್ಟು ಹೊಲ ಮೇಸ್ತಾಯಿರೋದು, ಲೇಯ್" ಎನ್ನುವಂತೆ ಕೂಗಲಾಗಿ ದೂರದಲ್ಲಿ ದನಕರ ಬಿಟ್ಟುಕೊಂಡವರೆಲ್ಲ ಕಂಗಾಲಾಗಿ ತಮ್ಮ ದಾಸುಗಳನ್ನು ತಹಬಂದಿಗೆ ತುಂದುಕೊಂಡು ಹುಷಾರಾದರಂತಲ್ಲಾ. ಬೈಗುಳದ ಕೂಗಿನ ರೀತಿಯಲ್ಲಿ ಅಶ್ವತ್ಥ ಮುಂದುವರಿಯಲಾಗಿ, ನೆರೆದಿದ್ದ ಜನಕ್ಕೆ ಎಮ್ಮೆ ದನಕರ ನೆನಪಾಗಿ "ಥೂ ಇವನ ಮನಿಕಾಯ್ವಾಗ. ಹಾಡೇಳ್ರಿ ಅಂತ ಹಿಂಗೂ ಕೂಗದೇನ್ರಿ" ಎಂದುಕೊಂಡು ಹೊರಟರಂತಲ್ಲಾ.

ಜನ ಹೋದನಂತರ ಅಶ್ವತ್ಥ್ ಸಾರಿಗೆ ಮಂತ್ರಿಯನ್ನು ಕಂಡು "ನಾಡಗೀತೆಗೆ ನಮ್ಮ ಸಂಗೀತವನ್ನೇ ಅಳವಡಿಸಿ ಸಾರ್. ಇಲ್ಲವಾದರೆ ಸರ್ಕಾರಿ ಬಸ್ಸಿನ ಚಕ್ರಕ್ಕೆ ತಲೆಕೊಟ್ಟು ಸಾಯುತ್ತೇನೆ" ಎಂದರಂತಲ್ಲಾ. ಇದನ್ನು ಕೇಳಿ ಹೆದರಿದ ಸಾರಿಗೆ ಸಚಿವರು ಕೂಡಲೇ ಅರವತ್ತು ಎಂಬತ್ತು ಆಳತೆ ಸ್ಕೈಟುಕೊಟ್ಟು "ಸಾರ್ ತಾವು ಆ ಜಾಗದಲ್ಲಿ ನಿಂತು ಎಷ್ಟಾದರೂ ಕೂಗಿಕೊಳ್ಳಿ. ಆದರೆ ನನ್ನ ಖಾತೆಲಿರೊ ಯಾವ ಬಸ್ಸಿಗೂ ನಿಮ್ಮ ಬೆಲೆತಲೆಯನ್ನು ಅರ್ಪಿಸಬೇಡಿ" ಎಂದು ಅಂಗಲಾಚಿದರಂತಲ್ಲಾ, ಕೂಡಲೇ ಅಶ್ವತ್ಥ "ಕೋಡಗನ ಕೋಳಿ ನುಂಗಿತ್ತಾ ನೋಡವ್ವ ತಂಗಿ, ಗಂಟಲೊಂದು ಸ್ಕೈಟು ನುಂಗಿತ್ತಾ" ಎಂದು ಶೀಟಿ ಹೊಡೆಯುತ್ತ ಹೊರಟರಂತಲ್ಲಾ, ಥೂ, ಥೂ, ಥೂತ್ತೇರಿ!!!

–ಯಾತೂ

"ಯಾವ ನೋಟು, ಎಷ್ಟು ಬಂಡಲು ಅಂತ ಹೇಳ್ತೀನಿ"





ಜನಾರ್ಧನ ರೆಡ್ಡಿಯ ಮನೆ ಮತ್ತು ರಕ್ಷಣಾ ಕೋಟೆ

ಜೀವ ಬೆದರಿಕೆ!

'ಬಳ್ಳಾರಿ ಟೈಗರ್', ಜನಾರ್ಧನ ರೆಡ್ಡಿಯ ಸಂದರ್ಶನ ಇದು. 150 ಕೋಟಿ ರೂಪಾಯಿಗಳ ಗಣಿ ಲಂಚ ಹಗರಣದ ಬಗ್ಗೆ ಒಮ್ಮೆ ವಿಧಾನಸಭಾ ಅಧಿವೇಶನದಲ್ಲಿ, ಇನ್ನೊಮ್ಮೆ ಸಣ್ಣ ಅವಧಿಯ ಪತ್ರಿಕಾಗೋಷ್ಠಿಯಲ್ಲಿ ರೆಡ್ಡಿ ಮಾತನಾಡಿದ್ದು ಬಿಟ್ಟರೆ ಒಂದು ದೀರ್ಘ ಸಂದರ್ಶನ ಅಂತಾ ರೆಡ್ಡಿ ಮಾತನಾಡಿರುವುದು ಇದೇ ಮೊದಲ ಬಾರಿ.



ತೌಡೂರು

ಈ ಸ್ವತಂತ್ರ ವೀಡಿಯೋ ಸಂದರ್ಶನ ನಡೆಸಿದವರು ಪತ್ರಕರ್ತ ಚಂದ್ರಶೇಖರ ತೌಡೂರು. ಕನ್ನಡದ ಬಹುತೇಕ ಸುದ್ದಿ ಮಾಧ್ಯಮಗಳು ಈ ಸ್ಫೋಟಕ ಸಂದರ್ಶನದ ಮಹತ್ವವನ್ನು ಕಡೆಗಾಣಿಸಿದವು. ಅದಕ್ಕೆ ಕಾರಣ ಗೊತ್ತಾಗುತ್ತಿಲ್ಲ, ಆದರೆ ಸಿಡಿಯ ಒಂದು ಪ್ರತಿ 'ಲಂಕೇಶ್'ಗೆ ಸಿಕ್ಕಿದ್ದು, ಸಂದರ್ಶನದಲ್ಲಿ ಜನಾರ್ಧನ ರೆಡ್ಡಿಯವರು ದೇವೇಗೌಡ, ಕುಮಾರಸ್ವಾಮಿ, ಚನ್ನಿಗಪ್ಪ, ಎಂ.ಪಿ. ಪ್ರಕಾಶ್‌ರ ಭ್ರಷ್ಟಾಚಾರಗಳ ಬಗ್ಗೆ ಹೇಳಿರುವ ಕೆಲ ಪ್ರಮುಖ ವಿಚಾರಗಳ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸಿದ್ದೇವೆ.

ಅಷ್ಟೇ ಅಲ್ಲ,

ತೋಳ್ಬಲ, ದುಡ್ಡು, ರಾಜಕೀಯ ಪ್ರಭಾವವಿರುವ ಸಾಕ್ಷಾತ್ ಜನಾರ್ಧನ ರೆಡ್ಡಿಯಂತಾ ವ್ಯಕ್ತಿಗಳೇ ಜೀವ ಬೆದರಿಕೆಯ ಭೀತಿ ಎದುರಿಸುತ್ತಿರುವುದರ ಬಗ್ಗೆ ಸೂಕ್ಷ್ಮ ಮಾತುಗಳು ಇಡೀ ಸಂದರ್ಶನದುದ್ದಕ್ಕೂ, **under current** ನಂತೆ ಪ್ರವಹಿಸಿದೆ.

ಕರ್ನಾಟಕ ಜನತೆ ಈಗ ಸ್ವಲ್ಪ ಸಮಾಧಾನ ಹಾಗೂ ವಿವೇಚನೆಯಿಂದ ಈ ಇಡೀ ಗಣಿ ಲಂಚ ಪ್ರಕರಣವನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕಿದೆ.

ಗಣಿ ಲಂಚ ವಿವಾದ ಸ್ಫೋಟಗೊಂಡು ಹತ್ತಿರತ್ತಿರ ಒಂದು ತಿಂಗಳಾಗುತ್ತಿದೆ. ದೇವೇಗೌಡರ ಮಕ್ಕಳು ಬಿಎಸ್‌ಕೆ ಮೈನಿಂಗ್ ಕಂಪನಿ ಸ್ಥಾಪಿಸಿ ಅದಿರಿನ ಟ್ರೇಡಿಂಗ್ ಶುರು ಮಾಡಿ ನೂರಾರು ಕೋಟಿ ರೂ.ಗಳ ಲಾಭದ ರುಚಿ ನೋಡಿದ್ದಾರೆ. ಇದು ಚಿಲ್ಲರೆ ಕಾಂಟ್ರಾಕ್ಟು, ವರ್ಗಾ ಧಂದೆ, ಪರ್ಸೆಂಟೇಜ್ ಡೀಲುಗಳಲ್ಲಿ ಕಮಾಯಿಸಬಹುದಾದ ಹಣಕ್ಕಿಂತಲೂ ಒಂದೇ ಏಟಿಗೆ ಬಾಚಿಕೊಳ್ಳಬಹುದಾದ ಭಾರಿ ಸಂಪತ್ತು, ಹಾಗೂ ದೀರ್ಘಕಾಲ ಮುಂದುವರೆಸಿಕೊಂಡು ಹೋಗಬಹುದಾದ ಲೀಗಲ್(?) ವ್ಯವಹಾರ. ಆದರೆ ಗೌಡರ ಮಕ್ಕಳು ಈ ಧಂದೆಗೆ ಕಾಲಿಟ್ಟಾಗ ಬಳ್ಳಾರಿಯು ಗಣಿ ಉದ್ಯಮಿಗಳಿಂದ ಗಿಜಿಗುಟ್ಟುತ್ತಿತ್ತೇ ವಿನಃ **No man's Land** ಆಗಿರಲಿಲ್ಲ, ಆದರೆ ಕಳೆದ ಫೆಬ್ರವರಿಯಲ್ಲಿ ಕೋ-ಜಾ ಸರ್ಕಾರ ಬಂದು ಗೌಡರ ಮಗ ಕುಮಾರಸ್ವಾಮಿ ಮುಖ್ಯಮಂತ್ರಿಯಾದರು. ಗೌಡರು ತಮ್ಮ ಕೈಯಾಳು ಚೆನ್ನಿಗಪ್ಪನನ್ನೇ ಅರಣ್ಯ ಮಂತ್ರಿ ಮಾಡಿ ಬಳ್ಳಾರಿ ಗಣಿ ಮಾಲೀಕರ ಮೇಲೆ ಛೂ ಬಿಟ್ಟರು.

ಅಲ್ಲಿಗೆ ಹೋದ ಚೆನ್ನಿಗಪ್ಪನ ನಡವಳಿಕೆ, ಸರ್ಕಾರದ ವರ್ತನೆ ಹಾಗೂ ಗಣಿ ಮಾಲೀಕ ರೆಡ್ಡಿಯ ಬಂಡಾಯ.... ಇವೆಲ್ಲವನ್ನೂ ಒಟ್ಟಿಗೆ ಇಟ್ಟು ನೋಡಿದಾಗ ಸಿಗುವ ಚಿತ್ರಣವೇನೆಂದರೆ....

ಒಂದು, ಸಾವಿರಾರು ಕೋಟಿ ಗಳಿಸುತ್ತಿರುವ ಗಣಿ ಮಾಲೀಕರಿಂದ ಸಾಕಷ್ಟು ತೂಕದ ಹಣವನ್ನು ಜೆಡಿಎಸ್‌ಗೆ (ಅರ್ಥಾತ್ ಗೌಡರ ಕುಟುಂಬಕ್ಕೆ) ಕಿತ್ತುಕೊಳ್ಳುವುದು.

ಎರಡನೆಯದಾಗಿ ಗೌಡರ ಕುಟುಂಬದ ಬಿಎಸ್‌ಕೆ ಮೈನಿಂಗ್ ಕಂಪನಿಗೆ ಬಳ್ಳಾರಿ ಗಣಿ ಪ್ರದೇಶದಲ್ಲಿ ಬಲಿಷ್ಠ ಖಾಯಂ ಕಂಟ್ರೋಲ್ ಸಿಗುವಂತೆ ನೋಡಿಕೊಳ್ಳುವುದು. ಅಂದರೆ ಇಡೀ ಗಣಿ ಉದ್ಯಮವನ್ನೇ **Take over** ಮಾಡುವ ಆಕ್ರಮಣಕಾರಿ ನಡವಳಿಕೆಯನ್ನು ಗೌಡರ ಕುಟುಂಬ ಪ್ರದರ್ಶಿಸಿದೆ. ಈ ಬೆದರಿಕೆ ಹಾಗೂ ಒತ್ತಡಕ್ಕೆ ಸಣ್ಣಪುಟ್ಟ ಗಣಿ ಮಾಲೀಕರು, ರಾಮಮೂರ್ತಿ ತರದ ಅದಿರು ಸರಬರಾಜುದಾರರು ಶರಣಾಗಿದ್ದಾರೆ. ಆದರೆ ಜನಾರ್ಧನ ರೆಡ್ಡಿ ಅನಿರೀಕ್ಷಿತವಾಗಿ ತಿರುಗಿಬಿದ್ದರು. ಅದಕ್ಕೆ ಕಾರಣವೂ ಇತ್ತೆನ್ನಿ. ರೆಡ್ಡಿ ಮೊದಲಿಂದಲೂ ಇದೇ ವ್ಯವಹಾರದಲ್ಲಿರುವ ವ್ಯಕ್ತಿ, ಅವರ ಲಾಭ, ರಿಸ್ಕು, ಬೆದರಿಕೆ ಎಲ್ಲಾ ಬಲ್ಲಾತ; ಅರಗಿಸಿಕೊಳ್ಳಬಲ್ಲ ಶಕ್ತಿಯೂ ಇದೆ.

ಬಿಳಿದಾಳೆ ಈಶ

ಆದರೆ ದುಡುಕಿ ಎಡವಿದ್ದು ಮಾತ್ರ ಕುಮಾರಸ್ವಾಮಿ. ಸರ್ಕಾರ ತಮ್ಮ ಕೈಲೇ ಇದೆ. ಯಾರನ್ನು ಬೇಕಾದರೂ ಪಳಗಿಸಬಹುದೆಂದು ಭಾವಿಸಿದ್ದರೇನೋ ಗೌಡರ ಪುತ್ರತ್ರಯರು. ಆದರೆ ತನ್ನ ಗಣಿ ಸಾಮ್ರಾಜ್ಯ ಬಿಟ್ಟು ಹೊರನಡೆಯಲು ಸಿದ್ಧರಿರದಿದ್ದ ರೆಡ್ಡಿ ತಿರುಗಿಬಿದ್ದರು. ಬಹುಶಃ ರೋಲ್‌ಕಾಲ್‌ಗೆಂದು ಬಂದಿದ್ದ ಪೆದ್ದ ಚೆನ್ನಿಗಪ್ಪನನ್ನು ಟ್ರ್ಯಾಪ್ ಮಾಡಿ ರೆಡ್ ಹ್ಯಾಂಡಾಗಿ ಸಿಕ್ಕಿಬೀಳುವಂತಾ ಕೆಲವು ಎವಿಡೆನ್ಸುಗಳನ್ನು ಸಿದ್ಧ ಮಾಡಿಕೊಂಡಿದ್ದಾರೆ ರೆಡ್ಡಿ. ಒಟ್ಟಾರೆ ಇಡೀ ಲಂಚ ಹಗರಣ ಗಣಿ ಉದ್ಯಮದ ನಿಯಂತ್ರಣಕ್ಕೆ ನಡೆದ ಸಂಘರ್ಷದ ಒಂದು ಪರಿಣಾಮ ಅಷ್ಟೇ. ಜನಾರ್ಧನ ರೆಡ್ಡಿಯವರ ಸಂದರ್ಶನದುದ್ದಕ್ಕೂ ವ್ಯಕ್ತವಾಗಿರುವ ಅಂಶವೂ ಇದೇನೆ.

ಬಳ್ಳಾರಿ ಗಣಿ ಮಾಲೀಕರು ಸದಾ ಜೀವಭಯದಲ್ಲೇ ಇರುತ್ತಾರೆಂಬುದನ್ನು ಸ್ವತಃ ರೆಡ್ಡಿಯವರೇ ಹೇಳಿದ್ದಾರೆ. ಓಡಾಟಕ್ಕೆ ಹೆಲಿಕ್ಯಾಪ್ಟರ್, ಶಸ್ತ್ರಸಜ್ಜಿತ ಬಾಡಿಗಾರ್ಡ್ಸ್‌ಗಳೆಲ್ಲಾ ಅವರಿಗೆ ಬೇಕಾಗಿ ಬಂದಿರುವುದು ಈ ಬೆದರಿಕೆ ಕಾರಣಗಳಿಂದಾಗಿಯೇ.

ಈ ಗಣಿ ಉದ್ಯಮದ ಕಂಟ್ರೋಲಿಗಾಗಿ ನಡೆದಿರುವ ಈಗಿನ ಕಾದಾಟದಲ್ಲಿ ರೆಡ್ಡಿ ಮತ್ತೆ "ನನಗೆ ಜೀವ ಬೆದರಿಕೆ ಇದೆ" ಎಂದಿರುವುದು ಗಂಭೀರವಾದ ವಿಚಾರವಾಗಿದೆ.

ಬಳ್ಳಾರಿ ಎಸ್ಪಿ ಪಂಕಜ್ ಕುಮಾರ್ ಠಾಕೂರ್‌ರನ್ನು ಸರ್ಕಾರ ಏಕಾಏಕಿ ವರ್ಗಾ ಮಾಡಿರುವುದೂ ಕೂಡ ರೆಡ್ಡಿಯನ್ನು ದುರ್ಬಲಗೊಳಿಸಿ ಏಕಾಂಗಿಯಾಗಿಸಿ ಇನ್ನಷ್ಟು ಭೀತಿ ಹುಟ್ಟಿಸಲು ಎಂಬುದು ಖಚಿತ. ಆದರೆ ಇದರಿಂದ ರೊಚ್ಚಿಗೆದ್ದಿರುವ ಜನಾರ್ಧನ ರೆಡ್ಡಿ ಕೋ-ಜಾಗಳಿಗೆ ಲಂಚದ ಡೈನಾಮೆಟ್ ಇಟ್ಟು ಉಡಾಯಿಸಲು ಸಜ್ಜಾಗಿದ್ದಾರೆ.

150 ಕೋಟಿ ಲಂಚ ಸತ್ಯ

150 ಕೋಟಿ ರೂಪಾಯಿಗಳ ಗಣಿ ಲಂಚದ ಬಗ್ಗೆ ನಾನು ಮಾಡಿರೋದು ಬರೀ ಆರೋಪ ಅಲ್ಲ, ಅದು ಸತ್ಯ. ಸಿಎಂ ಕುಟುಂಬದ ಸದಸ್ಯರ ಮೇಲಿನ ಲಂಚದ ಆರೋಪ ಸತ್ಯ, ನಾನೀಗ ಸತ್ಯ ಹೇಳದಿದ್ದರೆ ಭಗವಂತ ಕ್ಷಮಿಸಲ್ಲ.

ಬಳ್ಳಾರಿ ಸಮಾಜಘಾತುಕ ಶಕ್ತಿಗಳ ಪ್ರದೇಶ


ನಾನು ಬಳ್ಳಾರೀಲೇ ಹುಟ್ಟಿ ಬೆಳೆದವನು. ನಾವು ಕಾಂಗ್ರೆಸ್ ಕೋಟೆ ಉರುಳಿಸಿ ಇಡೀ ಜಿಲ್ಲೆಯನ್ನು ಬಿಜೆಪಿಮಯ ಮಾಡಿದ್ದೇವೆ. ಸಚಿವ ಶ್ರೀರಾಮುಲು ಒಳ್ಳೇ ಕೆಲಸ ಮಾಡ್ತಿದ್ದಾರೆ. ಬಳ್ಳಾರಿ ಜಿಲ್ಲೇಲಿ 50 ವರ್ಷದಿಂದಲೂ ಒಂದೇ ಕುಟುಂಬದ ಆಡಳಿತ ಇತ್ತು. ಸಮಾಜಘಾತುಕ ಶಕ್ತಿಗಳೂ ಇದ್ದವು. ಆದರೆ ನಮಗೀಗ ಬಳ್ಳಾರಿನ ಒಂದು ಮಾದರಿ ಜಿಲ್ಲೆ ಮಾಡೋ ಕನಸಿದೆ.

ಭಯದಿಂದ ಲಂಚ ಕೊಟ್ಟಿದ್ದಾರೆ.

ಲಂಚ ತಗೊಳ್ಳೋದು, ಕೊಡೋದು ಎರಡೂ ತಪ್ಪು, ಆದರೆ ಲಂಚ ಕೊಟ್ಟಿರುವವರು ಎಂಥ ಭಯದ ವಾತಾವರಣದಲ್ಲಿ ಕೊಟ್ಟಿದ್ದಾರೆ? ಯಾವ ಸಂದರ್ಭದಲ್ಲಿ ಕೊಟ್ಟಿದ್ದಾರೆ? ಎಂಬುದು ಜನಕ್ಕೆ ಗೊತ್ತಾಗಬೇಕು.

ಸಿಎಂ ಎಷ್ಟು ಬಲಿಷ್ಠ... ನನಗದು ಬೇಕಾಗಿಲ್ಲ

ಸಿಎಂ ಎಷ್ಟು ಉನ್ನತ ಕುಟುಂಬದವರು, ಅವರ ರಾಜಕೀಯ ಬಲ ಎಷ್ಟು ಅನ್ನೋದು ನನಗೆ ಬೇಕಾಗಿಲ್ಲ. ಅವರು "ಕಳೆದ 25 ವರ್ಷದಿಂದ ನಮ್ಮ ಕುಟುಂಬದ ಮೇಲೆ ಭ್ರಷ್ಟಾಚಾರದ ಆರೋಪಗಳು ಬರ್ತಿವೆ" ಅಂದಿದ್ದಾರೆ. ಆದರೆ ಈಗ ಅವರೇ ತೋಡಿಕೊಂಡ ಗುಂಡೀಲಿ ಬೀಳ್ತಾರೆ. ಆತ್ಮಹತ್ಯಾತ್ಮಕ ದಾರಿ ಹಿಡಿದಿದ್ದಾರೆ.



ಕೋಟಿಗೆಷ್ಟು ಸೊನ್ನೆ ಅಂತ ಈಗ ಗೊತ್ತಾ?

150 ಕೋಟಿಗೆ ಎಷ್ಟು ಸೊನ್ನೆ ಅನ್ನೋದೇ ಗೊತ್ತಿಲ್ಲ ಅಂದಿದ್ದು ಕುಮಾರಸ್ವಾಮಿ. ಮೈನಿಂಗ್ ವ್ಯವಹಾರ ಗೊತ್ತಿಲ್ಲ ಅಂತಾನೂ ಹೇಳಿದ್ರು... ಈಗ ಅವರ ಸಹೋದರರಾದ ಡಾ. ರಮೇಶ್, ಬಾಲಕೃಷ್ಣೇಗೌಡರ ಬಿಎಸ್‌ಕೆ ಮೈನಿಂಗ್ ಕಂಪನಿ ವಿಚಾರ ಹೊರಗೆ ಬದ್ದಿದೆ. ಈಗ ಕುಮಾರಸ್ವಾಮಿಯವರಿಗೆ ಕೋಟಿಗೆಷ್ಟು ಸೊನ್ನೆ, ಮೈನಿಂಗ್ ಅಂದರೇನೂಂತ ಗೊತ್ತಾಗಿರಬೇಕು.



ಇದು ಬೆದರಿಸೊ ತಂತ್ರ

ನಾನು 150 ಕೋಟಿ ಲಂಚದ ಆರೋಪ ಮಾಡಿದ ಮೇಲೆ ಅಕ್ರಮ ಗಣಿಗಾರಿಕೆ ನಡೀತಿದೆ ಎನ್ನುತ್ತಿದ್ದಾರೆ. ಅಧಿಕಾರಕ್ಕೆ ಬಂದ 6 ತಿಂಗಳ ನಂತರ, ನಾನು ಲಂಚದ



ಆರೋಪ ಮಾಡಿದ 25 ದಿನಗಳ ನಂತರ ಅವರಿಗೆ ಈಗ ಗಣಿಗಾರಿಕೆಯಲ್ಲಿ ಅಕ್ರಮ ಕಾಣಿಸಿತಾ? ಇದು ಬೆದರಿಸೋ ತಂತ್ರ.

ಸಿಎಂ ಹೆಸರಲ್ಲಿ ಹಣ ಸಂಗ್ರಹ ಆಗಿದೆ


ನನ್ನ **stand** ನಲ್ಲಿ ಎಲ್ಲೂ ಬದಲಾವಣೆ ಇಲ್ಲ, ಪಕ್ಷದ ಹಾಗೂ ಹಿರಿಯ ನಾಯಕರ ಒತ್ತಡದಿಂದ ಹೇಳಿಕೆ ಬದಲಾಯಿಸಿದೆ ಎಂದಿದ್ದಾರೆ, ಆದರೆ ನಾನು ಸಿಎಂ ಹೆಸರಲ್ಲಿ ಹಣ ಸಂಗ್ರಹ ಆಗಿದೆ ಅಂತಾ ಈಗಲೂ ಹೇಳುತ್ತೇನೆ.

ಕುಮಾರಸ್ವಾಮಿ ಭಯ ಸೃಷ್ಟಿಸಿದ್ದಾರೆ

ರಾಜಕೀಯ ಪಕ್ಷಗಳಿಗೆ ಉದ್ಯಮಿಗಳು ಪಾರ್ಟಿ ಫಂಡ್ ಕೊಡೋದು ಇದೆ. ಆದರೆ ಈಗ ಹಣ ಪಡೆಯಲು ಭಯದ ವಾತಾವರಣ ಸೃಷ್ಟಿಸಲಾಗುತ್ತಿದೆ. ಯಾವಾಗ ಯಾರಿಂದ ಫೋನ್ ಬರುತ್ತೋ, ಯಾವ ಕ್ಷಣ ಬೆಂಗಳೂರಿಗೆ ಬಾ, ದೆಹಲಿಗೆ ಬಾ ಅನ್ನುತ್ತಾರೋ ಅಂದು ನಾವು ಸದಾ ಭಯದಲ್ಲೇ ಇರಬೇಕಾಗಿದೆ. ನನ್ನ ಏಳೆಂಟು ವರ್ಷದ ರಾಜಕೀಯ ಅನುಭವದಲ್ಲಿ ಕುಮಾರಸ್ವಾಮಿ ಸೃಷ್ಟಿಸಿರುವಷ್ಟು ಭಯದ ವಾತಾವರಣ ವನ್ನು ಬೇರ್‍ಯಾರಲ್ಲೂ ನೋಡಿರಲಿಲ್ಲ.

ಎಂ.ಪಿ ಪ್ರಕಾಶ್ ಮಗ ರವಿ ದಾಳಿಗೆ ಕುಮ್ಮಕ್ಕು

ಎಸ್ಪಿ ಪಂಕಜ್ ಕುಮಾರ್ ಠಾಕೂರ್ ಒಬ್ಬ ದಕ್ಷ ಅಧಿಕಾರಿ. ಗಣಿ ಮಾಲೀಕರಿಗೆ ಸಮಾಜಘಾತುಕ ಶಕ್ತಿಗಳಿಂದ ಪ್ರಾಣ ಬೆದರಿಕೆ ಪತ್ರ, ಫೋನ್ ಕರೆಗಳು ಬಂದಾಗ ಕ್ರಮ ತಗೊಂಡಿದ್ದಾರೆ. ಬಳ್ಳಾರಿ ಹೋಟೆಲ್‌ನಲ್ಲಿ ಇಬ್ಬರನ್ನು ಅರೆಸ್ಟ್ ಮಾಡಿ ಅವರಿಂದ ಯುಎಸ್ (ಅಮೆರಿಕಾ) ಮೇಡ್ ವೆಪನ್ಸ್ ಸೀಜ್ ಮಾಡಿದ್ದಾರೆ. ಅವರು ತರಬೇತಿಗೆ ಇಟಲಿಗೆ ಹೋಗಿದ್ದಾಗ ಎಂ.ಪಿ. ಪ್ರಕಾಶರ ಮಗ ರವಿ, ಎಂಎಲ್‌ಎ ಸೂರ್ಯನಾರಾಯಣ ರೆಡ್ಡಿ ಕುಮ್ಮಕ್ಕಿನಿಂದ ಎಂಎಸ್‌ಪಿಎಲ್ ಕಂಪನಿ ಮೇಲೆ ದಾಳಿಯಾಯಿತು. ನೂರು ಗಾಡಿಗಳಲ್ಲಿ ಹೋದ ಜನ ಕಂಪನಿಯ ಲಾರಿ, ಸುಮೋಗಳನ್ನು ಸುಟ್ಟು ಹಾಕಿದರು. ಹತ್ತು ಕೋಟಿ ರೂಪಾಯಿಗಳ ಸಾಮಾನುಗಳನ್ನು ಸುಟ್ಟು ಹಾಕಿದರು. ಆದರೆ ಬಳ್ಳಾರಿ ಪೊಲೀಸರು ಮೌನ ಪ್ರೇಕ್ಷಕರಾಗಿದ್ದರು. ಎಸ್ಪಿ ಪಂಕಜ್ ಠಾಕೂರ್ ವಾಪಸ್ ಬಂದ ಮೇಲೆ ಪ್ರಕಾಶ್ ಮಗ ರವಿ, ಸೂರ್ಯನಾರಾಯಣ ರೆಡ್ಡಿ ಮೇಲೆ **FIR** ಹಾಕಿದರು.



ರವಿಗೆ ರೈಸಿಂಗ್ ಕಾಂಟ್ರಾಕ್ಟ್ ಇದೆ


ಬಲ್ಡೋಟಾರ ಎಂಎಸ್‌ಪಿಎಲ್ ಕಂಪನಿ ಇಡೀ ದೇಶದಲ್ಲೇ ದೊಡ್ಡ ಮೈನಿಂಗ್ ಕಂಪನಿ, ರವಿ-ಸೂರ್ಯನಾರಾಯಣ ರೆಡ್ಡಿಯ ವಿನೋದ ಮೈನ್ಸ್ ಅನ್ನೋ ಮೈನಿಂಗ್ ಕಂಪನಿಗೆ ಅವರೊಂದಿಗೆ ರೈಸಿಂಗ್ ಕಾಂಟ್ರಾಕ್ಟ್ ಇತ್ತು. ಅಂತಾ ದೊಡ್ಡ ಕಂಪನಿಗೇ ಹೀಗಾದರೆ ಇನ್ನು ನಮ್ಮಂತವರ ಪಾಡೇನು?

ಬಳ್ಳಾರಿ ಎಸ್‌ಪಿ ಮಾತ್ರ ವರ್ಗಾ ಏಕೆ?

ಎಂ.ಪಿ. ಪ್ರಕಾಶ್‌ರವರು ಎಸ್ಪಿ ವರ್ಗಾವಣೆ ನನ್ನ ಕೈಲಿಲ್ಲ, ಸಿಎಂ ಮಾಡಿದ್ದು ಎಂದಿದ್ದಾರೆ. ಆದರೆ ಈ ಮೊದಲು ಪಂಕಜ್‌ರನ್ನು ಎಸ್ಪಿಯಾಗಿ ಹಾಕಿಸಿದ್ದೇ ನಾನು ಅಂದಿದ್ದರು. ಆಗ ಸಿಎಂ ಬೇಕಿರಲಿಲ್ಲವಾ? ಇಡೀ ಕರ್ನಾಟಕದಲ್ಲಿ 28 ಎಸ್ಪಿಗಳಿದ್ದಾರೆ. ಆದರೆ ಈಗ ಬಳ್ಳಾರಿ ಎಸ್ಪಿ ವರ್ಗಾ ಮಾತ್ರ ಆಗಿದೆ, ಯಾಕೆ?

ನಮಗೆಲ್ಲಾ ಜೀವ ಬೆದರಿಕೆ ಇದೆ

ನಮಗೆಲ್ಲಾ ಎಷ್ಟು ಜೀವ ಬೆದರಿಕೆ ಇದೆ ಅಂದರೆ ಬಳ್ಳಾರಿಯಿಂದ ಬೆಂಗಳೂರಿಗೆ 4 ಗಂಟೇಲಿ ಹೋಗ



ಬಹುದು. ರಸ್ತೆ ಚೆನ್ನಾಗಿದೆ, ಆದರೆ ನಾವು ಹೆಲಿಕ್ಯಾಪ್ಟರ್‌ನಲ್ಲಿ ಹೋಗುತ್ತೀವಿ. ಒಬ್ಬ ಮುಸ್ಲಿಂ ಗಣಿ ಮಾಲೀಕ ಸೆಕ್ಯುರಿಟಿಗಾಗಿ ಸ್ವಂತ ಮಸೀದಿ ಕಟ್ಟಿಸಿಕೊಂಡಿದ್ದಾರೆ. ನಾವೂ ಮುಂದೆ ಸ್ವಂತ ಟೆಂಪಲ್ ಕಟ್ಟಿಸಿಕೊಳ್ಳಬೇಕಾಗುತ್ತೇನೊ!

ದೇವೇಗೌಡ, ಚೆನ್ನಿಗಪ್ಪ ಕಣ್ಣಿಗೆ ಸ್ಯಾಟಲೈಟ್ ಇಟ್ಟಿದ್ರಾ?

ಸಚಿವ ಚೆನ್ನಿಗಪ್ಪ ಫೆಬ್ರವರಿ 17ಕ್ಕೆ ಮಿನಿಸ್ಟರ್ ಆದರು. ಆದಾದ ಮೂರೇ ದಿನಕ್ಕೆ ಬಳ್ಳಾರಿಗೆ ಬಂದು ಬಳ್ಳಾರಿ,



ಸಂಡೂರು ಮೈನಿಂಗ್ ಸೆಕ್ಟರಿನಲ್ಲಿ ಇನ್ಸ್‌ಪೆಕ್ಷನ್ ಎಂದು ಕೇವಲ ಮೂರ್ನಾಲ್ಕು ಗಂಟೆ ಓಡಾಡಿ, ನಂತರ 'ಇಲ್ಲಿ ಅಕ್ರಮ ಗಣಿಗಾರಿಕೆ ನಡೀತಿದೆ' ಎಂದು ಹೇಳಿಕೆ ಕೊಟ್ಟುಬಿಟ್ಟರು. ಸಿಎಂ ಮತ್ತು ಚೆನ್ನಿಗಪ್ಪನವರಿಗೆ ದೇವ ಮಾನವರಾದ ದೇವೇಗೌಡರು ಅವರ ಕಣ್ಣುಗಳಿಗೆ ಸ್ಯಾಟಲೈಟ್ ಇಟ್ಟು ಕಳಿಸಿದ್ದರಾ? ಅವರೇನು ಹೆಲಿಕಾಪ್ಟರ್‌ನಲ್ಲಿ ಓಡಾಡಿ ಇದನ್ನು ಪತ್ತೆ ಮಾಡಿದರಾ? ಗಣಿಗಾರಿಕೆಯಲ್ಲಿ **irregularities** ಇರಬಹುದು. **pollution** ಇತ್ಯಾದಿ ಇರಬಹುದು. ಆದರೆ **illegal** ಅಲ್ಲ.

ಚೆನ್ನಿಗಪ್ಪ ರೆಡ್ಡಿ ಮುಖ ನೋಡಿಲ್ವಾ

ಬಳ್ಳಾರಿಗೆ ಬಂದ ಚೆನ್ನಿಗಪ್ಪ ಅರಣ್ಯ ಇಲಾಖೆಗೆ ಭೇಟಿ ಕೊಟ್ಟು 25 ಫೈಲ್‌ಗಳನ್ನು ಕಾರ್‌ನಲ್ಲಿ ಹಾಕಿಕೊಂಡು ಹೋಗಿದ್ದಾರೆ. ನಮ್ಮ ಮನೆಗೂ ಬಂದು ಊಟ ಮಾಡಿ ಹೋಗಿದ್ದಾರೆ. ಅದನ್ನ ಅನ್ನಪೂರ್ಣೇಶ್ವರಿನೇ ಹೇಳಬೇಕು.

ದುಡ್ಡು ಮಾಡೋ ತಂತ್ರ

ಅಕ್ರಮ ಗಣಿಗಾರಿಕೆ ಅಂತಾ ಚೆನ್ನಿಗಪ್ಪ ಹೇಳಿ ಆರು ತಿಂಗಳಾಯಿತು. ಇದುವರೆಗೂ ಏನು ಕ್ರಮ



ತಗೊಂಡಿದ್ದಾರೆ. ಅಕ್ರಮ... ಅಕ್ರಮ ಎನ್ನುತ್ತಾ ಗಣಿ ಮಾಲೀಕರಲ್ಲಿ **panic** ಸೃಷ್ಟಿಸಿ ದುಡ್ಡು ಮಾಡೋ ತಂತ್ರ ಇದು.

ಸಿಎಂ ಕೈಯಲ್ಲಿ ಏನೂ ಇಲ್ಲ

ಗಣಿಗಾರಿಕೆ ಅಕ್ರಮ, ಅದನ್ನು ನಿಲ್ಲಿಸ್ತೀವಿ ಅಂತಾ ಸಿಎಂ ಪದೇಪದೇ ಅಂದಿದ್ದಾರೆ. ನಾನು ಲಂಚದ ಆರೋಪ ಮಾಡಿದ್ದಕ್ಕೆ ಹೀಗೆ ಮಾತಾಡಿದ್ದಾರೆ. ಆದರೆ ಅದು ಅವರ ಕೈಲಿಲ್ಲ ಅಂತಾ ಅವರಿಗೆ ಆಮೇಲೆ ಗೊತ್ತಾಯಿತು.

ಹಣ ವಸೂಲಿ ಸಾಕ್ಷಿ ಇದೆ

ಗಣಿ ಲಂಚ ಹಗರಣದಲ್ಲಿ ಸಿಎಂ, ಚೆನ್ನಿಗಪ್ಪ, ಗೃಹಮಂತ್ರಿ ಕುಟುಂಬದವರು ನೇರವಾಗಿ ಭಾಗಿಯಾಗಿದ್ದಾರೆ. ಈ ನನ್ನ ಹೇಳಿಕೆ ಬದಲಾಗಲ್ಲ.

ಶ್ರಾವಣ ಮಾಸ ಕಳೆದ ಮೇಲೆ ಸಾಕ್ಷ್ಯಾಧಾರ ಸಮೇತ ರಾಜ್ಯದ ಜನತೆಗೆ ನೋಡಲು ಕೊಡುತ್ತೇನೆ.

ಕುಮಾರಸ್ವಾಮಿ ಫೋಟೋ ತೋರಿಸಿ ಗೆದ್ದಿಲ್ಲ

ಕುಮಾರಸ್ವಾಮಿ 'ಸಿಎಂ ಹುದ್ದೆ ಖಾಯಂ ಅಲ್ಲ, ರೆಡ್ಡಿ ಸುಳ್ಳು ಆರೋಪ ಮಾಡ್ತಿದ್ದಾರೆ, ನಾವು ಎಲೆಕ್ಷನ್‌ಗೆ ಹೋಗೋಕೆ ರೆಡಿ' ಅಂದಿದ್ದಾರೆ. ಆದರೆ ಅವರು ಎಚ್.ಡಿ. ಕುಮಾರಸ್ವಾಮಿ ಫೋಟೋ ಇಟ್ಟುಕೊಂಡು ಎಲೆಕ್ಷನ್ ಗೆದ್ದಿಲ್ಲ, ಯಾರದ್ದೋ ಫೋಟೋ ತೋರಿಸಿ 50-60 ಜನ ಗೆದ್ದಿದ್ದಾರೆ ಅಷ್ಟೇ.

ಸಿಎಂ ಪ್ರಾಮಾಣಿಕರೇ ಆಗಿದ್ದರೆ.....

ಸಿಎಂ ಪ್ರಾಮಾಣಿಕರೇ ಆಗಿದ್ದರೆ ರಾಜೀನಾಮೆ ಕೊಟ್ಟು ಸಿಬಿಐ ತನಿಖೆ ಮಾಡಿಸಲಿ. ನನಗೆ ನ್ಯಾಯಾಂಗದ ಬಗ್ಗೆ ಗೌರವ ಇದೆ, ಆದರೆ ಇದು ಅದರ ವ್ಯಾಪ್ತಿಗೆ ಬರಲ್ಲ, ನೂರಾರು **transaction** ಗಳು ನಡೆದಿದೆ, ಸಿಬಿಐ ತನಿಖೆನೇ ಆಗಲಿ.

ತಲೆ ಕೆಟ್ಟಿದೆ, ಮಾನಸಿಕ ಅಸ್ವಸ್ಥ

ನಾನು ಬಿಜೆಪಿ ಕಾರ್ಯಕರ್ತ, ಲಂಚದ ಆರೋಪ ಮಾಡಿದ್ದಕ್ಕೆ ರೆಡ್ಡಿ ಕಾಂಗ್ರೆಸ್ ಸೇರುತ್ತಿದ್ದಾರೆ, ನನಗೆ ತಲೆ ಕೆಟ್ಟಿದೆ ಎಂದೆಲ್ಲಾ ಅಂತಿದ್ದಾರೆ, ಆದರೆ ಆರು ತಿಂಗಳ ಹಿಂದೆ ಇವರೇ ಕಾಂಗ್ರೆಸ್ ಜೊತೆಲಿದ್ದರಲ್ಲಾ. ನನ್ನನ್ನು ಕೇಳೋ ನೈತಿಕ ಹಕ್ಕು ಅವರಿಗಿದೆಯಾ?

ಬಿಜೆಪಿ ಬೆಂಬಲ

ಸಿಎಮ್ಸ್ ಯಡಿಯೂರಪ್ಪನವರು ಭ್ರಷ್ಟಾಚಾರದ ವಿರುದ್ಧದ ನನ್ನ ಹೋರಾಟ ಬೆಂಬಲಿಸಿದ್ದಾರೆ. [illegible] ನಾಯಕರು ಕೂಡ 'ರೆಡ್ಡಿ ನಡೆ [illegible]' ಇಲ್ಲ ಅಂದಿಲ್ಲ, [illegible] ಅಷ್ಟೇ

ಸುಷ್ಮಾ, ವೆಂಕಯ್ಯಗೆ ಹೇಳಿ ಬಂದಿದ್ದೀನಿ...

ಇವತ್ತು ಭ್ರಷ್ಟಾಚಾರ, ಭಯದ ವಾತಾವರಣದ ಬಗ್ಗೆ ನಾನು ಮಾತನಾಡದೇ ಹೋದರೆ ಬಿಜೆಪಿ ಕಾರ್ಯಕರ್ತನಾಗಿ **voice rise** ಮಾಡಿದ್ದೇ ತಪ್ಪು ಅನ್ನೋದಾದ್ರೆ ನಾನೇನು ಮಾಡಲಿ. ಸುಷ್ಮಾ ಸ್ವರಾಜ್, ವೆಂಕಯ್ಯ ನಾಯ್ಡುರವರಿಗೆ ವಾಸ್ತವ ಪರಿಸ್ಥಿತಿ ಹೇಳಿ ಬಂದಿದ್ದೀನಿ, ಅವರಿಂದ ಏನೂ ಪ್ರತಿಕ್ರಿಯೆ ಬಂದಿಲ್ಲ.

ಎಷ್ಟು ಸೂಟ್ ಕೇಸ್?

ಹಣಾನ ನಾಲ್ಕೈದು ರೂಪದಲ್ಲಿ ನೀಡಲಾಗಿದೆ.

ಯಾವ ನೋಟು-ಎಷ್ಟು ಬಂಡಲ್

ಒಂದು ಸಾವಿರ ರೂಪಾಯಿ ನೋಟುಗಳ ಬಂಡಲ್ ಅಂದ್ರೂ ಎಷ್ಟು ಬ್ಯಾಗ್ ಆಗುತ್ತೆ ಅನ್ನೋದನ್ನು ನೀವೇ ಹೇಳಬಹುದು. ಎಲ್ಲಾ ನಿಮಗೆ ಗೊತ್ತಿದೆ. ಗಣಿ ಲಂಚದಲ್ಲಿ ಯಾವ ನೋಟು, ಎಷ್ಟು ಬಂಡಲ್ ಅನ್ನೋದು ಅತೀ ಶೀಘ್ರದಲ್ಲೇ ಜನರಿಗೆ ತಿಳಿಯುತ್ತದೆ!

ಭ್ರಷ್ಟ ಸಿಎಂ ರಾಜ್ಯ ಆಳಬಾರದು

ಈ ಸರ್ಕಾರ ಬಿದ್ದರೆ ಅವರೇ ಹೊಣೆ. ಭ್ರಷ್ಟಾಚಾರದ ಕೂಪದಲ್ಲಿ ಅವರೇ ಬಿದ್ದಿದ್ದಾರೆ. ಬಿಜೆಪಿ ಭ್ರಷ್ಟಾಚಾರ ಸಹಿಸಲ್ಲ, ಭ್ರಷ್ಟ ಸರ್ಕಾರ, ಭ್ರಷ್ಟವ್ಯಕ್ತಿ ರಾಜ್ಯವನ್ನು ಆಳಬಾರದು, ಆಡಳಿತ ನಡೆಸಬಾರದು.

ಶಾಲಾ ಬಾಲಕ ರೆಡ್ಡಿ

ಗೌಡರು 'ರೆಡ್ಡಿ ಶಾಲಾ ಬಾಲಕ, ಅಪ್ರಬುದ್ಧ' ಅಂದಿದ್ದಾರೆ. 25 ವರ್ಷದಿಂದ ಅವರ ಕುಟುಂಬದ ಮೇಲೆ ಭ್ರಷ್ಟಾಚಾರದ ಆರೋಪ ಬರುತ್ತಲೇ ಇದೆ ಅಂದಿದ್ದಾರೆ. ಅಂದರೆ ಅವರು ಒಂದು, ಎರಡಲ್ಲ 25 ವರ್ಷದಿಂದಲೂ ಭ್ರಷ್ಟಾಚಾರ ಮಾಡಿಕೊಂಡೇ ಬರ್ತಿದ್ದಾರೆ ಅಂತ ಅರ್ಥ.

ಹೆಗಡೆ-ಪಟೇಲ್‌ಗೆ ಏನಾಯಿತು

ದೇವೇಗೌಡರಿಂದ ಹೆಗಡೆಗೆ, ಪಟೇಲ್‌ರಿಗೆ ಈಗ ಪಟೇಲರ ಅವರ ಮಗನಿಗೆ ಎಷ್ಟು ಉಪಕಾರ ಆಗಿದೆ ಅನ್ನೋದು ಜನರಿಗೆ ಗೊತ್ತಿದೆ.

ಭೂಮಿ ಹರಾಜಿಗಿಡಲಿ, ರೇಟ್ ಗೊತ್ತಾಗುತ್ತೆ

ಚೆನ್ನಿಗಪ್ಪ ಫೆಬ್ರವರಿ 20 ಕ್ಕೆ ಬಳ್ಳಾರಿಗೆ ಬಂದರು. ಮಾರ್ಚ್ ತಿಂಗಳ 23ಕ್ಕೆ ಗೌಡರ ಫ್ಯಾಮಿಲಿ ಬೆಂಗಳೂರಿನಲ್ಲಿ ಆಸ್ತಿ ಖರೀದಿ ಮಾಡಿದ್ದಾರೆ. ಆ ಆಸ್ತಿ ಬೆಲೆ 36 ಕೋಟಿ ಅಂತಾ ತೋರಿಸಿದ್ದಾರೆ. ಆದರೆ ಅದನ್ನೇ ಹರಾಜಿಗಿಡಲಿ. ಅದರ ಬೆಲೆ 36 ಕೋಟಿ ಅಲ್ಲ, ಈಗಲೂ ಬೇರೆಯವರ, ಅವರ ಸಾಲ ಎಲ್ಲಾ ತೀರಿಸಿ



ಗುಡ್‌ವಿಲ್ ಕೊಟ್ಟು ಖರೀದಿಸಲು ಸಿದ್ಧರಿದ್ದಾರೆ. ಅದರ ಬೆಲೆ 80 ಕೋಟಿನಾ 90 ಕೋಟಿನಾ ಅನ್ನೋದು ಪಬ್ಲಿಕ್ ಹರಾಜಿಗಿಟ್ಟರೆ ಗೊತ್ತಾಗುತ್ತೆ. ಬ್ಲಾಕ್‌ಮನಿ ನೀಡಿ ಇದನ್ನು ಖರೀದಿಸಿದ್ದಾರೆ. ಕೇಳಿದರೆ ನ್ಯಾಯಾಂಗ ತನಿಖೆ ಅಂತಾರೆ, ಕೇಳಿದರೆ ನಿಮ್ಮ ಕತೆ ಹೇಳ್ತೀನಿ, ಗಾಜಿನ ಮನೇಲಿದ್ದೀರಿ ಅಂತಾರೆ.

ಸಿಎಂ ಅಧಿಕಾರ ದುರುಪಯೋಗ

ಬಳ್ಳಾರಿ ಪೊಲೀಸ್‌ಗೆ ಈಗ ಇದೇ ಕೆಲಸ. ಫೋನ್ ಟ್ಯಾಪಿಂಗ್, ಇಂಟೆಲಿಜೆನ್ಸ್ ದುರುಪಯೋಗ ಮಾಡಿಕೊಂಡು ಸಿಎಂ ನನ್ನ ಮೂವ್‌ಮೆಂಟ್ಸ್ ತಿಳಿಯುತ್ತಿದ್ದಾರೆ.

ದೇಶದ್ರೋಹಿಗಳ ಮೇಲೆ ನಿಗಾ ಇಡಬೇಕಾಗಿದ್ದ ಇಂಟೆಲಿಜೆನ್ಸ್‌ನವರನ್ನು ನನ್ನ ಮೇಲೆ ಬಿಟ್ಟಿದ್ದಾರೆ. ಇವರಿಗೆ ಸರಿಯಾದ ಪಾಠ ಕಲಿಸುತ್ತಾರೆ

ಸಿಎಂ [illegible]


[illegible]


[illegible]

ಜಮೀರ್, ಚಲುವರಾಯನ ಮೇಲೆ ಕುಮಾರಣ್ಣನಿಗೆ ಕೋಪವೇಕೆ?

ಆತಂಕಿತ ರೂಪ ಸಮ್ಮಿಶ್ರ ಸರ್ಕಾರದ ಮಿತ್ರ ಪಕ್ಷಗಳಲ್ಲೀ ಅಂತರಿಕ ಭಿನ್ನಮತಗಳು ಭುಗಿಲೆದ್ದಿರುವುದು ಈಗ ಬಹಿರಂಗ. ಭಾರತೀಯ ಜನತಾ ಪಕ್ಷದಲ್ಲಿ ಜನಾರ್ದನ್ ರೆಡ್ಡಿಯ 'ಗಣಿ' ಬಂಡಾಯವಾದರೆ, ಜಾತ್ಯತೀತ ಜನತಾದಳದ ಶಾಸಕ ಮತ್ತು ಸಚಿವರಲ್ಲಿ ಅಸಮಾಧಾನ, ಅದೇನೋ ಇರುಸು-ಮುರುಸು. ಈ ಹಿನ್ನೆಲೆಯಲ್ಲಿ ಭಾರತೀಯ ಜನತಾ ಪಕ್ಷ, ವಿಧಾನ ಪರಿಷತ್ ಸದಸ್ಯ ರೆಡ್ಡಿಯನ್ನು ಈಗಾಗಲೇ ಪಕ್ಷದಿಂದ ಅಮಾನತ್ತುಗೊಳಿಸಿದೆ. ಜಾತ್ಯತೀತ ಜನತಾದಳದ ಕೆಲವು ಸಚಿವರು ಸಚಿವ ಸಂಪುಟದಿಂದ ಹೊರಬೀಳುವ ಲಕ್ಷಣಗಳು ಕಾಣುತ್ತಿವೆ. ಇದಕ್ಕೆ ಕಾರಣಗಳನ್ನು ಹುಡುಕುತ್ತಾ ಹೊರಟರೆ, ಅವರದೇ ಪಕ್ಷದ ಮೊಗಸಾಲೆಗಳಲ್ಲಿ ಹಲವು ಸುದ್ದಿಗಳು ಹಾರಾಡುತ್ತಿವೆ.

ಈಗ ಸಂಪುಟದಿಂದ ಉಚ್ಚಾಟನೆಗೆ ಒಳಗಾಗುವ ಭೀತಿಯನ್ನು ಎದುರಿಸುತ್ತಿರುವವರಲ್ಲಿ ಮುಖ್ಯರು ವಕ್ಫ್ ಸಚಿವ ಜಮೀರ್ ಅಹಮದ್ ಮತ್ತು ಸಾರಿಗೆ ಸಚಿವ ಚಲುವರಾಯ ಸ್ವಾಮಿ. ಕೇವಲ ವರ್ಷದ ಹಿಂದೆ ಜಮೀರ್ ಅಹಮದ್ ಕುಮಾರಸ್ವಾಮಿಯ ಬಲಗೈ ಬಂಟ, ಆತ್ಮೀಯ ಸ್ನೇಹಿತ, "ಚೊಕ್ಕಸ" ಎಂದೆಲ್ಲಾ ಬಣ್ಣಿಸಲ್ಪಟ್ಟಿದ್ದರು. ಜೆಡಿಎಸ್‌ನ ಕೆಲವು ನಾಯಕರ ಪಾಲಿಗೆ "ಕರೆಯ ಬಲ್ಲವನಿಗೆ ಕಾಮಧೇನುವಿನಂತಿದ್ದರು". ಮೊದಲ ಬಾರಿಗೆ ಶಾಸಕ, ಹಿಂದೆಯೇ ಮಂತ್ರಿ, ಯಾರಿಗುಂಟು ಇಂತಹ ಅದೃಷ್ಟ? ಎಲ್ಲಾ ಕುಮಾರಸ್ವಾಮಿ ಕೃಪೆ. ಆದರೆ ಇಂತಹ ಕುಮಾರಸ್ವಾಮಿಯೊಂದಿಗೆ ಈಗೇಕೆ ಮುನಿಸು?





ಮಂತ್ರಿ ಜಮೀರ್ ಅಹಮದ್


ಜಮೀರ್‌ರನ್ನು ಸಂಪುಟದಿಂದ ಕೈಬಿಡುವಂತಹ ಅನಿವಾರ್ಯತೆ ಮುಖ್ಯಮಂತ್ರಿ ಕುಮಾರಸ್ವಾಮಿಗೇಕೆ?

ಈ ಅನಿವಾರ್ಯಕ್ಕೆ ಜೆಡಿಎಸ್‌ನ ಕೆಲವು ಮುಖಂಡರು ಹೇಳುವ ಕಾರಣಗಳನ್ನು ಕೇಳಿ: ಬಸ್ ಡ್ರೈವರ್ ಆಗಿ ವೃತ್ತಿ ಆರಂಭಿಸಿ ನಂತರ ಬಸ್ ಮಾಲೀಕರಾಗಿ, ನ್ಯಾಷನಲ್ ಟ್ರಾವಲ್ಸ್ ಆರಂಭಿಸಿದ ಜಮೀರ್ ಕಷ್ಟಪಟ್ಟು ಮೇಲೆ ಬಂದವರು. ಅವರು ರಾಜಕೀಯಕ್ಕೆ ಪಾದ ಊರಿದ್ದು ತೀರಾ ಇತ್ತೀಚೆಗೆ. ಇದಕ್ಕೆ ಮುನ್ನ ಅವರ ಬಸ್ಸಿನಲ್ಲಿ ಒಮ್ಮೆ ಸ್ಫೋಟಕ, ಮತ್ತೊಮ್ಮೆ ಖೊಟಾ ನೋಟು ಸಿಕ್ಕ ಪ್ರಕರಣ ನಡೆದಿತ್ತು. ಆದರೆ ಅದಕ್ಕೂ ಜಮೀರ್‌ಗೂ ನೇರ ಸಂಬಂಧವಿರಲಿಲ್ಲ ಬಿಡಿ. ಪ್ರಯಾಣಿಕರ ಸೋಗಿನಲ್ಲಿದ್ದ ಯಾರೋ ವಿದ್ರೋಹಿಗಳು ಇಂತಹ ಘಾತುಕ ವಸ್ತುಗಳನ್ನು ಜಮೀರ್ ಬಸ್ಸಿನಲ್ಲಿ ಸಾಗಿಸುತ್ತಿದ್ದರು. 'ಇದೇನೆ ಇರಲಿ' ಈಗ ನೀವು ಸಚಿವರು ಇಂತಹ ಪ್ರಕರಣಗಳ ಬಗ್ಗೆ ಎಚ್ಚರಿಕೆಯಿಂದಿರಿ' ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ಜಮೀರ್‌ಗೆ ಸಲಹೆ ನೀಡಿದ್ದರಂತೆ. ಆದರೆ ಜಮೀರ್ ಗ್ರಹಚಾರ, ಅವರಿಗೇ ಅರಿವಿಲ್ಲದಂತೆ ಅವರ ಪಾಳಯದಲ್ಲಿ ಮಾಹಿನ್ ಎಂಬ ಗುರುಮಘಾತುಕ ನೆಲಮಂಗಣ್ಣ ಕುಖ್ಯಾತನೊಬ್ಬ ನುಸುಳಿಬಿಟ್ಟಿದ್ದ. ಕಳೆದ ವಿಧಾನಸಭಾ ಚುನಾವಣೆಯವರೆಗೆ ಕಾಂಗ್ರೆಸ್ಸಿನ ರಾಮಲಿಂಗಾರೆಡ್ಡಿಯ ಕ್ಯಾಂಪ್‌ನಲ್ಲಿದ್ದ ಮಾಹಿನ್, ಚಾಮರಾಜಪೇಟೆಯ ಮರುಚುನಾವಣೆ ಸಂದರ್ಭದಲ್ಲಿ ಜಮೀರ್ ಪರ ಬಿರುಸಿನ ಪ್ರಚಾರಕ್ಕಿಳಿದು ಅವರಿಗೆ ಪರಮಾಪ್ತನಾಗಿಬಿಟ್ಟ.


ಜಮೀರ್ ಕಾರು-ಮಾಹಿನ್ ಕಾರುಬಾರು

ಬಹುಶಃ ಜಮೀರ್‌ಗೆ ಮಾಹಿನ್ 'ಕಲ್ಯಾಣ' ಗುಣಗಳ ಬಗ್ಗೆ ಅರಿವಿರಲಿಲ್ಲವೆಂದು ಕಾಣುತ್ತದೆ. ಅವನನ್ನು ತಮ್ಮ ಆಪ್ತ ವಲಯಕ್ಕೆ ಬಿಟ್ಟುಕೊಂಡರು, ಸಾಕಷ್ಟು ಸ್ವಾತಂತ್ರ್ಯ ಕೊಟ್ಟರು. ಕುತಂತ್ರಿ ಮಾಹಿನ್‌ಗೆ ಇಷ್ಟು ಅವಕಾಶ ಸಾಕಲ್ಲವೆ? ಈಗ್ಗೆ ಎರಡು ತಿಂಗಳ ಹಿಂದೆ ಈತ ಶಾಂತಿ ನಗರದ ಲಿಂಡಾ ಕ್ರಿಸ್ಟಿ ಎಂಬ ವೃದ್ಧ ಮಹಿಳೆಯ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಮನೆಯನ್ನು ಖಾಲಿ ಮಾಡಿಸುವ ಡೀಲ್ ಒಪ್ಪಿಕೊಂಡ. ಆ ಆಸ್ತಿ ಹಂಚಿಕೆ ವಿಷಯದಲ್ಲಿ ಲಿಂಡಾ ಹಾಗು ಆಕೆಯ ಸಂಬಂಧಿಗಳ ನಡುವೆ ತಕರಾರು ಉಂಟಾಗಿ ನ್ಯಾಯಾಲಯ ಯಥಾಸ್ಥಿತಿ ಆದೇಶ ನೀಡಿತ್ತು. ಆದೇಶದ ಪ್ರಕಾರ ಲಿಂಡಾ ಮನೆಯಲ್ಲಿ ವಾಸಿಸುತ್ತಿದ್ದರು.


ಲಿಂಡಾರನ್ನು ಮನೆಯಿಂದ ಒಕ್ಕಲೆಬ್ಬಿಸಲು ಡೀಲ್ ಪಡೆದ ಮಾಹಿನ್ ತನ್ನ ದಂಡು ದಾಳಿಯೊಡನೆ ಲಿಂಡಾ ಮನೆಗೆ ಬಲ ವಂತವಾಗಿ ನುಗ್ಗಿ ಆಕೆಯ ಸಾಮಾನು- ಸರಾಂಜಾಮನ್ನು ಹೊರಗೆಸೆದು, ಡೀಲ್ ನೀಡಿದ್ದ ಲಿಂಡಾ ಸಂಬಂಧಿಕರನ್ನು ಆ ಮನೆಯಲ್ಲಿ ಪ್ರತಿಷ್ಠಾಪಿಸಿಬಿಟ್ಟ. ಆದರೆ ಮಾಹಿನ್ ಮಾಡಿದ ಬಹು ದೊಡ್ಡ ತಪ್ಪೆಂದರೆ, ಮನೆ ಖಾಲಿ ಮಾಡಿಸಲು ತೆಗೆದುಕೊಂಡು ಹೋಗಿದ್ದು ಸಚಿವ ಜಮೀರ್‌ಗೆ ಸೇರಿದ್ದ ಅಧಿಕೃತ ಸರ್ಕಾರಿ ಕಾರು. ಸರ್ಕಾರಿ ಕಾರಿನೊಂದಿಗೆ ಮತ್ತೆರಡು ಸ್ಕಾರ್ಪಿಯೊ, ಎರಡು ಟಾಟಾ ಸುಮೋಗಳೂ ಹೋಗಿದ್ದವು. ಈ ಎಲ್ಲಾ ವಾಹನಗಳ ನಂಬರ್‌ಗಳನ್ನು ಬರೆದುಕೊಂಡ ಲಿಂಡಾ ನೇರವಾಗಿ ಪೊಲೀಸರಿಗೆ ದೂರು ನೀಡಿದರು. ಆ ಹೊತ್ತಿಗಾಗಲೇ ಪೊಲೀಸರನ್ನು ಮಾಹಿನ್ ಸರಿಪಡಿಸಿಕೊಂಡಿದ್ದನೆಂದು ಕಾಣುತ್ತೆ. ಸ್ಥಳಕ್ಕೆ ಬಂದ ಪೊಲೀಸರು "ಯಥಾಸ್ಥಿತಿ ಕಾಯ್ದುಕೊಳ್ಳಲು ನ್ಯಾಯಾಲಯ ಆದೇಶ ನೀಡಿದೆ." ಈಗ ಮನೆಯಲ್ಲಿ ಇವರ ಸಂಸಾರವಿದೆ. ಹಾಗಾಗಿ ಅದೇ "ಯಥಾಸ್ಥಿತಿ", ನಾವೇನು ಮಾಡು ವಂತಿಲ್ಲ, ಇದು ಸಿವಿಲ್ ಮ್ಯಾಟರು. ನೀವು ನ್ಯಾಯಲಯಕ್ಕೆ ಹೋಗಿ ಎಂದು ಲಿಂಡಾಗೆ ತಲೆ ಸವರಿ ಹೊರಟು ಹೋದರು.



ಲಿಂಡಾ ಸುಮ್ಮನೆ ಕೂರಲಿಲ್ಲ, ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಈ ಬಗ್ಗೆ ದೂರು ನೀಡಿ ಮನೆ ಖಾಲಿ ಮಾಡಿಸಲು ಬಂದಿದ್ದ ವಾಹನಗಳ ನಂಬರನ್ನು ನೀಡಿದರು. ಆಗ ಪತ್ತೆಯಾಯ್ತು, ಅದರಲ್ಲೊಂದು ಸಚಿವ ಜಮೀರ್ ಅಹಮದ್‌ರವರ ಅಧಿಕೃತ ಸರ್ಕಾರಿ ವಾಹನವೆಂದು. ಈ ವಿಷಯ ಸಚಿವರ ಕಿವಿಗೆ ಬೀಳುವುದು ತಡವೇನು ಆಗಲಿಲ್ಲ, ಸಚಿವರು ಹೌಹಾರಿದರು. ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸಚಿವರ ಕಾರನ್ನು ಮಾಹಿನ್ ತೆಗೆದುಕೊಂಡು ಹೋಗಿದ್ದು ಖುದ್ದು ಅವರಿಗೆ ತಿಳಿದಿರಲಿಲ್ಲ. ಈ ಕಡೆ ಪೊಲೀಸರು ಮಾಹಿನ್ ಮತ್ತು ಆತನ ಸಹಚರ ನನ್ನು ಎಂಬ ಮತ್ತೊಬ್ಬ ರೌಡಿಯ ಬಂಧನಕ್ಕಾಗಿ ಬಲೆ ಬೀಸಿ ಕಾದು ಕೂತರೆ, ವಿಷಯ ತಿಳಿದ ಮುಖ್ಯಮಂತ್ರಿ ಕುಮಾರಸ್ವಾಮಿ ಬೆವೆತು ಹೋದರು.



ಮಂತ್ರಿ ಚಲುವರಾಯ ಸ್ವಾಮಿ



ಮಾಹಿನ್

ತಮ್ಮ ಸರ್ಕಾರದ ಸಚಿವ, ಅದರಲ್ಲೂ ತಮ್ಮ ಆಪ್ತ ವಲಯದ ಜಮೀರ್‌ರವರ ಅಧಿಕೃತ ಸರ್ಕಾರಿ ವಾಹನ ರೌಡಿಯೊಬ್ಬನಿಂದ ಇಂತಹ ಕ್ರಿಮಿನಲ್ ಕೆಲಸಕ್ಕೆ ಬಳಕೆಯಾಗಿದೆಯೆಂದು ಬಹಿರಂಗಗೊಂಡರೆ ತಮಗೆ ಆಪತ್ತು ತಪ್ಪಿದ್ದಲ್ಲ ಎಂದು ಗಾಬರಿ ಬಿದ್ದ ಕುಮಾರಸ್ವಾಮಿ, ಜಮೀರ್‌ಗೆ ಫೋನಾಯಿಸಿದರು. ಆದರೆ ಈ ಪ್ರಕರಣದಿಂದ ತೀವ್ರ ಆತಂಕಕ್ಕೆ ಒಳಗಾಗಿದ್ದ ಜಮೀರ್ ತಮ್ಮ ಮೊಬೈಲ್ ಆಫ್ ಮಾಡಿ ಮುಂಬೈಗೆ ಹಾರಿ ಬಿಟ್ಟದ್ದರು. ಇದು ಕುಮಾರಸ್ವಾಮಿಯ ಅಸಮಧಾನಕ್ಕೆ ಮತ್ತಷ್ಟು ಕಾರಣವಾಯ್ತು. ಆದರೂ ತಮ್ಮ ತಲೆದಂಡ ತಪ್ಪಿಸಿಕೊಳ್ಳಲಿಕ್ಕಾಗಿ ಈ ಪ್ರಕರಣಕ್ಕೆ ತಿಪ್ಪೇ ಸಾರಿಸಿ ರಾಜಿ ಮಾಡಿಸಿ, ಲಿಂಡಾರವರ ಸುಪರ್ದಿಗೆ ಮನೆ ಹಿಂದಿರುಗಿಸ ಲಾಯ್ತು. ಆದರೆ ಈಗ ಮಾಹಿನ್ ಸಹವಾಸದಿಂದಾಗಿ ತಲೆದಂಡ ತೆರಬೇಕಾದ ಪರಿಸ್ಥಿತಿ ಜಮೀರ್ ಅಹಮದ್‌ಗೆ ಬಂದಿದೆ.

ಚಲುವರಾಯನ ಬಸ್ಸು, ನಾರಾಯಣಗೌಡನ ಸ್ಟೇರಿಂಗು

ಇನ್ನು ಸಾರಿಗೆ ಸಚಿವ ಚಲುವರಾಯಸ್ವಾಮಿ. ಮೇಲ್ನೋಟಕ್ಕೆ ಸ್ವಾಮಿಗಳು ಮುಖ್ಯಮಂತ್ರಿಗೆ ಆಪ್ತೇಷ್ಟರಂತೆ ಕಂಡುಬಂದರೂ, ಅವರು ಹಿಂದಿನ ಕಾಂಗ್ರೆಸ್ ಮೈತ್ರಿ ಸರ್ಕಾರದ ಕಾಲದಿಂದಲೂ ಅಸಮಾಧಾನದಿಂದಲೇ ಇದ್ದಾರೆ. ದೇವೇಗೌಡರ ವಂಶಕ್ಕೆ ಅನುಮಾನ ಎಂಬುದು ವಂಶಪಾರಂಪರ್ಯವಾಗಿ ಬಂದ ಬಳುವಳಿ ಇರಬೇಕು. ಎಂತಹ ನಿಷ್ಠಾವಂತರ ಪಕ್ಕದಲ್ಲೂ ಮತ್ತೊಬ್ಬ 'ನಿಷ್ಠಾವಂತ' ವಾಚ್‌ಮನ್ ಕಮ್ ಕಲೆಕ್ಷನ್ ಏಜಂಟ್‌ನನ್ನು ನೇಮಿಸಿರುತ್ತಾರೆ.

ಚಲುವರಾಯಸ್ವಾಮಿ ಆರೋಗ್ಯ ಸಚಿವರಾಗಿದ್ದಾಗ ಆಗಿದ್ದೂ ಇದೆ. ತಿಪ್ಪೇಸ್ವಾಮಿ ಎಂಬ ಪಕ್ಕಾ 'ತೊಗಲು ಗೊಂಬೆ' ವ್ಯಾಪಾರಿಯನ್ನು ಓಎಸ್‌ಡಿ (ಆಫೀಸರ್ ಆನ್ ಸ್ಪೆಷಲ್ ಡ್ಯೂಟಿ) ಎಂದು ಕುಮಾರಸ್ವಾಮಿಯವ[...] ಆದೇಶದ ಮೇರೆಗೆ ನೇಮಿಸಲಾಗಿತ್ತು. ಈತ ಹಿಂ[...] ವೈದ್ಯಕೀಯ ಶಿಕ್ಷಣ ಸಚಿವ ಡಾ. ಪರಮೇಶ್ವರರವರಿ[...] ಓಎಸ್‌ಡಿ ಆಗಿದ್ದ. ಅಲ್ಲಿ ಗೊಂಬೆ ಆಡಿಸಲಾಗ[...] ಹೊರಬಿದ್ದ, ನಂತರ ಸಂಸದ ಅಂಬರೀಶ್ ಮನೆಯ[...] ತಳ ಊರಲು ಹೋಗಿ ಸುಮಲತಾ ತಿಪ್ಪೇಸ್ವಾಮಿ[...] ಅಂದಿನ ಮೇಲೆ ಒದ್ದು ಹೊರಗಟ್ಟಿದ್ದರು. ಅಲ್ಲಿಂದ [...] ನೇರವಾಗಿ ಬಂದಿದ್ದು ಚಲುವರಾಯಸ್ವಾಮಿ ಚೇಂಬರಿ[...]

ರಸಿಕ ಚಲುವರಾಯಸ್ವಾಮಿಗೂ ಸ್ವಲ್ಪ "ತೊಗ[...] ಗೊಂಬೆ" ಆಟದ ಖಯಾಲಿ. ಆ ಕೆಲಸಕ್ಕೆ ತಿಪ್ಪೇಸ್ವಾ[...] ಚೆನ್ನಾಗಿ ಬಳಕೆಯಾಗುತ್ತಿದ್ದ. ಆದರೆ ಕುಮಾರಣ[...] ಆಶೀರ್ವಾದವಿದ್ದ ತಿಪ್ಪೇಸ್ವಾಮಿ, ದೀಢ್ಯಾಕ್ಟೋ ಆರೋ[...] ಸಚಿವನಂತೆ ಬೆಳೆದುಬಿಟ್ಟ. ಓಎಸ್‌ಡಿ ಆಗಿ ಸಚಿ[...] ಕಚೇರಿಯಲ್ಲಿ ಬದ್ದಿರಬೇಕಾದವನು, ಗಾಲ್ಫ್ ಕ್ಲ[...] ಪಕ್ಕದಲ್ಲಿರುವ ನ್ಯಾಕೊ (ನ್ಯಾಷನಲ್ ಏಡ್ಸ್ ಕಂಟ್ರೋ[...] ಆರ್ಗನೈಜೇಷನ್) ಕಚೇರಿಗೆ ಸ್ಥಳಾಂತರಗೊಂಡ[...] ವ್ಯಾಪಾರಕ್ಕೆ ಕುಳಿತುಬಿಟ್ಟ. ಆರೋಗ್ಯ ಇಲಾಖೆ ಮ[...] ಸಚಿವರ ಕಚೇರಿಯಲ್ಲಿ ಈತನ ಪ್ರಭಾವ ಎಷ್ಟ[...] ಮಟ್ಟಗಿತ್ತೆಂದರೆ ವರ್ಗಾವಣೆ, ಬಡ್ತಿ, ಕೆಲಸ ಕೇಳಿಕೊಂಡ[...] ಬರುತ್ತಿದ್ದವರನ್ನು ಸಚಿವರ ಆಪ್ತ ಸಿಬ್ಬಂದಿ ನೇರವಾ[...] ತಿಪ್ಪೇಸ್ವಾಮಿಯ ಹತ್ತಿರ ಕಳಿಸುತ್ತಿದ್ದರು. ಚಲುವರಾ[...] ಸ್ವಾಮಿಯ ಕೈಲಿ ಆಗದ ಕೆಲಸಗಳನ್ನು ತಿಪ್ಪೇಸ್ವಾ[...] ಕುಮಾರಸ್ವಾಮಿ ಮೂಲಕ ಅಂದಿನ ಮುಖ್ಯಮ[...] ಧರ್ಮಸಿಂಗ್‌ರಿಗೆ ಹೇಳಿಸಿ ಮಾಡಿಸುತ್ತಿದ್ದ. ಹೀಗಾ[...] ಚಲುವರಾಯಸ್ವಾಮಿಗೆ ಆರೋಗ್ಯ ಇಲಾಖೆಯಲ್ಲಿ ಕಿಮ್ಮತ್ತಿಲ್ಲದೆ ಉತ್ಸವ ಮೂರ್ತಿಯಾಗಿದ್ದರು. ಇದು ಅಸಮಾಧಾನ ಒಂದು.


ಆರೋಗ್ಯ ಇಲಾಖೆಯು[...]ಲಿದ್ದ ಪರಿಸ್ಥಿತಿಯೇ ಈಗ ಸಾರಿಗೆ ಇಲಾಖೆಯಲ್ಲಿ ಮುಂದುವರಿದಿದೆ. ಇಲಾಖೆಯೇನೋ ಚಿನ್ನದ ಗಣಿಯೇ ಸರಿ. ಆದರೆ ಆರೋಗ್ಯ ಇಲಾಖೆಯಲ್ಲಿ ತಿಪ್ಪೇಸ್ವಾಮಿ ಎಂಬ ಒಬ್ಬ ನಕ್ಷತ್ರಿಕನಿದ್ದ. ಆದರೆ ಸಾರಿಗೆಯಲ್ಲಿ ನಾರಾಯಣಗೌಡ ಐಪಿಎಸ್ ಮತ್ತು ಶ್ರೀನಿವಾ[...] ಓಎಸ್‌ಡಿ ಎಂಬ ಇಬ್ಬರು ನಕ್ಷತ್ರಿಕರು. ಚಲುವರಾ[...] ಸ್ವಾಮಿಯವರೇನೋ ಅಧಿಕಾರ ವಹಿಸಿಕೊಂಡಾಕ್ಷಣ ತ[...] ವ್ಯವಸ್ಥೆ ಮಾಡಿಕೊಂಡರು. ಮಂಜೇಗೌಡ, ಸತ್ಯನ್ ಮ[...] ವೆಂಕಟೇಶ್ ಎಂಬ ತಮ್ಮ ಆಪ್ತ ಆರ್‌ಟಿಓ ಅಧಿಕಾರಿಗ[...] ಬಗಲಿಗೆ ಜೋಳಿಗೆ ಹಾಕಿ ಕಲೆಕ್ಷನ್ನಿಗೆ ಬಿಟ್ಟರು.

ಈ ಮೂವರು ಅಧಿಕಾರಿಗಳೆಂಬ ಏಜಂಟರುಗ[...] ಕುಮಾರಣ್ಣನ ಸರ್ಕಾರ ಅಧಿಕಾರಕ್ಕೆ ಬಂದ ಕೇವಲ [...] ತಿಂಗಳಲ್ಲಿ 245 ವರ್ಗಾವಣೆ (ಇದರಲ್ಲಿ ಶೇ. [...] ಅವಧಿಪೂರ್ವ (Premature) ಮಾಡಿಸಿ ಮ[...] ಮಹೋದಯರಿಗೆ 15 ಕೋಟಿ ರೂಪಾಯಿ ಸಲ್ಲಿ[...] ಧನ್ಯೋಸ್ಮಿ ಎಂದರು. ಇದರಲ್ಲಿ ಮುಖ್ಯಮಂ[...] ಕುಮಾರಣ್ಣನಿಗೆ ಭಾಗವೇ ಹೋಗಲಿಲ್ಲ, ಇದರಿಂ[...] ಕೆಂಡಾಮಂಡಲರಾದ ಕುಮಾರಣ್ಣ, ತಾವು ಸಾರಿ[...] ಇಲಾಖೆಯಲ್ಲಿ ಇಟ್ಟಿದ್ದ ನಾರಾಯಣಗೌಡರೆಂಬ ಟ್ರಾನ್ಸ್[...] ಪೋರ್ಟ್ ಕಮಿಷನರ್ ಮತ್ತು ಶ್ರೀನಿವಾಸನೆಂ[...] ಓಎಸ್‌ಡಿಗೆ ಕೀ ತಿರುವಿ ಬಿಟ್ಟರು.

ಅಲ್ಲಿಂದ ಆರಂಭವಾಯ್ತು ಉಲ್ಟಾಪಲ್ಟಾ. ಚಲುವ[...] ರಾಯಸ್ವಾಮಿ ಯಾವುದೇ ಆದೇಶ ನೀಡಲಿ ಅದ[...] ನಾರಾಯಣಗೌಡರು ಕೊಕ್ಕೆ ಹಾಕುತ್ತಾರೆ. 'ಯಾಕ್ರಿ ಗೌಡ್ರೆ[...] ಎಂದು ಕೇಳಿದರೆ, 'ದೊಡ್ಡ ಗೌಡ್ರು ಹೇಳಿದ್ದಾರೆ ಸಾ[...] ಕುಮಾರಣ್ಣ ಹೇಳಿದ್ದಾರೆ ಸಾರ್, ಅವರ್ಹತ್ರ ಡಿಸ್ಕ[...] ಮಾಡ್ಕೇಕಂತೆ' ಅಂತ ಅಮಾಯಕರಂತೆ ಉತ್ತರಿ[...] ಲಾರಂಭಿಸಿದರು. ಇಲ್ಲಿ ನೋಡಿದರೆ ಚಲುವರಾಯಸ್ವಾ[...] ಕಚೇರಿಯ ತುಂಡು ಚೀಟಿಯಿಂದ ಹಿಡಿದು ಮಹತ್ವ[...] ವಾದ ಫೈಲುಗಳ ಜೆರಾಕ್ಸ್ ಪ್ರತಿಗಳು, ಕೆಲವೊಮ್[...] ಅಸಲಿ ಫೈಲ್‌ಗಳನ್ನೇ ಓಎಸ್‌ಡಿ ಶ್ರೀನಿವಾಸ ನಾಪ[...] ಮಾಡಿರುತ್ತಾನಂತೆ. ಇದು ಚಲುವರಾಯಸ್ವಾಮಿಯವ[...] ಅಸಮಾಧಾನ ಎರಡು.

ಆದರೆ ಸ್ವಾಮಿಯವರ ಆಪ್ತ ಮೂಲಗಳ ಪ್ರಕಾ[...] ಈ ಸಮಸ್ಯೆ ಈಗ ಬಗೆಹರಿದಿದ್ದು, ಕುಮಾರಣ್ಣ-ಚಲುವ[...] ಒಂದಾಗಿದ್ದಾರಂತೆ. ಹಾಗಾಗಿ ಸಂಪುಟದಲ್ಲಿ ಅವರ ಸ್ಥಾ[...] ಭದ್ರ (ಸರ್ಕಾರವೇ ಗ್ಯಾರಂಟಿ ಇಲ್ಲವಲ್ಲ). ಆದ[...] ಕಳೆದವಾರ ನಡೆದ ಸಭೆಗೂ ಬಾರದೆ ಬಿಂಕ ತೋರಿ[...] ಜಮೀರ್ ಅಹಮದ್ ಮೇಲೆ ಯಾವ ಕ್ಷಣ ತೂಗುಕ[...] ಕಳಚಿ ಬೀಳುತ್ತಾರೋ, ಆ ಕುಮಾರಣ್ಣನೇ ಬಲ್ಲ!

–ಎಂ.ಎಸ್. ಸತೀಶ[...]



ಹೃದಯದ ದೃಷ್ಟಿಯಲ್ಲಿ ದೂರವು ದೊಡ್ಡದಾಗಿ ಕಾಣಿಸುತ್ತದ

ಬಿಜೆಪಿಗೆ ಜೇಡರಹಳ್ಳಿ ಟಾಟಾ!



ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಾಗಡಿ ಕ್ಷೇತ್ರದಿಂದ ತನ್ನ ಪತ್ನಿಯನ್ನು ಭಾರತೀಯ ಜನತಾಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಸುವುದರ ಮೂಲಕ ರಾಜಕೀಯಕ್ಕಿಳಿದಿದ್ದ "ಸುಧಾರಿತ" ಭೂಗತ ಲೋಕದ ಡಾನ್ ಎಚ್.ಎಂ. ಕೃಷ್ಣಮೂರ್ತಿ ಅಲಿಯಾಸ್ ಜೇಡರಹಳ್ಳಿ ಕೃಷ್ಣಪ್ಪ ಈಗ ಬಿಜೆಪಿಯ ಹೊರಬಾಗಿಲ ಬಳಿ ಬಂದು ನಿಂತಿದ್ದಾರೆ. ಕೃಷ್ಣಪ್ಪನ ಈ ನಿರ್ಧಾರಕ್ಕೆ ಯಾವ ತಾತ್ವಿಕ ಅಥವಾ ಸೈದ್ಧಾಂತಿಕ ಕಾರಣಗಳೇನಿಲ್ಲ, ಮಚ್ಚ ಮಂಜನ ಕೊಲೆ ಪ್ರಕರಣದಲ್ಲಿ ವಿನಾಕಾರಣ ಪೊಲೀಸರು ತನ್ನನ್ನು ಹಿಡಿದು ಜೈಲಿಗೆ ದಬ್ಬಿದ್ದಾಗ ತಾನು ನಂಬಿದ, ದುಡಿದ ಭಾರತೀಯ ಜನತಾ ಪಕ್ಷದ ಒಬ್ಬನೇ ಒಬ್ಬ ನಾಯಕನೂ ತನ್ನ ಪರವಾಗಿ ಮಾತನಾಡಲಿಲ್ಲವಲ್ಲ ಎಂಬುದೇ ಕೃಷ್ಣಪ್ಪನ ಅಸಮಾಧಾನಕ್ಕೆ ಕಾರಣ.

ಇದು ನಿಜ ಕೂಡ. ಮಚ್ಚ ಮಂಜನ ಕೊಲೆ ಪ್ರಕರಣದಲ್ಲಿ ಕೃಷ್ಣಪ್ಪನ ಪಾತ್ರವಿಲ್ಲವೆಂದು 'ಲಂಕೇಶ್' ಮೊದಲೇ ವರದಿ ಮಾಡಿತ್ತು. ಆದರೆ ಬೆಂಗಳೂರಿನ ಪೊಲೀಸ್ ಕಮಿಷನರ್ ಅಜಯ್‌ಕುಮಾರ್ ಸಿಂಗ್ ಜೇಡರಹಳ್ಳಿ ಕೃಷ್ಣಪ್ಪನನ್ನು ಈ ಕೊಲೆ ಪ್ರಕರಣದಲ್ಲಿ ಫಿಟ್ ಮಾಡಿದರು.



ಬಾಲಕೃಷ್ಣ

ಇದೇ ಗತಿ ಮುಲಾಮ್ ಮತ್ತು ಕೊರಂಗುವಿಗೂ ಬಂತು. ಅಸಲಿಗೆ ಮಚ್ಚ ಮಂಜನ ಕೊಲೆಯ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿದ್ದವನು ಮಾಜಿ ಕಾರ್ಪೊರೇಟರ್ ಗೋಪಾಲಯ್ಯನ ತಮ್ಮ ಗೂಳಿ ಬಸವ.

ಇದೇನೇ ಇರಲಿ, ಗೂಂಡಾಗಿರಿಗೆ ತಿಲಾಂಜಲಿ ನೀಡಿದ್ದೀನೆಂದು ಹೇಳಿ ಮಾಗಡಿ ತಾಲ್ಲೂಕಿನ ಸ್ವಂತ ಗ್ರಾಮವಾದ ಹುಚ್ಚ ಹನುಮೇಗೌಡನ ಪಾಳ್ಯವನ್ನು ಸೇರಿದ್ದ ಕೃಷ್ಣಪ್ಪ, ರಾಜಕೀಯವಾಗಿ ಸಾಕಷ್ಟು ಬೆಳೆದಿದ್ದ. ಕೆಂಪೇಗೌಡ ಯುವಕ ಸಂಘವನ್ನು ಕಟ್ಟಿ, ಸಾಮೂಹಿಕ ವಿವಾಹ, ಕೆಂಪೇಗೌಡ ಪ್ರತಿಮೆ ಸ್ಥಾಪನೆ ಮುಂತಾದ ಸಾಮಾಜಿಕ ಕಾರ್ಯಗಳ ಮೂಲಕ ಬೆಳೆಯುತ್ತಿದ್ದ, ಮಚ್ಚ ಮಂಜನ ಕೊಲೆ ಪ್ರಕರಣದಲ್ಲಿ ಕೃಷ್ಣಪ್ಪನ ಬಂಧನದ ಹಿನ್ನೆಲೆಯಲ್ಲಿ ಕೃಷ್ಣಪ್ಪನ ರಾಜಕೀಯ ಏಳಿಗೆಯನ್ನು ಸಹಿಸಲಾರದ ಹಾಲಿ ಶಾಸಕ ಎಚ್.ಸಿ. ಬಾಲಕೃಷ್ಣ ಮತ್ತು ಮಾಜಿ ಸಚಿವ ರೇವಣ್ಣನ ಕೈವಾಡವಿದೆಯೆಂದು ಹೇಳುವವರೂ ಇದ್ದಾರೆ.



ಮಚ್ಚ

ಕೃಷ್ಣಪ್ಪನ ಬೆಂಬಲಿಗರ ಪ್ರಕಾರ ಆತ ಬಿಜೆಪಿ ತೊರೆದು ಬೇರ‍್ಯಾವ ಪಕ್ಷವನ್ನೂ ಸೇರುವುದಿಲ್ಲವಂತೆ. ಅದು ಸಾಧ್ಯವೂ ಇಲ್ಲವಂತೆ. ಜೆಡಿಎಸ್‌ನಲ್ಲಿ ಬಾಲಕೃಷ್ಣ ಮತ್ತು ಕಾಂಗ್ರೆಸ್‌ನಲ್ಲಿ ರೇವಣ್ಣ ಇರುವಾಗ ಕೃಷ್ಣಪ್ಪನಿಗೆಲ್ಲಿ ಸ್ಥಾನ? ಹಾಗಾದರೆ ಕೃಷ್ಣಪ್ಪನ ಮುಂದಿನ ದಾರಿ ಏನು? ಅವನ ಬೆಂಬಲಿಗರ ಪ್ರಕಾರವೇ ಹೇಳುವುದಾದರೆ, ಕೃಷ್ಣಪ್ಪ ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆ ಬಳಿ ಇರುವ ಡಾಲರ್ಸ್ ಕಾಲೋನಿ ಸಮೀಪ ಆರಂಭಿಸಿರುವ ರಿಯಲ್ ಎಸ್ಟೇಟ್ ಆಫೀಸ್ ಮೂಲಕ ಬಿಸಿನೆಸ್ ಆರಂಭಿಸಲಿದ್ದಾನಂತೆ.

ಇವತ್ತು ಬೆಂಗಳೂರಲ್ಲಿ ರಿಯಲ್ ಎಸ್ಟೇಟ್‌ಗೆ ಮತ್ತೊಂದು ಹೆಸರೇ ರೌಡಿಸಂ. ಇಡೀ ರಿಯಲ್ ಎಸ್ಟೇಟ್ ಉದ್ಯಮವನ್ನು ಭೂಗತ ಜಗತ್ತು ಆವರಿಸಿಕೊಂಡಿದೆ. ಇಂತಹ ರಿಸ್ಕ್ ತೆಗೆದುಕೊಳ್ಳಲು ಪುನಃ ಕೃಷ್ಣಪ್ಪ [illegible]? ಕೃಷ್ಣಪ್ಪನ ರೌಡಿಸಂನ [illegible] ಈ [illegible] ಗೂಂಡಾಗಿರಿ [illegible] ಕೃಷ್ಣಪ್ಪನಿಗೆ ಇದು [illegible]? [illegible].


–ವರದಿಗಾರ

"ಯಾವನಾದ್ರೂ ಸಿಎಂ ಆಗ್ಲಿ ಸರ್ಕಾರ ಬೀಳಬಾರ್ದು!"

– ಚನ್ನಿಗಪ್ಪ ಉವಾಚ




ಆಗಸ್ಟ್ 12 ರಂದು ಜಾತ್ಯತೀತ ಜನತಾದಳದ ಸರ್ವೋಚ್ಚ ಪ್ರಶ್ನಾತೀತ ನಾಯಕ ದೇವೇಗೌಡರ ಮನೆಯಲ್ಲಿ ಪಕ್ಷದ ಹಿರಿಯ ಮುಖಂಡರು, ಸಚಿವರು ಮತ್ತು ಶಾಸಕರ ಸಭೆ ನಡೆಯಿತು. ತೀವ್ರ ಭಾವೋದ್ವೇಗಕ್ಕೆ ಒಳಗಾದಂತೆ ಕಂಡುಬರುತ್ತಿದ್ದ ಗೌಡರು, "ಈ ಕುಮಾರನಿಗೆ ಹೇಳಿದೆ ಬಿಜೆಪಿಯವರ ಸಹವಾಸ ಬೇಡ ಅಂತ ನನ್ ಮಾತ್ ಕೇಳ್ಲಿಲ್ಲಾ, ಈಗ ಅನುಭವಿಸ್ತಾ ಇದ್ದಾನೆ. ಎಷ್ಟು ದಿನ ಅಂತ ಈ ಹಿಂಸೇನ ತಡ್ಕಂಡ್ ಇರೋದು? ಒಂದ್ಕಡೆಯಿಂದ ಕಾಂಗ್ರೆಸ್‌ನೆವ್ರು, ಮತ್ತೊಂದು ಕಡೆಯಿಂದ ಮಿತ್ರ ಪಕ್ಷ ಅನ್ನೊ ಬಿಜೆಪಿಯವ್ರು, ಮತ್ತೆ ನಮ್ಮಲ್ಲೆ ಕೆಲವ್ರು ನಮ್ಗೆ ವಿರೋಧ ಮಾಡ್ತಾ ಇದ್ದಾರೆ" ಎಂದು ತಮ್ಮ ಎಂದಿನ ರೋಷಾವೇಶದಲ್ಲಿ ಗುಡುಗಿ ಒಂದು ನಿಮಿಷ ಗ್ಯಾಪ್ ಕೊಟ್ಟು ಪ್ರತಿಕ್ರಿಯೆಗಾಗಿ ನಿರೀಕ್ಷಿಸಿದರು.



ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ ಅವರ ಮಾತು ಮುಂದುವರಿಯಿತು. "ಇಂತಹ ಹಿಂಸೆಯನ್ನು ನಾವು ಇನ್ನು ಸಹಿಸಿಕೊಂಡಿರುವುದಕ್ಕಾಗೋದಿಲ್ಲ. ನಾವು ಜನರ ಬಳಿಗೆ ಹೋಗಬೇಕು, ನಮಗೆ ಯಾರ ಸಹಾಯ-ಸಹಕಾರವೂ ಬೇಕಾಗಿಲ್ಲ, ಏಕಾಂಗಿಯಾಗಿ ನಾನೇ ಹೋಗುತ್ತೇನೆ, ನಮ್ಮ ಸಾಧನೆಯನ್ನು ವಿವರಿಸುತ್ತೇನೆ, ನಾನು ಮತ್ತು ನನ್ನ ಕುಟುಂಬದ ವಿರುದ್ಧ ಬಂದಿರುವ ಆಪಾದನೆಗಳಿಗೆ ತಕ್ಕ ಉತ್ತರವನ್ನು ಕೊಡುತ್ತೇನೆ, ಆರೋಪ ಮಾಡಿದವರ ಬಣ್ಣವನ್ನು ಬಯಲಿಗೆಳೆಯುತ್ತೇನೆ, ಈ ದೇವೇಗೌಡ ಎಂತಹ ಹೋರಾಟಗಾರ ಎಂದು ನಮ್ಮ ವಿರೋಧಿಗಳಿಗೆ ತೋರಿಸುತ್ತೇನೆ." (ಮತ್ತೆ ಪ್ರತಿಕ್ರಿಯೆಗಾಗಿ ಒಂದು ನಿಮಿಷ ಗ್ಯಾಪ್). ಪ್ರತಿಕ್ರಿಯೆ ಬರಲಿಲ್ಲ. ಮತ್ತೆ ಭಾಷಣ ಮುಂದುವರಿಯಿತು. ಆದರೆ ಹಿಂದಿನ ಆವೇಶ ಈಗಿರಲಿಲ್ಲ, ಧ್ವನಿ ಮಂದ್ರ ಸ್ಥಾಯಿಗಿಳಿದಿತ್ತು.

"ಚುನಾವಣೆ ಎದುರಿಸುವುದೊಂದೇ ನಮಗುಳಿದಿರುವ ದಾರಿ. ಆದರೆ ಅದಕ್ಕೆ ಮುನ್ನ ಅದಕ್ಕೆ ತಕ್ಕ ವೇದಿಕೆ ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ನಮ್ಮಲ್ಲೇ ಇದ್ದು ನಮ್ಮಿಂದ ಅಧಿಕಾರಕ್ಕೆ ಬಂದ ಸಿಂಧ್ಯಾ ಈಗ ನಮ್ಮ ಎದುರು ಬದ್ದಿದ್ದಾರೆ, ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿದ್ದಾರೆ. ಮಿತ್ರ ಪಕ್ಷದಲ್ಲೇ ಇದ್ದು ಸರ್ಕಾರದ ಒಂದು ಭಾಗವೇ ಆಗಿದ್ದ ಬಿಜೆಪಿಯ ಶಾಸಕ ಜನಾರ್ದನ ರೆಡ್ಡಿ ಗಣಿ ಹಗರಣಕ್ಕೆ ಸಂಬಂಧಿಸಿದಂತೆ ನನ್ನ ಕುಟುಂಬದ ಮೇಲೆ ಗಂಭೀರವಾದ ಆರೋಪ ಮಾಡಿದ್ದಾರೆ. ಇವರ ಶಕ್ತಿ ಸಾಮರ್ಥ್ಯಗಳನ್ನು ನಾವು ಅಳೆಯಬೇಕಾಗಿದೆ. ಇಂತಹ ಒಂದು ಸಮೀಕ್ಷೆ ನಡೆಸಿ ನಂತರ ನಾವು ನಿರ್ಧಾರ ಕೈಗೊಳ್ಳಬೇಕಾಗಿದೆ. ಆದರೆ ನಮ್ಮ ಪಕ್ಷದ ಸಚಿವರಿಗೆ, ಶಾಸಕರಿಗೆ ಮತ್ತು ಕಾರ್ಯಕರ್ತರಿಗೆ ನಾನು ಹೇಳುವುದಿಷ್ಟೇ, ಯಾವುದೇ ಸಮಯದಲ್ಲಿ ಚುನಾವಣೆ ಎದುರಾಗಬಹುದು. ನೀವು ಪಕ್ಷ ಬಲಪಡಿಸಿ, ಅದೇ ರೀತಿ ನಿಮ್ಮ ಕ್ಷೇತ್ರಗಳನ್ನು ಬಲಪಡಿಸಿಕೊಳ್ಳಿ."



ದೇವೇಗೌಡರು ಅಂದು ಮಾಡಿದ ಭಾಷಣದ ಮುಖ್ಯಾಂಶಗಳು ಇಷ್ಟು. ಸಭೆಯ ನಂತರ ಗೌಡರ ಮನೆಯಿಂದ ಹೊರಬಂದ ಸಚಿವರಾದ ಚನ್ನಿಗಪ್ಪ, ಚೆಲುವರಾಯಸ್ವಾಮಿ ಮತ್ತು ಮಂಡ್ಯ ಶಾಸಕ ಶ್ರೀನಿವಾಸ್ ಒಂದೇ ಕಾರು ಹತ್ತಿದರು. ಇವರಿದ್ದ ಕಾರು ಮೈಸೂರು ರಸ್ತೆಯ ರೆಸಾರ್ಟ್‌ವೊಂದನ್ನು ತಲುಪಿತು. ರೆಸಾರ್ಟ್ ತಲುಪುತ್ತಿದ್ದಂತೆ ಚನ್ನಿಗಪ್ಪನ ಯಕ್ಷಗಾನ ಆರಂಭವಾಯ್ತು "ಅಲ್ಲಾ ಚಲ್ವಣ್ಣ ಈ ವಯ್ಸ್ಕ ತನ್ ಮೂಗಿನ ನ್ಯಾರಕ್ ಮಾತಾಡ್ತನೆ. ಎಲಕ್ಸನ್‌ಗೋಗ್ಬೇಕಂತೆ. ಯಾವ್ ಮಕ ಇಟ್ಕಂಡ್ ಓಗಣ? ಗಣಿಲಿ 150 ಕೋಟಿ ಒಡ್ದವ್ರೆ ಅಪ್ಪಾಮಕ್ಳು, ಅದ್ಕೆ ನಮ್ಗೆ ಓಟಾಕಿ ಅಂತ ಕೇಳನಾ ಏಳು? ಅದೆಲ್ಲಾ ಆಗೊ ಓಗೋ ಮಾತಲ್ಲ. ಬಂದಿದ್ರಲ್ಲಿ 90 ಪರ್ಸೆಂಟು ಇವ್ರಿಗೇ ಕೊಡ್ಬೇಕೂ. ಇನ್ನು ಎಲೆಕ್ಸನ್ ಕರ್ಚಿಗೆ ನಾವೆಲ್ಲಿಂದ ತರಣ? ಯಂಗ್ರಾದ್ರು ಆಗ್ಲಿ, ಯಾವನಾದ್ರು ಸಿ.ಎಂ. ಆಗ್ಲಿ ಸರ್ಕಾರ ಮಾತ್ರ ಬೀಳಕ್ ಬಿಡ್ಬಾರ್ದು."



ಚೆನ್ನಿಗಪ್ಪನ ಈ ಮಾತು ಕೇವಲ ವೈಯಕ್ತಿಕವಲ್ಲ, ಇದು ಇಂದು ಜಾತ್ಯತೀತ ಜನತಾದಳ ಮತ್ತು ಭಾರತೀಯ ಜನತಾ ಪಕ್ಷದಿಂದ ಆಯ್ಕೆಯಾಗಿರುವ ಬಹುತೇಕ ಶಾಸಕರ ಅಭಿಪ್ರಾಯವಾಗಿದೆ. ಅದರಲ್ಲೂ ಪ್ರಥಮ ಬಾರಿಗೆ ಆಯ್ಕೆಯಾಗಿರುವ ಶಾಸಕರಿಗಂತೂ ಯಾವುದೇ ಕಾರಣಕ್ಕೂ ತಮ್ಮ ಶಾಸಕತ್ವ ಕಳೆದುಕೊಳ್ಳುವ ಆಸೆ ಇಲ್ಲ. ಸಚಿವ ಸ್ಥಾನದಲ್ಲಿರುವವರಿಗೂ ಇದು ಬೇಕಿಲ್ಲ. ಆದರೇನು, ಜೆಡಿಎಸ್‌ನವರು ಗೌಡರು ಹೇಳಿದ್ದಕ್ಕೆ ಸೈ ಎನ್ನಬೇಕು. ಭಾರತೀಯ ಜನತಾ ಪಕ್ಷದವರು ಅನಂತ್‌ಕುಮಾರ್ ಅಲಿಯಾಸ್ ಎ.ಕೆ. 47 ಹೇಳಿದ್ದಕ್ಕೆ ಹೌದೌದು ಎನ್ನಬೇಕು ಎಂಬ ಪರಿಸ್ಥಿತಿ ಆ ಪಕ್ಷಗಳಲ್ಲಿದೆ.

ಇಲ್ಲಿ ಇನ್ನೊಂದು ವಿಚಾರವನ್ನು ಗಮನಿಸಿ: ಸರ್ಕಾರವನ್ನು ಉರುಳಿಸಲು ಯತ್ನಿಸುತ್ತಿರುವವರೆಲ್ಲರೂ ಈಗ ಅಧಿಕಾರದಲ್ಲಿಲ್ಲದವರು ಅಥವಾ ಅಧಿಕಾರ ವಂಚಿತರು. "ನಮ್ಮ ಒಂದು ಕಣ್ಣು ಹೋದರು ಪರವಾಗಿಲ್ಲ, ಅವರದು ಎರಡೂ ಹೋಗಲಿ" ಎಂಬ ಥಿಯರಿಯ ಪ್ರತಿಪಾದಕರು. ಉದಾಹರಣೆಗೆ ಬಿಜೆಪಿಯ ಅನಂತ್‌ಕುಮಾರ್. ಇವರು ಒಬ್ಬ ಸಿ.ಎಂ. ಕ್ಯಾಂಡಿಡೇಟ್. ಯಡಿಯೂರಿ ಉಪಮುಖ್ಯಮಂತ್ರಿಯಾಗಿರುವುದು ಇವರಿಗೆ ಉರಿ. ಹಾಗಾಗಿ ಒಳಗೊಳಗೆ ಮೆಣಸಿನಕಾಯಿ ಇಡುತಿದ್ದಾರೆ. ಇನ್ನು ಜೆಡಿಎಸ್‌ನಲ್ಲಿ ಅಸಂಖ್ಯಾತ ಅತೃಪ್ತರಿರುವುದರಿಂದ ಇವರಲ್ಲಿ ಪಕ್ಷ ವಿರೋಧಿಗಳ್ಯಾರೆಂದು ಪತ್ತೆ ಹಚ್ಚಲೇ ಒಂದು ಇಲಾಖೆ ರಚಿಸುವುದು ಉತ್ತಮ. ಕಾಂಗ್ರೆಸ್‌ನವರೋ, ಅವರಿಗೆ ಅಧಿಕಾರರಹಿತರಾಗಿ ಇದ್ದು ಅಭ್ಯಾಸವೇ ಇಲ್ಲ, ಆದುದರಿಂದ ಅಧಿಕಾರವಿಲ್ಲದಾಗ ಅವರ ಕೆಲಸವೆಂದರೆ ಅಸ್ತಿತ್ವದಲ್ಲಿರುವ ಸರ್ಕಾರವನ್ನು ಕೆಡುವಲು ಯತ್ನಿಸುವುದು.

ಕೊನೆ ಮಾತು. ಸರ್ಕಾರ ವಿಸರ್ಜಿಸಿ ಚುನಾವಣೆಗೆ ಹೋಗುವ ಗೌಡರ ಯೋಚನೆ ಖುದ್ದು ಮುಖ್ಯಮಂತ್ರಿ ಕುಮಾರಸ್ವಾಮಿಗೇ ಪಥ್ಯವಾಗಿಲ್ಲವಂತೆ.

ಪಿ.ಕೆ. ಮಲ್ಲನಗೌಡರ್ ಬಿಟ್ bit ಹಿಟ್!

ಗೌರಿ ಮೇಡಮ್ಮವ್ರಿಗೆ,



ನಿಮಗ ನಮಸ್ಕಾರಾನೂ ಹೇಳಂಗಿಲ್ಲ ಈಗ.... ಅಪ್ಪ್ ಸಿಟ್ ಬಂದೈತಿ ನಮ್ಗೆಲ್ಲಾ... ಅಲ್ಲಾ, ಒಂದ್ ಸಲ ಚಂದ, ಎರಡ್ ಸಲ ಚಂದವ... ಹಂಗ ಫೈವ್‌ಮ್ಯಾಚ್ ಸೀರಿಸ್ ಆಡಾಕ ಹತ್ತಿಬಿಟ್ರ ನಾವ್ ಇರ್ಬೇಕೊ ಸಾಯ್ಬೇಕೊ? ಎಲ್ಲಾರೂ ಆಟ ಹಚ್ಚಿರ‍್ಯನು ಆಟಾ...?

ಅರಿಶಿಣ, ಕುಂಕುಮಕ್ಕ 36 ಕೋಟಿ ರೂ. ಬಿಲ್ಡಿಂಗು ತೊಗೊಬಾರ್ದು ಅಂದ್ರ ಹ್ಯಂಗಿದು? ನಮ್ ಅನಿತಕ್ಕಗಂತೂ ಬಾಳಾ ಬೇಜಾರಾ ಗ್ಯಿಟ್ಟೈತಿ... ನಮ್ ಪುಟ್ಟಾ ನಿಖಿಲ್ ಗೌಡಾ ಮುಂದ ಸಿಎಮ್ಮು ಆಗಾವ ಅದಾನ... ಅದಕ್ಕಂತ ಒಂದಿಷ್ಟು ರೊಕ್ಕ ಆಸ್ತಿ ಮಾಡಾದು ತಪ್ಪಂದ್ರ ಏನಿದು? ಅನಸೂಯಕ್ಕ, ಶೈಲಕ್ಕ ಇಪ್ಪ್ ದಿನಾ ಒಂದ್ ಬಂಗಾರ ತೊಗೊಲಿಲ್ಲ, ಗಿಂಗಾರ ತೊಗೊಲಿಲ್ಲ, ಪಾಪ, ಈಗೊಂದಿಷ್ಟು ಆಸ್ತಿ ಮಾಡಿಕೊಂತಾರ ಬಿಡು.... ಅವ್ರಿಗೆ ಹಿಂದಿ ಬರ್ತಿತ್ತು ಅಂದ್ರ, ಅವಾಗ ದೊಡ್ಡಗೌಡ್ರು ಪಿ.ಎಮ್. ಇದ್ದಾಗ ಅಲ್ಲೇ ದಿಲ್ಲ್ಯಾಗ ಆಸ್ತಿ ಮಾಡ್ತಿದ್ರು... ಈಗ [illegible] ಕಷ್ಟಪಟ್ಟು ಸಿ.ಎಮ್. ಆಗ್ಯಾನ... ಹೆಣ್ಮಕ್ಕಳ್ಗೆ ಒಂದೀಟು ಬಂಗಾರ, ಭೂಮಿ ಮ್ಯಾಗ ಆಸೆ ಇದ್ದಿರತೈತಿ....



ಇನ್ನು ಕವಿತಕ್ಕನ ಕತಿ ಕೇಳ್ರಿ... ನನ್ ದೊಡ್ಡಪ್ಪ ಅಂದ್ರ ಕವಿತಾ ಅಪ್ಪ ಹೊನ್ನಪ್ಪ ಕನಸಿನ್ಯಾಗ ಬಂದು 'ಮಗಳಾ, ಆ ಅನಿತವ್ವನ ನೋಡೆರ ಕಲಿಯವಾ... ನೀನೂ ಒಂದೀಟು ಆಸ್ತಿ ಮಾಡು' ಅಂದ್ನಂತ. ಅವತ್ತು ಜುಲೈ 19. ಅಪ್ಪನ ಆಶೆ ಈಡೇರಸಾಕಂತ ಮರುದಿನ ಕವಿತಕ್ಕ ಭೂಮಿ ಖರೀದಿ ಮಾಡಿದ್ಲು.... ಆದ್ರ ಅವತ್ ರಾತ್ರಿ ನಮ್ ದೊಡ್ಡಪ್ಪ ಹೊನ್ನಪ್ಪ ಮತ್ ಕನಸಿನ್ಯಾಗ ಬರಲೇ ಇಲ್ಲ... ಕವಿತಕ್ಕಗ ಎಷ್ಟ್ ನೋವಾಗಿರ್ಬೇಕು? ಅಪ್ಪ ಸಿಟ್ಟಾಗ್ಯಾನಂತ 21 ನೇ ತಾರೀಖು ಮತ್ತೆ ಖರೀದಿ ಮಾಡಿದ್ಲು, ಅವತ್ತೂ ಅಪ್ಪ ಕನಸಿನ್ಯಾಗ ಬರ್ಲಿಲ್ಲ... ಹಿಂಗ 28 ನೇ ತಾರೀಖಿನ ವರ‍್ಗೂ ಇದು ನಡೀತು... ಅವತ್ ಕನಸಿನ್ಯಾಗ ನಮ್ ಹೊನ್ನಪ್ಪ ದೊಡ್ಡಪ್ಪ ಬಂದು 'ಕವಿತವ್ವ, ಈಗ ಸಾಕು ಬಿಡು. ಬಾಳಾ ದಣಿದಿವಿ... ಸ್ವಲ್ಪ ರೆಸ್ಟು ಇರ್ಲಿ' ಅಂದ. ಕವಿತಕ್ಕಗ ಖುಷಿ ಆತು. ಆಸ್ತಿ ಖರೀದಿ ಸಾಕು ಮಾಡಿಬಿಟ್ಲು.....

ಇದು ಒರಿಜಿನಲ್ ಕತಿ ಐತಿ. ನೀವ್ ನೋಡಿದ 'ಕವಿತಾ ಕಂಕ[illegible]' ಅಂತಾ ಬರಿತೀರಿ... ನಾ ಅನಿತಕ್ಕ, ಕವಿತಕ್ಕ, ಭವಾನಕ್ಕ, ಅನಸೂಯಕ್ಕ, ಶೈಲಕ್ಕಗೆಲ್ಲ ಹೇಳೇನಿ... [illegible] ಸೇರಿ ನಿಮ್ [illegible] ಕೈಕ್ ಮಾಡ್ತಾರ[illegible]

ನಮ್ ಬಿಜಾಪುರದ ಹುಡುಗಿ ರಾಜಲಕ್ಷ್ಮಿ ಅಲ್ಲೇ ಬೆಂಗ್ಳೂರಾಗ ಅಡ್ವೊಕೇಟ್ ಅದಾಳ... ಆಕಿ ನಮ್ ಪರವಾಗಿ ಕೇಸ್ ತೊಗೊಳಾಕ ಹತ್ಯಾಳ....

'ಸ್ತ್ರೀಶಕ್ತಿ' ಅಂತಾ ನಗಬ್ಯಾಟಗಿ ಮಾಡ್ತಿರಲ್ಲಾ? ಈಗ ತೋರಿಸ್ತಿವಿ ತಡ್ರಿ ಸ್ತ್ರೀಶಕ್ತಿನಾ?

ನಂಗ ಅಳು ಬರಾಕ ಹತ್ಯೈತಿ.... ಈಗಿಷ್ಟು ಸಾಕು....

–ಮುನ್ನಿ (Zero Hour)
ಧಾರವಾಡ

ಒಂದು 'ಗಾದಿ' ಮಾತು!

ಅದಿರು ಇದ್ದಷ್ಟೂ ಕೈಯ ಚಾಚು....

ಒಂದು CD ಗವನ




ಹದ್ದುಮೀರಿದ ಹಕ್ಕಿಗೆ
ಈ ಗುಬ್ಬಿ ಬೆದರಲಿಲ್ಲ
ಒಪ್ಪಲಿಲ್ಲ ಪಂಜರದೊಳಿರಲು.
ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ
[illegible]
[illegible]
[illegible]

ಬಿಜೆಪಿಯ ಗಂಗಾಂಬಿಕೆ

ಖೊಟ್ಟಿ ಸ್ವಾತಂತ್ರ್ಯಯೋಧರ ಸೃಷ್ಟಿಕರ್ತೆ!

ಈಕೆ ಸೃಷ್ಟಿಕರ್ತೆ..... ಬಿಜೆಪಿಯ ...ಪರು...... ಸ್ವಾತಂತ್ರ್ಯಯೋಧರ ಹಿತರಕ್ಷಕಿ. ಮೊನ್ನೆ ಆಗಸ್ಟ್ 15ರಂದು ಭಾರತದ ತ್ರಿವರ್ಣ ಧ್ವಜ ಹಾರಿಸ ಬೇಕೆಂದಿದ್ದಳು. ಆಗಸ್ಟ್ 14ಕ್ಕೆ ಈ ಊಸರವಳ್ಳಿಯ ಬಣ್ಣ ಬಯಲಾಗಿ ಜೈಲು ಪಾಲಾಗಿಯೇಬಿಟ್ಟಳು. ಪಾಪ ಅವತ್ತೇ ಹಡಬೆ ಹಣದಿಂದ ಕಟ್ಟಿದ ಮನೆಯ ಗೃಹಪ್ರವೇಶವಿತ್ತು. ಈಗ ಜಾಮೀನಿನ ಮೇಲೆ ಹೊರಬಂದಿದ್ದಾಳೆ. ಗಾಡ್‌ಫಾದರ್ ಜಗದೀಶ್ ಶೆಟ್ಟರ್ ಇರುವಾಗ ಗಂಗಾಂಬಿಕೆ ಹೆದರುವುದುಂಟಾ?


ಗಂಗಾಂಬಿಕೆ

ಅಂದಂತೆ ಈ ಸೃಷ್ಟಿಕರ್ತೆ ಮಾಡಿರುವ ನಯವಂಚನೆ ಏನು ಗೊತ್ತಾ? ಅದು ನಯಾ ನಯಾ (ಹೊಸ ಹೊಸ) ನಯವಂಚನೆ! ಮೃತ ಸ್ವಾತಂತ್ರ್ಯಯೋಧರ ಪತ್ನಿಯರ ಹೆಸರಲ್ಲಿ ಖೊಟ್ಟಿ ಸರ್ಟಿಫಿಕೇಟ್ ಸೃಷ್ಟಿಸಿ, ರಾಜ್ಯ ಕೇಂದ್ರ ಸರ್ಕಾರಗಳಿಂದ ಬರುವ ಪಿಂಚಣಿ ಹಣವನ್ನೇ ಗುಳುಂ ಮಾಡುವುದು. ಅಷ್ಟೇ ಅಲ್ಲ ನಕಲಿ ಸ್ವಾತಂತ್ರ್ಯಯೋಧರನ್ನೇ ಸೃಷ್ಟಿಸಿರುವ ಈ ಗಂಗಾಂಬಿಕಾ ಹವಳದ ಅಲಿಯಾಸ್ ಹವಳದ ಬಾಯಿ ಇಲ್ಲಿವರೆಗೆ 500ಕ್ಕಿಂತ ಹೆಚ್ಚು ಸ್ವಾತಂತ್ರ್ಯಯೋಧರಿಗೆ ಜನ್ಮ ನೀಡಿದ ಹಡೆದವ್ವಳಾಗಿಬಿಟ್ಟಿದ್ದಾಳೆ.


80 ಲಕ್ಷದ ಗಂಗಾಂಬಿಕೆ ಬಂಗಲೆ

ಇಷ್ಟು ವರ್ಷ ಅದ್ಹೇಗೋ ತಾಲ್ಲೂಕು ಬಿಜೆಪಿ ಉಪಾಧ್ಯಕ್ಷೆಯ ಗೆಟಪ್‌ನಲ್ಲಿ ತನ್ನ 'ಸ್ವಾತಂತ್ರ್ಯ ಹೋರಾಟ'ವನ್ನು ಸದ್ದಿಲ್ಲದೇ ಭೂಗತಳಂತೆ ಮಾಡಿಕೊಂಡು ಬಂದಿದ್ದ ಗಂಗಾ ಮೇಡಮ್ ದಬಕ್ ಅಂತಾ ಪೋಲೀಸರ ಗೆಸ್ಟ್ ಆದದ್ದು ಕುತೂಹಲಕರವಾಗಿದೆ.

ಗಂಗಾಂಬಿಕೆ ಸೃಷ್ಟಿಸಿದ ಒಬ್ಬ ನಕಲಿ ಆಸಾಮಿ ತನ್ನ ಸೃಷ್ಟಿಕರ್ತೆಯ ವಿರುದ್ಧ ಬಂಡಾಯವೆದ್ದು ಪೋಲೀಸ್ ಠಾಣೆಗೆ ದೂರು ಕೊಟ್ಟು ಬಿಟ್ಟದ್ದೇ ತಡ, ಚೆಡ್ಡಿ ನಾಯಕಿ ಗಂಗಾಂಬಿಕೆ ಜೈಲು ಕಾಣಬೇಕಾಯ್ತು. ಹೀಗೆ ದೂರು ಕೊಟ್ಟ ಸ್ವಾತಂತ್ರ್ಯಯೋಧರೊಬ್ಬರ 'ಖೊಟ್ಟಿ ಪತ್ನಿ' ಅಂಚಟಗೇರಿ ಓಣಿಯ ಕಸ್ತೂರಿಬಾಯಿ ಏಕಬೋಟೆ. ಈಕೆಯ ಹೆಸರನ್ನು ಪಾರ್ವತೆವ್ವ ಸಂಗಯ್ಯ ಹಿರೇಮಠ ಎಂದು ಬದಲಿಸಿ, ಮೃತ ಸ್ವಾತಂತ್ರ್ಯಯೋಧರ ಪತ್ನಿ ಮಾಡಿದ್ದಳು ಗಂಗಾಂಬಿಕಾ! ಸಂಗಯ್ಯ ಹಿರೇಮಠ ಎನ್ನುವ ಸ್ವಾತಂತ್ರ್ಯಯೋಧರು ತೀರಿ ಹೋಗಿದ್ದಾರೆ. ಅವರ ಪತ್ನಿ ಪಾರ್ವತೆವ್ವರಿಗೆ ತನ್ನ ಪತಿಯ ಪಿಂಚಣಿ ತನಗೆ ಬರುತ್ತದೆ ಎಂಬ ವಿಷಯ ಗೊತ್ತಿಲ್ಲ, ಇಲ್ಲಿ ಗಂಗಾಂಬಿಕೆ ಕಸ್ತೂರಿಬಾಯಿಯ ಫೋಟೋ ಕೆಳಗೆ ಪಾರ್ವತೆವ್ವನ ಹೆಸರು ಹಾಕಿ ಸ್ವಾತಂತ್ರ್ಯಯೋಧ ದಿವಂಗತ ಸಂಗಯ್ಯ ಹಿರೇಮಠರ ಪತ್ನಿ ಎಂದು ಖೊಟ್ಟಿ ಸರ್ಟಿಫಿಕೇಟ್ ರೆಡಿ ಮಾಡಿಬಿಟ್ಟಿದ್ದಳು. 9 ತಿಂಗಳ ಕಾಲ 7,500 ರೂ. ಪಿಂಚಣಿ ಬಂದಿದೆ. ಇದರಲ್ಲಿ 6 ಸಾವಿರ ಸೃಷ್ಟಿಕರ್ತೆ ಗಂಗಾಂಬಿಕೆಗೆ! ನಕಲಿ ಪಾರ್ವತೆವ್ವ (ಅಸಲಿ ಕಸ್ತೂರಿಬಾಯಿ)ಗೆ ಸಾವಿರದ್ಯೆನೂರು ರೂಪಾಯಿ! ಕಸ್ತೂರಿಬಾಯಿ ಇನ್ನೂ ಸ್ವಲ್ಪ ಹೆಚ್ಚಿಗೆ ಕೊಡು ಎಂದಿದ್ದಾಳೆ. ಗಂಗಾಂಬಿಕೆ ಒಪ್ಪಿಲ್ಲ. ಕಸ್ತೂರಿಬಾಯಿ ಪೋಲೀಸ್ ಮೊರೆ ಹೋಗಿದ್ದೇ ತಡ, ಗಂಗಾಂಬಿಕೆ ಬಂಧನವಾಗಿದೆ. ಜಾಮೀನಿನ ಮೇಲೆ ಹೊರಬಂದಿರುವ ಗಂಗಾಂಬಿಕಾ ಕಸ್ತೂರಿಬಾಯಿ ಕುಟುಂಬಕ್ಕೆ ಜೀವ ಬೆದರಿಕೆ ಒಡ್ಡುತ್ತಿದ್ದಾಳೆ.


ಚಂದ್ರಶೇಖರ ಹಿರೇಮಠ

[illegible]

ಕಳೆದ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿಯಿಂದ 39ನೇ ವಾರ್ಡಿಗೆ ನಿಂತು ಬಕ್ಕಬರ್ಲು ಬಿದ್ದಿದ್ದಳು ಗಂಗಾಂಬಿಕಾ! ಈಗ ಈಕೆಯ ಪುರಾಣವೆಲ್ಲ ಬಯಲಾದ ಮೇಲೆ ಚೆಡ್ಡಿಗಳು "ಆಕಿ 6 ವರ್ಷದ ಹಿಂದಾನ ಪಕ್ಷ ಬಿಟ್ಟಾಳ" ಎಂದು ರಾಗ ಹಾಕುತ್ತಿವೆ. ಕಳೆದ ಸಲ ಎಲೆಕ್ಷನ್‌ನಲ್ಲಿ ಬಿಜೆಪಿಯೇ ಈಕೆಗೆ ಟಿಕೆಟ್ ಕೊಟ್ಟಿದ್ದನ್ನು ಜನ ಮರೆತಿಲ್ಲ, ಹಾಗೆಯೇ ಈಕೆಯೇ ಬಿಜೆಪಿಯ ತಾಲ್ಲೂಕು ಉಪಾಧ್ಯಕ್ಷೆ ಎಂಬುದು ಜನಜನಿತ. ಅಂತೂ ಚೆಡ್ಡಿಗಳ ಮಾನ ಬಟಾಬಯಲಾಗಿದೆ. ಶೆಟ್ಟರ್ ಕೃಪೆ ಮಾತ್ರ ಗಂಗಾ ಮಾತೆಯ ಮೇಲೆ ಇದ್ದೇ ಇದೆ.

ಗಂಗಾಂಬಿಕೆಯ ಗಂಡ ಮನೋಹರ ಹವಳದ, ಸಹೋದರ ಚಂದ್ರಶೇಖರ ಹಿರೇಮಠ, ಮೈದುನ ಮೋಹನ ಹವಳದ, ಶ್ರೀಮತಿ ಸುಲೋಚನಾ ಮಠಪತಿ, ಶ್ರೀಮತಿ ದಮಯಂತಿ ಅಣ್ಣಿಗೇರಿ, ಶಾಂತಾ ಸಾವಂತ, ಸುಶೀಲಾ ನಂದರಗಿ, ಉಣಕಲ್ಲಿನ ಪೊಲೀಸ್ ಪಾಟೀಲ್, ನವನಗರದ ಮೀನಾಕ್ಷಿ, ಜಿಲ್ಲಾ ಟ್ರೆಜರಿ ಆಫೀಸ್‌ನ ನೌಕರ ತೇರದಾಳ ಈ ಮಹಾಮಹಿಮರೆಲ್ಲ ಗಂಗಾಂಬಿಕೆಯ ನೆಟ್‌ವರ್ಕ್ ಸದಸ್ಯರು!

ಗಂಗಾಂಬಿಕಾ ಈ 'ನಕಲಿ ಸೃಷ್ಟಿ' ಎಂಬ ವಂಚನೆಯನ್ನು ಆರಂಭಿಸಿದ್ದು ವೃದ್ಧಾಪ್ಯ ವೇತನ, ವಿಧವಾ ವೇತನಗಳನ್ನು ನುಂಗುವುದರ ಮೂಲಕ. ಇಲ್ಲಿ ಕೇವಲ ನೂರಿನ್ನೂರು ಮಾತ್ರ ಸಿಗುತ್ತಿತ್ತು. ಯಾವಾಗ ಸ್ವಾತಂತ್ರ್ಯಯೋಧರಿಗೆ 7,500 ರೂಪಾಯಿ ಸಿಗುತ್ತೆ ಅಂತಾ ತಿಳಿಯಿತೋ ಆವಾಗಲೆ ಗಂಗಾಂಬಿಕಾ ಮರಣ ಹೊಂದಿದ ಸ್ವಾತಂತ್ರ್ಯಯೋಧರ ಲಿಸ್ಟ್ ಪಡೆಯತೊಡಗಿದಳು. ಮೃತ ಹೋರಾಟಗಾರರ ಪತ್ನಿಯರ ಹೆಸರಲ್ಲಿ ತನಗೆ ಗೊತ್ತಿರುವ ಇನ್ಯಾರೋ ಹೆಣ್ಣುಮಕ್ಕಳಿಗೆ ಪಿಂಚಣಿ ಬರುವಂತೆ ಮಾಡುತ್ತಾ ಬಂದಳು.

7-8 ವರ್ಷ ಕಾಲ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಹೀಗೆ ಟೋಪಿ ಹಾಕುತ್ತಲೇ ಬಂದಿದ್ದಳು ಈ ನುಂಗಾಂಬಿಕಾ! ಹುಬ್ಬಳ್ಳಿಯೇ ಈಕೆಯ ಹೆಡ್ ಆಫೀಸ್... ಕಲಘಟಗಿ, ಸವಣೂರು, ಬೈಲುಹೊಂಗಲ, ಧಾರವಾಡ, ರಾಣೆಬೆನ್ನೂರು, ನವಲಗುಂದಗಳಲ್ಲಿ ನೂರಾರು ಮೃತ ಸ್ವಾತಂತ್ರ್ಯ ಹೋರಾಟಗಾರರ ವಾರಸುದಾರರನ್ನು ವಂಚಿಸಿ ಈ ವಾರಸುದಾರರ ಹೆಸರಲ್ಲಿ ಸರ್ಕಾರದ ಪಿಂಚಣಿ ನುಂಗುತ್ತಾ ಕೋಟ್ಯಧೀಶೆ ಆಗಿದ್ದಾಳೆ ಗಂಗಾಂಬಿಕಾ ಹವಳದ. ಆ ಹಾದಿಯಲ್ಲಿ 500ಕ್ಕೂ ಹೆಚ್ಚು ನಕಲಿ ವಾರಸುದಾರರನ್ನು ಹೆತ್ತಿದ್ದಾಳೆ ಈ ಮಹಾತಾಯಿ. ಧಾರವಾಡ ಕೋರ್ಟ್ ಎದುರಿನ ಕೆನರಾ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ಬ್ಯಾಹಟ್ಟಿಯಲ್ಲಿನ ಸಿಂಡಿಕೇಟ್ ಬ್ಯಾಂಕ್ ಹೀಗೆ ಊರೂರುಗಳಲ್ಲಿ ಮೃತ ಸ್ವಾತಂತ್ರ್ಯ ಹೋರಾಟಗಾರರ ಖೊಟ್ಟಿ ವಾರಸುದಾರರ ಅಕೌಂಟ್‌ಗಳನ್ನು ತೆರೆದಿದ್ದಾಳೆ ಗಂಗಾಂಬಿಕಾ ಮೇಡಮ್ಮು. ಕೆಲವೊಮ್ಮೆ ಸ್ವಾತಂತ್ರ್ಯಯೋಧರ ಪತ್ನಿಯರಿಗೆ ಬರುವ ಬಾಕಿ ಹಣ ಲಕ್ಷಗಳಲ್ಲೂ ಇರುತ್ತೆ. ಅದೆಲ್ಲ ನಕಲಿ ವಾರಸುದಾರರ ಖಾತೆಗೆ ಜಮೆಯಾಗಿ ನಂತರ ಗಂಗವ್ವನ ಒಡಲು ಸೇರುತ್ತಾ ಬಂದಿದೆ. ಇಂತಹ ಕಂತ್ರಿ ಹಣದಿಂದಲೇ 49 ಲಕ್ಷ ರೂಪಾಯಿ ಮೌಲ್ಯದ ಭವ್ಯ ಮನೆ ಕಟ್ಟಿ ಇನ್ನೇನು ಗೃಹಪ್ರವೇಶ ಮಾಡಬೇಕು ಎನ್ನುವಷ್ಟರಲ್ಲಿ ನುಂಗಾಂಬಿಕೆಯ ಹಿಸ್ಟರಿ, ವರ್ತಮಾನವೆಲ್ಲ ಬಯಲಿಗೆ ಬಂದಿದೆ.

ಹುಬ್ಬಳ್ಳಿ


ಮನೋಹರ ಹವಳದ

[illegible]

ಕಾರವಾರ ರಸ್ತೆಯ ಶಾಂತಾ ಸಾವಂತಳನ್ನು ಹೆಬಸೂರು ಗ್ರಾಮದ ಮೃತ ಸ್ವಾತಂತ್ರ್ಯಯೋಧ ಭಾಸ್ಕರ ಅರ್ಕಸಾಲಿಯ ಖೊಟ್ಟಿ ಹೆಂಡತಿಯನ್ನಾಗಿ ಮಾರ್ಪಡಿಸಿ ಪಿಂಚಣಿ ಎತ್ತಲಾಗಿದೆ. ದಿ. ಫಕೀರಪ್ಪ ಬಸರಿಕಟ್ಟಿಯ ಖೊಟ್ಟಿ ಹೆಂಡತಿಯಾಗಿ ಉಣಕಲ್ಲಿನ ನೀಲವ್ವ ಹಡಪದಳನ್ನು ತಯ್ಯಾರು ಮಾಡಲಾಗಿದೆ. ಈಗಾಗಲೇ ಹುಬ್ಬಳ್ಳಿ ತಹಶೀಲ್ದಾರ ಕಚೇರಿಯಲ್ಲಿ ಇಂತಹ ಖೊಟ್ಟಿಗಳ ದೊಡ್ಡ ಪಟ್ಟಿಯೇ ಇದೆ. ಇದರಲ್ಲಿ ಖೊಟ್ಟಿ ಪತ್ನಿಯರಷ್ಟೇ ಅಲ್ಲ ನಕಲಿ ಸ್ವಾತಂತ್ರ್ಯ ಹೋರಾಟಗಾರರೂ ಇದ್ದಾರೆ.

ಆಶಾಬಿ ಮುಲ್ಲಾನವರ್, ಮೊಹಿಯುದ್ದೀನ್ ಉಮರ್‌ಪೇಟೆ, ವಿರುಪಾಕ್ಷಯ್ಯ ಹವಾಲ್ದಾರಮಠ, ಆನಂದ ಪ್ರಭು ದೇಸಾಯಿ, ಕೆಂಚವ್ವ ಮಳಲಿ, ಅಂದಾನಪ್ಪ ಆರಳಿ, ಶಿವಪ್ಪ ಕಮಟಿ, ಮೋಹನ್ ಹವಳದ, ಶ್ರೀಮಂತಯ್ಯ ಹಿರೇಮಠ, ಗುರುಪಾದಯ್ಯ ಹಿರೇಮಠ, ಚೆನ್ನಬಸಯ್ಯ ಹಿರೇಮಠ, ನೀಲವ್ವ ಸೊಟಗೌಡ್ರ.... ಇವರೇ ಆ ಮಹಾಮಹಿಮರು! ಇವತ್ತಿಗೂ ಇವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ, ತಹಸೀಲ್ದಾರ್ ಕಚೇರಿಗೂ ತಲುಪಿತೆ 'ಗಂಗಾ'ಜಲ?

ಕಂದಾಯ ಸಚಿವ ಜಗದೀಶ್ ಶೆಟ್ಟರ್‌ಗೆ ಹೆದರಿ ತಹಶೀಲ್ದಾರ್ ಸುಮ್ಮನಿದ್ದಾರೆಯೇ?

ನಕಲಿ ಸ್ವಾತಂತ್ರ್ಯಯೋಧರು, ಮೃತ ಸ್ವಾತಂತ್ರ್ಯಯೋಧರ ವಾರಸುದಾರರಾಗಿ ಖೊಟ್ಟಿ ಆಸಾಮಿಗಳು! ಗಂಗಾಂಬಿಕೆಗೆ ಇಷ್ಟೊಂದು ಸ್ವಚ್ಛಂಧ ಸ್ವಾತಂತ್ರ್ಯವೇ?

-ವರದಿಗಾರ

ನಕಲಿಗಳ ಹಕೀಕತ್ತು: ಅಸಲಿಗಳಿಗೇ ಆಪತ್ತು!

ನಕಲಿ ಗೋವಾ ವಿಮೋಚನಾ ಹೋರಾಟಗಾರರನ್ನು ಸೃಷ್ಟಿಸುವ ಜಾಲವೊಂದಿದೆ. ಮೊದಲು ಈ ಜಾಲಕ್ಕೆ ಬಿಜೆಪಿಯ ಕ್ಷೀರಸಾಗರ ಎಂಬ ವಕೀಲ, ಶ್ರೀನಿವಾಸ ಸರಳಾಯ ಕಿಂಗ್‌ಪಿನ್‌ಗಳಾಗಿದ್ದರು. ಈಗ ಇಬ್ಬರೂ ಬದುಕಿಲ್ಲ. ನಕಲಿಗಳ ಕಾಟಕ್ಕೆ ಸುಸ್ತಾದ ಸರಕಾರ ಗೋವಾ ವಿಮೋಚನಾ ಹೋರಾಟಗಾರರ ಪಿಂಚಣಿ ಯೋಜನೆ ನಿಲ್ಲಿಸಿತ್ತು.

ನೈಜ ಗೋವಾ ವಿಮೋಚನಾ ಹೋರಾಟಗಾರರಾಗಿದ್ದ ಎ.ಜಿ. ಮುಧೋಳ, ವಿ.ಎಂ. ಮಟ್ಟಿ, ತಡಸದಮಠ ಈಗ ನಿಧನರಾಗಿದ್ದಾರೆ. ಅವರ ವಿಧವಾ ಪತ್ನಿಯರು ಹೊಟ್ಟೆ ಹೊರೆಯಲು ಪರದಾಡುತ್ತಿದ್ದಾರೆ. ಇನ್ನು ಕೃಷ್ಣಾಜಿ ಕುಲಕರ್ಣಿಯಂತಹ ನಿಜವಾದ ಹೋರಾಟಗಾರರು 40 ವರ್ಷಗಳಿಂದ ಪಿಂಚಣಿಗೆ ಯತ್ನಿಸಿ ಸುಸ್ತಾಗಿ ಹೋಗಿದ್ದಾರೆ.

ನಕಲಿಗಳ ಅಬ್ಬರದಲ್ಲಿ ಅಸಲಿಗಳನ್ನು ಕೇಳುವವರಾರು?

ಕೋಟಿ ಬತ್ತಿ ಇಟ್ಟ ಶೆಟ್ಟಿಗೀಗ

ಪೊಲೀಸರೇ ಸೆಟ್ಲ್‌ಮೆಂಟ್ ಬ್ರೋಕರ್ಸ್!

ಇದೊಂದು ಪಿಪ್ಲಾನ್ಡ್ ವಂಚನೆ! ರೈತರ ದುಡ್ಡು ಎತ್ತಿಕೊಂಡು ಒಬ್ಬ ಊರು ಬಿಡುತ್ತಾನೆ. ಸ್ವಲ್ಪೇ ದಿನಕ್ಕೆ ಮರಳಿ ಬಂದು ಪೊಲೀಸರ ಮೂಲಕ ಸೆಟ್ಲ್‌ಮೆಂಟ್ ಎಂಬ ಡ್ರಾಮಾ ಆಡುತ್ತಾನೆ. ಭತ್ತ ಖರೀದಿ ನೆಪದಲ್ಲಿ ರೈತರ ಕೋಟಿ ಕೋಟಿ ಹೊತ್ತು ಊರು ಬಿಟ್ಟಿದ್ದ ರಾಘವೇಂದ್ರ ಶೆಟ್ಟಿ ತಿರುಗಿ ಬಂದವನೇ ಪೊಲೀಸರ ಬಳಿ ಹೋಗಿಬಿಟ್ಟ. ರಾಘನಿಗೆ ಸರಿಯಾಗಿ 'ಪಾಠ' ಮಾಡಿ, ರೈತರ ಎಲ್ಲ ದುಡ್ಡನ್ನು ವಾಪಸ್ಸು ಕೊಡಿಸಬೇಕಾದದ್ದು ಪೊಲೀಸರ ಮೊದಲ ಕೆಲಸವಾಗಬೇಕಿತ್ತು, ಸಿಪಿಐ ಸೂರ್ಯವಂಶಿ, ಪಿಎಸ್‌ಐ ಮುಷ್ತಾಕ್ ಅಹ್ಮದ್‌ರೇ ಶೆಟ್ಟಿಯ ಪರ ನಿಂತು ಸೆಟ್ಲ್‌ಮೆಂಟ್ ಮಾಡುತ್ತಾ ಬ್ರೋಕರ್‌ಗಳಾಗಿ ಬಿಟ್ಟಿದ್ದಾರೆ. ಇದು ಶೆಟ್ಟಿ, ಪೊಲೀಸರ ಪ್ಲಾನೇ ಇರಬೇಕಲ್ಲವೆ ಎಂಬುದೀಗ ಮಾನ್ವಿ ಜನರ ಪ್ರಶ್ನೆ.

ರಾಯಚೂರು

[illegible]


ಈಗ ಬಗಲಿಕ್ಕಿರುವ ರಾಘವೇಂದ್ರ ಶೆಟ್ಟಿ ಪೊಲೀಸರ ಮುಖಸ್ತುತಿಯಲ್ಲಿ ಭತ್ತ ಕೊಟ್ಟ ರೈತರಿಗೆ ಶೇ. 60 ರಷ್ಟು ಹಣ ಮಾತ್ರ ಕೊಡಲಿದ್ದಾನೆ. ಇದಕ್ಕವನು ಮತ್ತು ಪೊಲೀಸಪ್ಪಗಳು ಕೊಡುವ ಕಾರಣ: 'ಬಾಳಾ ಲಾಸ್ ಆಗೈತಿ....'

ಅರೆ ಈ ರಾಘ ಎಲ್ಲೋ ದುಡ್ಡು ಮಡಗಿ 'ಲಾಸು' ಅಂದಾಕ್ಷಣ ರೈತರೆಲ್ಲ ಶಂಖಾ ಹೊಡೆಯಬೇಕೆ? ಈ ಹಿಂದೆ ಅಡ್ನಾಡಿ ರಾಘನ 6 ಸಹೋದರರೂ ಈ 'ಲಾಸು ಡ್ರಾಮಾ' ಆಡಿಯೇ ಜನರನ್ನು ಬೋಳಿಸುತ್ತಾ ಬಂದಿದ್ದಾರೆ.

ತಿರುಪತಿಗೆ ಹೋಗಿ ಬರ್ತೀನಿ ಅಂತಾ ತನ್ನ ಗುರುಕೃಪಾ ಟ್ರೇಡರ್ಸ್‌ಗೆ ಬೀಗ ಜಡಿದು ಪರಾರಿಯಾಗಿದ್ದ ರಾಘ ಈಗ ಸೂರ್ಯವಂಶಿ ಎಂಬ ದುಷ್ಟ ಪೊಲೀಸಪ್ಪನ ಸಹಾಯದಿಂದ ರೈತರನ್ನು ಯಾಮಾರಿಸಲು ನೋಡುತ್ತಿದ್ದಾನೆ. ಇಂತಹ ಕಳ್ಳಗಂಟಿನಿಂದಲೇ ಪಂಪಾ ಕಾಲೋನಿಯಲ್ಲಿ ಮನೆ, ಹಲವಾರು ಸೈಟು ಖರೀದಿಸಿರುವ ಶೆಟ್ಟಿ ರಾಘ ಈಗ ಗುಳುಂ ಮಾಡಿರುವ ಮೊತ್ತವೇ ಕೋಟಿ ದಾಟುತ್ತದೆ. ಹೋಗಲಿ, ಇವನಿಗೆ ವ್ಯಾಪಾರದಲ್ಲಿ ಲಾಸೇ ಆಗಿದೆ ಅಂದುಕೊಳ್ಳೋಣ. ಆದರೆ ಅದಕ್ಕೆ ರೈತರನ್ನೇಕೆ ಬಲಿ ಹಾಕಬೇಕು? ಗುರುನಾಥ, ವಿರೂಪಾಕ್ಷ ಸ್ವಾಮಿ ಮುಂತಾದ ಬಲಿಷ್ಠ ಬ್ರೋಕರ್‌ಗಳಿಗೆ ಮಾತ್ರ ಹಣ ನೀಡಿದ್ದಾನಂತೆ.


ಸಿಪಿಐ ಸೂರ್ಯವಂಶಿ

ರೈತರ ಬಗ್ಗೆ ಗಂಟೆಗಟ್ಟಲೆ ಮಾತಾಡುವ ಪುಡಾರಿಗಳ್ಯಾರೂ ಇತ್ತ ಸುಳಿಯುತ್ತಿಲ್ಲ, ಸಿಪಿಐ ಸೂರ್ಯವಂಶಿ, ಪಿಎಸ್‌ಐ ಮುಷ್ತಾಕ್ ಅಹ್ಮದ್ ರಾಘನ ಏಜಂಟರಂತೆ ವರ್ತಿಸುತ್ತಿದ್ದಾರೆ.


ರಾಘವೇಂದ್ರ ಶೆಟ್ಟಿಯ ಗುರುಕೃಪಾ ಟ್ರೇಡರ್ಸ್

ಪೊಲೀಸರೇ ಸೆಟ್ಲ್‌ಮೆಂಟ್ ಮಾಡ್ತಾರೆ ಎಂಬ ಸುದ್ದಿ ತಿಳಿದ ಸಾಯಿಕೃಷ್ಣ ಆಟೋಮೊಬೈಲ್ಸ್‌ನ ಸುಧಾಕರನಿಗೆ ಖುಷಿ ಆಗಿದೆಯಂತೆ. ಏಕೆಂದರೆ ಈತ ಜನರ 1.5 ಕೋಟಿ ರೂಪಾಯಿಯೊಂದಿಗೆ ಪರಾರಿಯಾಗಿದ್ದಾನೆ. ಈತನೂ ಈಗ ತಿರುಗಿ ಮಾನ್ವಿಗೆ ಬಂದರೆ ಸೂರ್ಯವಂಶಿ ಸೆಟ್ಲ್‌ಮೆಂಟ್ ಮಾಡುತ್ತಾನೇನೊ? ಪೊಲೀಸಪ್ಪಗಳಿಗೆ ಬುದ್ಧಿ ಹೇಳುವವರಾರು?

ಪೊಲೀಸ್ ಡ್ಯೂಟಿ ಎಂದರೆ ಇದೇನಾ?

-ವರದಿಗಾರ

ಬಳ್ಳಾರಿಯಲ್ಲಿ ಕಿಡ್‌ನ್ಯಾಪ್ ಗ್ಯಾಂಗ್: ಲೀಲೇಂದ್ರ ಬಲಿ


ಬಳ್ಳಾರಿ ಗಣಿ ಧೂಳಿನ ಸುಳಿಯಲ್ಲಿ ... ಸರ್ಕಾರ ಬಲಿಯಾಗುವುದೋ ಉಳಿಯುತ್ತದೋ ಎಂಬ ಆತಂಕವಿದ್ದಾಗಲೇ ಅದೇ ಬಳ್ಳಾರಿಯಲ್ಲಿ ಅಮಾಯಕ ಯುವಕ ಲೀಲೇಂದ್ರನಾಥನ ಹತ್ಯೆಯಾಗಿದೆ.

ರಾಜಕೀಯ, ಗಣಿ, ಮಾಫಿಯಾ ಹೀಗೆ ಯಾವುದಕ್ಕೂ ಸಂಬಂಧವಿರದ ಲೀಲೇಂದ್ರನನ್ನು ಈಗ ಬಲಿ ತೆಗೆದುಕೊಂಡಿರುವುದು ಬಳ್ಳಾರಿಯಲ್ಲಿ ರಹಸ್ಯವಾಗಿ ತಲೆ ಎತ್ತುತ್ತಿರುವ ಕಿಡ್‌ನ್ಯಾಪ್ ಗ್ಯಾಂಗ್‌ನವರು.

ಆಂಧ್ರ ಮೂಲದ ವಂಶಿಕೃಷ್ಣ, ಸೀನು, ರತ್ನ ಲೋಕೇಶ್, ಶರಣ್ ಮುಂತಾದವರು ಹಣಕ್ಕಾಗಿ ಬಳ್ಳಾರಿಯ ಕ್ಲಾಸ್ ಒನ್ ಕಂಟ್ರಾಕ್ಟರ್ ಕಿಶೋರ ಬಾಬುರ ಮಗ ಲೀಲೇಂದ್ರನಾಥನನ್ನು ಆಗಸ್ಟ್ 11ರಂದು ಕಿಡ್‌ನ್ಯಾಪ್ ಮಾಡಿ ಕೊನೆಗೆ ಹತ್ಯೆ ಮಾಡಿದ್ದಾರೆ. ಬಳ್ಳಾರಿ ರೂರಲ್ ಪೊಲೀಸರು ಎಂದಿನಂತೆ ಮೊದಲು ಲೀಲೇಂದ್ರನ ಮಿಸ್ಸಿಂಗ್ ಕಂಪ್ಲೇಂಟ್ ತೆಗೆದುಕೊಳ್ಳಲು ಸತಾಯಿಸಿ, ನಂತರ ಆರೋಪಿಗಳು ಕಣ್ಣೆದುರೇ ಓಡಾಡಿಕೊಂಡಿದ್ದರೂ ಗಮನಿಸದೆ 'ದಕ್ಷತೆ' ಮರೆದಿದ್ದಾರೆ. ಕೊನೆಗೆ ಲೀಲೇಂದ್ರನ ಕಿಡ್‌ನ್ಯಾಪ್, ಕೊಲೆಗೆ ಸಂಬಂಧಿಸಿದ ಲಿಂಕ್‌ಗಳನ್ನು ಅವರ ಕುಟುಂಬದವರೇ ಪತ್ತೆ ಹಚ್ಚಿ ಕೊಟ್ಟಾಗ ಪೊಲೀಸರ ಕರ್ತವ್ಯ ಪ್ರಜ್ಞೆ ಜಾಗೃತಗೊಂಡಿದೆ.

ಸ್ನೇಹಿತರೇ ತಂದ ಸಾವು

ಆಗರ್ಭ ಶ್ರೀಮಂತ ಕಿಶೋರಬಾಬುರ ಪುತ್ರ ಇಪ್ಪತ್ತಾರರ ಹುಡುಗ ಲೀಲೇಂದ್ರ ತಂದೆಯ ಕಂಟ್ರಾಕ್ಟ್ ಕೆಲಸದಲ್ಲಿ ನೆರವಾಗುತ್ತಾ ತನ್ನ ಪಾಡಿಗೆ ತಾನಿದ್ದವನು. ಕೇವಲ 5 ತಿಂಗಳ ಹಿಂದಷ್ಟೇ ಲೀಲೇಂದ್ರನ ಮದುವೆಯಾಗಿತ್ತು. ಬೆಳಿಗ್ಗೆಯಿಂದ ಸಂಜೆಯವರೆಗೂ ಕೆಲಸ ಮಾಡಿ, ಸಂಜೆ ಒಂದು ವಾಕ್ ಮುಗಿಸಿ ಎಲ್ಲಿದ್ದರೂ ರಾತ್ರಿ ಎಂಟೂವರೆಗೆ ಮನೆಗೆ ಬಂದೇ ಬರುವ ಅಭ್ಯಾಸವಿದ್ದ ಲೀಲೇಂದ್ರ ಆಗಸ್ಟ್ 11ರಂದು ರಾತ್ರಿ ಮನೆಗೆ ಬರಲೇ ಇಲ್ಲ. ಸಿನಿಮಾಗೆ ಹೋಗಿರಬಹುದು, ಸ್ನೇಹಿತರ ಮನೆಯಲ್ಲಿರಬಹುದು ಎಂದೆಲ್ಲಾ ಮನೆಯವರು ತಾವೇ ಸಮಾಧಾನಪಟ್ಟುಕೊಂಡರೂ ನಾಲ್ಕಾರು ಕಡೆ ಲೀಲೇಂದ್ರನಿಗಾಗಿ ವಿಚಾರಿಸಿದ್ದಾರೆ. ಯಾವ ಸುಳಿವೂ ಸಿಕ್ಕಿಲ್ಲ.



ಎಂ.ಪಿ. ಪ್ರಕಾಶ್


ಆದರೆ ಅದೇ ವೇಳೆಗೆ ಲೀಲೇಂದ್ರನ ಸ್ನೇಹಿತರೇ ಅಲ್ಲಿಪುರಂ ಕೆನಾಲ್ ಹತ್ತಿರ ಅವನ ಉಸಿರು ತೆಗೆಯುತ್ತಿದ್ದ ಸಂಗತಿ ಅವರಿಗೆ ಗೊತ್ತಾಗಲೇ ಇಲ್ಲ.

ಮಾರನೇ ಬೆಳಿಗ್ಗೆ ಲೀಲೇಂದ್ರನ ಬೈಕ್ ಹೊಸಪೇಟೆ ರೋಡಿನ ಪಂಜಾಬಿ ಡಾಬಿ ಹತ್ತಿರ ಸಿಕ್ಕಿದೆ. ವಿಚಾರಿಸಿದಾಗ ಶುಕ್ರವಾರ ಮಧ್ಯಾಹ್ನ ಬಿಳಿ ಬಣ್ಣದ ಹಳದಿ ಬೋರ್ಡಿನ ಇಂಡಿಕಾ ಕಾರೊಂದರಲ್ಲಿ ಲೀಲೇಂದ್ರ ಸಂಡೂರು ಕಡೆಗೆ ಹೋದನೆಂದು ಗೊತ್ತಾಗಿದೆ. ಲೀಲೇಂದ್ರನ ಗೆಳೆಯ ಟ.ಕೆ. ರೆಡ್ಡಿಯದೊಂದು ಇಂಡಿಕಾ ಕಾರಿತ್ತಾದ್ದರಿಂದ ಅವನೊಂದಿಗೆ ಲೀಲೇಂದ್ರ ಹೋಗಿರಬಹುದೆಂದುಕೊಂಡು ಸಮಾಧಾನ ಮಾಡಿಕೊಳ್ಳುವಷ್ಟರಲ್ಲಿ ರೆಡ್ಡಿಯೇ ಸಿಕ್ಕಿ ತಾನು ಲೀಲೇಂದ್ರನನ್ನು ಕರೆದೊಯ್ಯಲಿಲ್ಲ ಎಂದಿದ್ದಾನೆ. ಅದೂ ಅಲ್ಲದೆ ರೆಡ್ಡಿಯ ಕಾರಿನ ಬಣ್ಣ ಬಿಳಿಯದಲ್ಲ, ಹಳದಿ ಬೋರ್ಡಿನದೂ ಆಗಿರಲಿಲ್ಲ. ಇದರಿಂದ ಗಾಬರಿಯಾದ ಕಿಶೋರ ಬಾಬು ಸೀದಾ ರೂರಲ್ ಪೊಲೀಸ್ ಸ್ಟೇಷನ್‌ಗೆ ಹೋಗಿದ್ದಾರೆ.

ಪೊಲೀಸರ ತನಿಖಾ ವೈಖರಿ

"ನಿಮ್ಮ ಹುಡುಗನಿಗೆ ಯಾವ ಹುಡ್ಗೀ ಜೊತೆನಾದ್ರೂ ಅಫೇರ್ ಇತ್ತಾ? ಹುಡುಗಿ ಜೊತೆ ಹೋಗಿರಬಹುದಾ" ಎಂದೆಲ್ಲಾ ಉಡಾಫೆ ಮಾಡಿದ ರೂರಲ್ ಪೊಲೀಸರು ಕೊನೆಗೆ ಅವರನ್ನು ಕೌಲ್ ಬಜಾರ್ ಠಾಣೆಗೆ ಸಾಗಹಾಕಿದ್ದಾರೆ. ಕೊನೆಗೂ ಲೀಲೇಂದ್ರನ ಮಿಸ್ಸಿಂಗ್ ಕಂಪ್ಲೇಂಟನ್ನು ಪೊಲೀಸರು ತೆಗೆದುಕೊಳ್ಳಲು ಒಪ್ಪಿಕೊಂಡಾಗ ರಾತ್ರಿ ಏಳು ಗಂಟೆ. ಅಷ್ಟರಲ್ಲಿ ಲೀಲೇಂದ್ರನ ಶವ ಕೆನಾಲ್‌ನೊಳಗೆ ಎಸೆಯಲ್ಪಟ್ಟಿತ್ತು. ಹತ್ಯೆಗೆ ಬಳಸಿದ್ದ ಕಾರು ಆಂಧ್ರಕ್ಕೆ ವಾಪಸ್ ಹೋಗಿತ್ತು. ಕೊಲೆಗಾರರಲ್ಲಿ ಇಬ್ಬರು ಜಾಗ ಖಾಲಿ ಮಾಡಿದ್ದರು.

ಏನಾಗಿತ್ತೆಂದರೆ ಕಂಪ್ಲೇಂಟ್ ಕೊಟ್ಟ ಮೇಲೆ ಲೀಲೇಂದ್ರನ ಸ್ನೇಹಿತರು ಕುಟುಂಬದವರು ನಲವತ್ತು ಜನ ಅವನ ಫೋಟೋ ಹಿಡಿದುಕೊಂಡು ಬಳ್ಳಾರಿಯ ಬೀದಿ ಬೀದಿ ಹುಡುಕಾಡಿದ್ದಾರೆ. ಕುವೆಂಪುನಗರದಲ್ಲಿ ಹೀಗೆ ತಲಾಶ್ ಮಾಡುತ್ತಿದ್ದಾಗ ಅಂಗಡಿಯವನೊಬ್ಬ ಲೀಲೇಂದ್ರ ಬಂದು ಸಿಗರೇಟ್ ಸೇದಿ ಹೋದ ಸಂಗತಿ ಹೇಳಿದ್ದಾನೆ. ಇನ್ನಷ್ಟು ಕೆದಕಿದಾಗ ಅದೇ ಏರಿಯಾದ ರೂಂ ಒಂದರ ಬಳಿ ಶುಕ್ರವಾರ ಬಿಳಿ ಬಣ್ಣದ ಇಂಡಿಕಾ ಕಾರ್ ಬಂದಿದ್ದ ಸಂಗತಿ ಗೊತ್ತಾಗಿದೆ. ಕಿಶೋರ್ ಬಳಗ ಆ ರೂಂ ಚೆಕ್ ಮಾಡಿ ನೋಡಿದಾಗ ರಾಶಿಗಟ್ಟಲೆ ಸಿಗರೇಟ್ ತುಂಡುಗಳು, ಡ್ರಿಂಕ್ಸ್ ಬಾಟಲುಗಳು ಕಂಡಿವೆ. ಆ ರೂಂನಲ್ಲಿ ಕುಲದೀಪ್ ಹಾಗೂ ರತ್ನ ಎಂಬುವರಿದ್ದರು. ಕೂಡಲೇ ಅದನ್ನು ಪೊಲೀಸರಿಗೆ ತಿಳಿಸಿದ್ದಾರೆ. ಅವರಿಬ್ಬರನ್ನು ಕರೆದುಕೊಂಡು ಹೋದ ಪೊಲೀಸರಿಗೆ ಕುಲದೀಪ್ ಅಂಡ್ ರತ್ನ ಹೇಳಿದ್ದು ಕಾಗಕ್ಕ ಗುಬ್ಬಕ್ಕನ ಕತೆ.



ಸ್ನೇಹಿತರ ಸಂಚಿಗೆ ಬಲಿಯಾದ ಲೀಲೇಂದ್ರ

ಅದೇನೆಂದರೆ ರತ್ನನಿಗೆ ವಿಜಯವಾಡದಲ್ಲಿ ಒಬ್ಬಳು ಲವರ್ ಇದ್ದು, ಅವಳನ್ನು ಕಿಡ್‌ನ್ಯಾಪ್ ಮಾಡಿ ಮದುವೆಯಾಗಲು ಇಂಡಿಕಾ ಕಾರ್ ಬುಕ್ ಮಾಡಿದ್ದಾಗಿಯೂ, ಈಗ ಕಾರ್ ವಾಪಸ್ಸಾಗಿದೆ ಎಂದು ಹೇಳಿದ್ದಾನೆ. ಇದರಲ್ಲಿ ಸಹಕರಿಸಿದ ಸೀನು, ಹರಿಕೃಷ್ಣ ವಿಜಯವಾಡಕ್ಕೆ ಹೋಗಿದ್ದಾರೆಂದು ಮುಗ್ಧ ಶಿಶುವಿನಂತೆ ಹೇಳಿದ್ದಾನೆ. ಮತ್ತದನ್ನು ಪೊಲೀಸರು ನಂಬಿದ್ದಾರೆ. ಕೊಲೆಗಾರನನ್ನು ಬಿಟ್ಟು ಕಳಿಸಿದ್ದಾರೆ.

ಆದರೆ ಮಂಗಳವಾರ ಲೀಲೇಂದ್ರನ ಶವ ಅಲ್ಲೀಪುರಂ ಹತ್ತಿರದ ಗೋಡನ್ ಹಿಂದಿನ ನಾಲೆಯಲ್ಲಿ ಪತ್ತೆಯಾಯಿತು. ಆಗ ಎಚ್ಚೆತ್ತ ಪೊಲೀಸರ ಕೈಗೆ ರತ್ನ, ಲೋಕೇಶ್ ಹಾಗೂ ಕಾರ್ ಡ್ರೈವರ್ ಶರಣನನ್ನು ಲೀಲೇಂದ್ರ ಸಂಬಂಧಿಕರೇ ಹಿಡಿದೊಪ್ಪಿಸಿದ್ದಾರೆ.

ಲೀಲೇಂದ್ರನ ಸ್ನೇಹಿತರಾಗಿದ್ದ ಅವರೆಲ್ಲಾ ಆಗಸ್ಟ್ 11ರ ಶುಕ್ರವಾರ ವೆಡ್ಡಿಂಗ್ ಇನ್ವಿಟೇಷನ್ ಹಂಚಲು ಬಾ ಎಂದು ಆಂಧ್ರದಿಂದ ತರಿಸಿದ ಬಾಡಿಗೆ ಇಂಡಿಕಾ ಕಾರ್ ಹತ್ತಿಸಿಕೊಂಡು ಬಹುದೂರ ಹೋದ ನಂತರ ಲೀಲೇಂದ್ರನನ್ನೇ ಕಿಡ್‌ನ್ಯಾಪ್ ಮಾಡಿರುವ ವಿಚಾರ ಹೇಳಿದ್ದಾರೆ. ತಂದೆಗೆ ಫೋನ್ ಮಾಡಿ 25 ಲಕ್ಷ ಒತ್ತೆ ಹಣ ತರಿಸುವಂತೆ ಬೆದರಿಸಿದ್ದಾರೆ. ಲೀಲೇಂದ್ರ ಇದಕ್ಕೆ ಒಪ್ಪದೆ ಹೋದಾಗ ಉಸಿರುಗಟ್ಟಿಸಿ ಕೊಂದು ಹತ್ತಿರದ ನಾಲೆಗೆ ಬಿಸಾಡಿ ಹೋಗಿದೆ ಹಂತಕರ ತಂಡ. ಆಶ್ಚರ್ಯವೆಂದರೆ ಕೊಲೆಗಾರರ ಪೈಕಿ ಸುಬ್ಬರಾಜು ಎಂಬಾತ ವಾಪಸ್ ಬಂದ ಮೇಲೆ ಕಿಶೋರ್ ಬಾಬು ಮನೆಯವರೊಂದಿಗೆ ಕೂಡಿ ಲೀಲೇಂದ್ರನಿಗಾಗಿ ಹುಡುಕಾಡಿದ್ದಾನೆ!

ಇದೇ ಗ್ಯಾಂಗ್ ಕೆಲ ದಿನಗಳ ಹಿಂದೆ ಬೇಕರಿ ಮಾಲೀಕರನೊಬ್ಬನಿಗೆ 5 ಲಕ್ಷ ನೀಡುವಂತೆ ಬೆದರಿಸಿದ್ದ ಸಂಗತಿ ಈಗ ಬಯಲಾಗಿದೆ. ಬಹುಶಃ ಬಳ್ಳಾರಿಯ ಕೋಟ್ಯಾಧೀಶ ಗಣಿ ಮಾಲೀಕರಿಗೂ ಹಣಕ್ಕಾಗಿ ಬೆದರಿಕೆ ಫೋನ್, ಪತ್ರ ಬರೆದ ಘಟನೆಗಳೆಲ್ಲಾ ಇದೇ ಗ್ಯಾಂಗಿನ ಕೈವಾಡವೂ ಇದ್ದಿರಬಹುದು. ಆಂಧ್ರಮೂಲದ ವಂಶಿಕೃಷ್ಣ ಅಲ್ಲಿನ ಪೊಲೀಸರ ವಾಂಟೆಡ್ ಲಿಸ್ಟ್‌ನಲ್ಲಿರುವ ವ್ಯಕ್ತಿ. ಈಗ ಬಳ್ಳಾರಿ ಪೊಲೀಸರಿಗೆ ಕೈಕೊಟ್ಟು ಮತ್ತೆ ಆಂಧ್ರಕ್ಕೆ ಪರಾರಿಯಾಗಿದ್ದಾನೆ.

ಬಳ್ಳಾರಿಯಲ್ಲಿ ಭೂಗತ ಪಾತಕಿಗಳ ಚಟುವಟಿಕೆಗಳು,ಪೊಲೀಸರ ಅದಕ್ಷತೆ ಹಾಗೂ ಲೀಲೇಂದ್ರನಂತಹ ಮುಗ್ಧರ ಹತ್ಯೆ ಖಂಡಿಸಿ ಜನ ಪ್ರತಿಭಟನೆಗಿಳಿಯುತ್ತಿದ್ದಾರೆ.

ಗೃಹಮಂತ್ರಿ ಎಂ.ಪಿ.ಪ್ರಕಾಶ್ ದಿನದ 24 ಗಂಟೆಯೂ ದೇವೇಗೌಡರ ಕುಟುಂಬದ ಗುಲಾಮು ಚಾಕರಿ ಮಾಡುವ ಬದಲಾಗಿ ತಮ್ಮ ತವರು ಜಿಲ್ಲೆಯ ಲಾ ಅಂಡ್ ಆರ್ಡರ್ ಬಗ್ಗೆ ಸ್ವಲ್ಪ ಗಮನ ಹರಿಸಿದರೆ ಒಳ್ಳೆಯದು. ●

ಕನ್ನ ಬಿತ್ತು ರನ್ನನ ಶಾಲೆಗೆ ಮಕ್ಕಳೆಲ್ಲಾ ಬಿದ್ದವು ಮೂಲೆಗೆ!

ಬಾಗಲಕೋಟೆ

ಇರೋದು ಏಳು ರೂಮು. ಅದರಲ್ಲೊಂದು ಆಫೀಸು. ಇನ್ನೊಂದು ಕಿಚನ್ನು.... ಇನ್ನೈದರಲ್ಲಿ 6 ರಿಂದ 10 ನೇ ಕ್ಲಾಸ್‌ಗಳ ಪಾಠ ನಡೆಯುತ್ತವೆ. ಆಯ್ತು ಈ ವಸತಿ ಶಾಲೆಯಲ್ಲಿ ಮಕ್ಕಳೆಲ್ಲಿ ಮಲಗ್ತಾವು? ಅಲ್ಲೇ ಮಲಗೋದು, ಅಲ್ಲೇ ಲಗೇಜು, ಅಲ್ಲೇ ಪಾಠ! ಪಾಠ ಮಾಡೋದೊಂದು ಮಾತ್ರ ಅಪರೂಪ. ಕಸದಂತಹ ಊಟವನ್ನು ಕ್ಲಾಸಲ್ಲೇ ಮಾಡ್ಬೇಕು. ಪಾಯಿಖಾನೆಯ ಮಾತು ಬಿಡಿ. ಈ ಸ್ಕೂಲ್‌ನ ಹೆಡ್‌ಮಾಸ್ಟರ್ ಸಿ.ಬಿ. ಮೇತ್ರಿಯೇ ಒಂದು ಪಾಯಿಖಾನೆ! ಈ ಪಾಯಿಖಾನೆಗೆ ಅಂಟಿಕೊಂಡೇ ಇನ್ನೂರು ಮೇತ್ರಿಯ ಮೂತ್ರಿಗಳಿವೆ. ಒಬ್ಬ ದಾಸರೆಡ್ಡಿ, ಇನ್ನೊಬ್ಬ ನ್ಯಾಮಗೌಡ, ಮಗದೊಬ್ಬ ಕುಳಸಿಗೇರಿ. ಈ ಮೂವರು ಮುಠ್ಠಾಳರು ಶಿಕ್ಷಕರಿಲ್ಲಿ. ಮೇತ್ರಿ ಮಕ್ಕಳ ಪಾಲಿನ ಆಹಾರ ಪದಾರ್ಥಗಳನ್ನು ನುಂಗುತ್ತ, ಮೂವರು ಮಾಸ್ತರು ಶಿಕ್ಷಕರನ್ನು ಹುರಿದುಂಬಿಸುತ್ತಾ ಇಡೀ ಶಾಲೆಯನ್ನೇ ಕೊಂಡವಾಡ ಮಾಡಿಬಿಟ್ಟಿದ್ದಾನೆ. ಈ ನಾಲ್ವರು ಪಾಠ ಮಾಡುವುದಿರಲಿ, ಶಾಲೆಗೆ ಬರೋದೇ ಅಪರೂಪ! ಹಟ್ಟಿ, ಶ್ರೀಮತಿ ದೇಶಪಾಂಡೆಗಳಿಲ್ಲಿ ವಾರ್ಡನ್‌ಗಳು. ಮೇಯುವುದರಲ್ಲಿ ಇಬ್ಬರದೂ ಎತ್ತಿದ ಕೈ, ಚಾಚಿದ ನಾಲಿಗೆ! 'ವಸತಿ ಶಾಲೆಯ ಟಿವಿ ಎಲ್ಲೈತಿ' ಅಂತಾ ಕೇಳದಿರಿ. ಅದು ಹೆಡ್‌ಮಾಸ್ತ್ರ ಮೇತ್ರಿಯೊಂದಿಗೆ ಮೈತ್ರಿ ಮಾಡಿಕೊಂಡೈತಿ. ಅದಕ್ಕೇ ಅವ್ನ ಮನೆ ಸೇರಿಬಿಟ್ಟೈತಿ..... ಟ.ವಿ. ಹಿಂದೆ ಕಂಪ್ಯೂಟರುಗಳು ಎಚ್.ಎಮ್. ಮನೆ ಸೇರಿಬಿಟ್ಟವೆ.



[illegible]

ದೇವೇಗೌಡ ಸಿ.ಎಮ್. ಆಗಿದ್ದಾಗ ಈ ರನ್ನ ವಸತಿ ಶಾಲೆ ಆರಂಭಿಸಲಾಯ್ತು, ಜಿಲ್ಲಾ ಪಂಚಾಯತ್‌ನ ಸಿ.ಎಸ್ ರಾಮಣ್ಣ ಈ ವಸತಿ ಶಾಲೆಯನ್ನ ನೋಡಿಕೊಳ್ಳಬೇಕು. 2000 ರವರೆಗೂ ಸ್ವಂತ ಕಟ್ಟಡ ಇರಲಿಲ್ಲ. ಮಾಜಿ ಸಚಿವ ತಿಮ್ಮಾಪುರ ಸ್ವಂತ ಕಟ್ಟಡಕ್ಕೆ ಫಂಡ್ಸ್ ಬಿಡುಗಡೆ ಮಾಡಿದ. ಜಿಲ್ಲಾ ಪಂಚಾಯತ್‌ನ ಪರಮಪಾಪಿ ಇಂಜಿನಿಯರ್ ಎಚ್.ಎನ್. ಚೌಹಾಣ್ ಐದು ವರ್ಷ ಕಾಲ ಕಟ್ಟೇ ಕಟ್ಟಿದ, ತಿಂದೇ ತಿಂದ.... ಕೊನೆಗೊಂದು ಕಳಪೆ ಬಿಲ್ಡಿಂಗ್ ಎದ್ದು ನಿಂತಿತು.

[illegible]

245 ಪ್ರತಿಭಾವಂತ ಬಡಮಕ್ಕಳು ಓದುವ ಈ ಶಾಲೆಗೆ ಒಬ್ಬ ವಿದ್ಯಾರ್ಥಿಗೆ 480 ರಂತೆ ತಿಂಗಳಿಗೆ ಒಟ್ಟು 1 ಲಕ್ಷ 16 ಸಾವಿರ ರೂಪಾಯಿ ಅನುದಾನ ಬರುತ್ತದೆ. ಟಿಫಿನ್, ಊಟ, ಬಟ್ಟೆ, ಕ್ಷೌರ ಈ ಯಾವ ವ್ಯವಸ್ಥೆಯನ್ನು ಸರಿಯಾಗಿ ಮಾಡದೇ ಹಣ ನುಂಗುತ್ತಲೇ ಇದ್ದಾರೆ. ಜಿಲ್ಲಾ ಪಂಚಾಯ್ತಿಯ ಸಿ.ಎಸ್. ರಾಮಣ್ಣ ನಾಯಕ್. ಹೇಳಿಕೇಳಿ ಸಚಿವ ಕಾರಜೋಳನ ಹಿಂಡ, ಎಂ.ಪಿ. ಗದ್ದಿಗೌಡ ಬೆಳೆಸಿದ ಭಂಡ. 'ವಸತಿ ಶಾಲೆ ಹಳ್ಳ ಹಿಡಿದೈತಲ್ರಿ' ಎಂದು 'ಲಂಕೇಶ್' ಕೇಳಿದರೆ 'ಎಲ್ಲಾ ಟ್ರಾನ್ಸ್‌ಫರಂಟು ಐತಿ.... ನೀವ್ ನಮ್ಮ ಹೇಳಬ್ಯಾಡ್ರಿ' ಎಂದು ರಾಮಣ್ಣ ನಾಯಕ್ ಹೇಳುತ್ತಾನೆ. 'ಅಯ್ತು ಬಿಡಿ, ನಾವ್ ರಿಪೋರ್ಟ್ ... [illegible] ಮಾಡಬಾರ್ದರಿ' ಎಂದುಬಿಡುತ್ತಾನೆ ಪರಮ ಭ್ರಷ್ಟ ನಾಯಕ್. ಶಿವಮೊಗ್ಗದ ರಮೇಶ್ ಪೂಜಾರಿ ತನ್ನ ಫುಡ್ ಸಪ್ಲೈ ಟೆಂಡರ್ ಅವಧಿ ಮುಗಿದಿದ್ದರೂ ಇನ್ನೂ ಸಪ್ಲೈ ಮಾಡ್ತಾನೇ ಇದ್ದಾನೆ ಕಳಪೆ ಆಹಾರ ಧಾನ್ಯಗಳನ್ನು! Next ಗದ್ದಿಗೌಡನ ಸಂಬಂಧಿಗಳೇ ಫುಡ್‌ಸಪ್ಲೈ ಮಾಡ್ತಾರಂತೆ.




ಗೋವಿಂದ ಕಾರಜೋಳ

ಈ ವರ್ಷ ಶಾಲೆ ಶುರುವಾಗಿ 4 ತಿಂಗಳಾದರೂ ಪುಸ್ತಕ ಇಲ್ಲ, ಪಾಠವೂ ಇಲ್ಲ, ರಾತ್ರಿ ಸರಿಯಾಗಿ ಕರೆಂಟ್ ಇರುವುದಿಲ್ಲ, ಶಾಲೆಯ ಜನರೇಟರ್‌ನ್ನು ಬಾಡಿಗೆ ಕೊಟ್ಟು ಕಾಸು ಎತ್ತುತ್ತಾನೆ ಹೆಡ್‌ಮಾಸ್ತ್ರ. ಶಾಲೆಯ ಕಾಟ್‌ಗಳೆಲ್ಲ ಶಿಕ್ಷಕರ ಮನೆ ಸೇರಿವೆ. ಮಕ್ಕಳು ಮೂಲೆಯಲ್ಲೇ ಮಲಗಿ, ಅಲ್ಲೇ ಊಟ ಮಾಡಿ, ಅಲ್ಲೇ ಪಾಠ ಕಲಿತು (ಪಾಠ ಮಾಡಿದರೆ ತಾನೆ?) 'ವಿದ್ಯಾರ್ಥಿಗಳು' ಎನಿಸಿಕೊಳ್ಳಬೇಕಾಗಿದೆ.

ಪ್ರತಿಭಾವಂತ ಗ್ರಾಮೀಣ ಮಕ್ಕಳ ಗೋಳು ಬೆಡ್ಡಿ ಸಚಿವ ಕಾರಜೋಳ, ಬೆಡ್ಡಿ ಎಂಪಿ ಗದ್ದಿಗೌಡರಿಗೆ ಕೇಳುವುದೇ ಇಲ್ಲ. ಜಿಲ್ಲಾ ಪಂಚಾಯ್ತಿಯಲ್ಲಿ ಗೂಟ ಬಡಿದುಕೊಂಡು ಕುಳಿತಿರುವ ರಾಮಣ್ಣ ನಾಯಕ್‌ನನ್ನು ಮೊದಲು ಇಲ್ಲಿಂದ ಓಡಿಸಬೇಕಾಗಿದೆ.

ಹಾಗೆಯೇ ಹೆಡ್‌ಮಾಸ್ತ್ರ ಮೇತ್ರಿ, ದುಶ್ಯಾಸನ ಮೈತ್ರಿಗಳಾದ ದಾಸರೆಡ್ಡಿ, ನ್ಯಾಮಗೌಡ, ಕುಳಸಿಗೇರಿ ಹಟ್ಟಿ, ಶ್ರೀಮತಿ ದೇಶಪಾಂಡೆಗಳೆಂಬ ಹೆಗ್ಗಣಗಳಿಂದ ಈ ವಸತಿಶಾಲೆ ರಕ್ಷಿಸುವ ಕೆಲಸವನ್ನು ಮುಖ್ಯೋ... ಜನರೇ ಮಾಡಬೇಕಾಗಿದೆ. ಕವಿ ರನ್ನನ ಹೆಸರಲ್ಲಿ ಅನ್ನ ... ತಿನ್ನುತ್ತಿರುವವರಿಗೆ ಪಾಠ ಕಲಿಸಬೇಕಾಗಿದೆ.

—[illegible]



-ಹಸನ್ ನಸರುಲ್ಲಾ "ಸಾಮ್ರಾಜ್ಯವಾದವಿರುವ ತನಕ ನಮ್ಮ ಯುದ್ಧ ಮುಂದುವರೆಯುತ್ತದೆ."

ಸಾಮ್ರಾಜ್ಯವಾದ ಮತ್ತು ಇಸ್ರೇಲಿ ಜಿಯೊನಿಸಂಗಳ ವಿರುದ್ಧ ನಾವು ಮತ್ತು ಲೆಬನಾನಿನ ಸಮಾಜವಾದಿಗಳು ಹೆಗಲಿಗೆ ಹೆಗಲಾಗಿ ಹೋರಾಡಬೇಕೆಂದು ನಾವು ಬಯಸುತ್ತೇವೆ. ಇದು ಕೇವಲ ನಮ್ಮೊಬ್ಬರ ಹೋರಾಟವಲ್ಲ. ಇದು ವಿಶ್ವದಾದ್ಯಂತ ಇರುವ ಶೋಷಿತರೆಲ್ಲರ ಹೋರಾಟ. ಒಂದು ವೇಳೆ ಪ್ಯಾಲೇಸ್ಟೇನ್ ಮತ್ತು ಲೆಬನಾನಿನ ಜನತೆ ತಮ್ಮ ಹೋರಾಟದಲ್ಲಿ ಸೋತರೆ ಅದು ಇಡೀ ವಿಶ್ವದ ಜನತೆಯ, ಶೋಷಿತ ಜನರ ಸೋಲಾಗಿರುತ್ತದೆ.

ಜಗತ್ತಿನ ಎಲ್ಲಾ ದೇಶಗಳ, ಜನತೆಯ ಪ್ರತಿರೋಧವನ್ನು ಅತ್ಯಂತ ಜನಾಂಗೀಯ ದುರಭಿಮಾನದಿಂದ ಹಾಗೂ ಮುಸ್ಲಿಂ ದ್ವೇಷದಿಂದ ಧಿಕ್ಕರಿಸಿದ ಇಸ್ರೇಲ್ ಲೆಬನಾನಿನ ಮೇಲೆ ಒಂದು ತಿಂಗಳ ಕಾಲ ಏಕಪಕ್ಷೀಯ ಯುದ್ಧ ನಡೆಸಿ ಸಹಸ್ರಾರು ಮುಗ್ಧ ಲೆಬನಾನಿಯರನ್ನು ಕೊಂದು ಹಾಕಿತು. ತಮ್ಮ ಕಣ್ಣೆದುರೇ ನಡೆದ ಈ ಜನಾಂಗೀಯ ನರಮೇಧವನ್ನು, ಮತ್ತೊಂದು ದೇಶದ ಮೇಲಿನ ಅಪ್ರಜಾತಾಂತ್ರಿಕ ಆಕ್ರಮಣವನ್ನು ವಿಶ್ವದ ಅತಿದೊಡ್ಡ ಮತ್ತು ಅತಿ ಹಳೆಯ ಪ್ರಜಾತಂತ್ರಗಳೆಂದು ಹೇಳಿಕೊಳ್ಳುವ ಅಮೆರಿಕ ಮತ್ತು ಬ್ರಿಟನ್ ಗಳು ಬಲವಾಗಿ ಸಮರ್ಥಿಸಿ ಕೊಂಡವು.

1967ರಲ್ಲಿ ಇಸ್ರೇಲ್ ಲೆಬನಾನಿನ ಕೆಲವು ಪ್ರದೇಶಗಳನ್ನು ಬಹಿರಂಗವಾಗಿಯೇ ಆಕ್ರಮಿಸಿಕೊಂಡಾಗ ಲೆಬನಾನಿನ ಹಕ್ಕುಗಳ ಬಗ್ಗೆ ಮಾತಾಡದೆ ಇಸ್ರೇಲನ್ನು ಸಮರ್ಥಿಸಿದ್ದ ಅಮೆರಿಕ ಈಗ ಮತ್ತೆ ಇಸ್ರೇಲಿನ ದುರಾಕ್ರಮಣವನ್ನು ಸಮರ್ಥಿಸಿದೆ. ಲೆಬನಾನಿನ ಸ್ವಾತಂತ್ರ್ಯಕ್ಕಾಗಿ ಮತ್ತು ಇಸ್ರೇಲ್ ಆಕ್ರಮಣದ ವಿರುದ್ಧ ಹೋರಾಡುತ್ತಿರುವ ಸ್ವಾತಂತ್ರ್ಯ ಪ್ರೇಮಿ ಹೆಜ್ಬುಲ್ಲಾ ಸಂಘಟನೆಯ ಯೋಧರು ಇಸ್ರೇಲ್ ಆಕ್ರಮಣಕಾರಿ ಪಡೆಯ ಇಬ್ಬರು ಸೈನಿಕರನ್ನು ಅಪಹರಿಸಿದ್ದರಿಂದ ತನ್ನ ಆತ್ಮರಕ್ಷಣೆಗಾಗಿ ಇಡೀ ಲೆಬನಾನನ್ನು ಧ್ವಂಸ ಮಾಡುವ ಹಕ್ಕು ಇಸ್ರೇಲಿಗಿದೆಯೆಂದು ಅಮೆರಿಕ ಪ್ರತಿಪಾದಿಸಿತು.

ವಿಶ್ವದ ಜನತೆ ಇಸ್ರೇಲಿನ ಆಕ್ರಮಣದ ವಿರುದ್ಧ ಹೋರಾಟವನ್ನು ತೀವ್ರಗೊಳಿಸುತ್ತಿದ್ದಂತೆ ಅಮೆರಿಕ, ವಿಶ್ವಸಂಸ್ಥೆ ಇದರ ಬಗ್ಗೆ ಒಂದು ಠರಾವು ಬರೆಯುತ್ತಿದೆ. ಅದಿನ್ನೂ ಮುಗಿದಿಲ್ಲ, ಅದು ಸಿದ್ಧವಾದ ತಕ್ಷಣ ಯುದ್ಧ ನಿಲ್ಲುತ್ತದೆ ಎಂದು ಹೇಳಿ ಇಸ್ರೇಲಿನ ಆಕ್ರಮಣಕ್ಕೆ ಹಾಗೂ ಅದು ಮಾಡುತ್ತಿದ್ದ ಘೋರ ದಾಳಿಗಳಿಗೆ ಕ್ಲೀನ್‌ಚಿಟ್ ನೀಡಿದವು. ಅಂತಿಮವಾಗಿ ಈಗ ಕದನ ವಿರಾಮ ಘೋಷಿತವಾಗಿದೆ. ಆದರೆ ಇಸ್ರೇಲ್ ಲೆಬನಾನಿನ ಮೇಲೆ ನಡೆಸಿದ ಘೋರ ಆಕ್ರಮಣದ ಪರಿಣಾಮಗಳಿಂದ ಹೊರಬರಲು ಲೆಬನಾನಿಗೆ ಇನ್ನೂ ಸಾಕಷ್ಟು ಕಾಲ ಹಿಡಿಯಲಿದೆ. ಅಷ್ಟು ಮಾತ್ರವಲ್ಲ, ಈಗ ಕದನ ವಿರಾಮ ಆಗಿದ್ದರೂ ಹೆಜ್ಬುಲ್ಲಾ ಸಂಘಟನೆಯು ನಿರ್ನಾಮವಾಗುವ ತನಕ ಯುದ್ಧ ನಿಲ್ಲದು ಎಂದು ಇಸ್ರೇಲ್ ಘೋಷಿಸಿದೆ. ಇನ್ನೊಂದೆಡೆ ಇಸ್ರೇಲ್ ಮತ್ತು ಅದನ್ನು ಬೆಂಬಲಿಸುವ ಅಮೆರಿಕ ಸಾಮ್ರಾಜ್ಯ ನಿರ್ನಾಮವಾಗುವ ತನಕ ತಮ್ಮ ಸ್ವಾತಂತ್ರ್ಯ ಹೋರಾಟ ನಿಲ್ಲದು ಎಂದು ಹೆಜ್ಬುಲ್ಲ ಘೋಷಿಸಿದೆ. ಮತ್ತೊಂದೆಡೆ ಅಮೆರಿಕದ ಜಾಗತಿಕ ಷಡ್ಯಂತ್ರದ ಅರಿವಿಲ್ಲದ ಅಥವಾ ಅದನ್ನು ಮುಚ್ಚಿ ಹಾಕಲು ಬಯಸುವ ಭಾರತದ ರಾಜಕಾರಣಿಗಳು ಮತ್ತು ಬುದ್ಧಿಜೀವಿಗಳು ಹೆಜ್ಬುಲ್ಲಾದ ಹೋರಾಟವನ್ನು ಇಸ್ಲಾಂ ಮೂಲಭೂತವಾದಿ ಹೋರಾಟವೆಂಬಂತೆ, ಜಾಗತಿಕ ಭಯೋತ್ಪಾದನೆ ಎಂಬಂತೆ ಚಿತ್ರಿಸಿದರೆ ಸ್ವಪನ್‌ದಾಸ್ ಗುಪ್ತಾನಂಥ ಚಿಲ್ಲಿ ಚಿಂತಕರು ಇಸ್ರೇಲ್‌ನಿಂದ ಭಾರತ ಸಹ ಪಾಠ ಕಲಿತು ಪಾಕಿಸ್ತಾನದ ಮೇಲೆ ದಾಳಿ ಮಾಡಿ ಕಾಶ್ಮೀರಿ ಭಯೋತ್ಪಾದಕರನ್ನು ಮಟ್ಟ ಹಾಕಬೇಕೆಂದು ಪ್ರತಿಪಾದಿಸುತ್ತಿದ್ದಾರೆ. ಇನ್ನು ಕೆಲವರು ಈ ಯುದ್ಧಕ್ಕೆ ಮೂಲ ಕಾರಣ ಹೆಜ್ಬುಲ್ಲಾ ಸಂಘಟನೆ ಇಸ್ರೇಲಿನ ಯೋಧರನ್ನು ಅಪಹರಿಸಿದ್ದು ಆದ್ದರಿಂದ ಇಸ್ರೇಲಿನದ್ದು ತಪ್ಪಿಲ್ಲ ಎಂದು ಅಮಾಯಕವಾಗಿ ಆದರೆ ಅಪಾಯಕಾರಿಯಾಗಿ ಯೋಚಿಸುತ್ತಿದ್ದಾರೆ. ಇಸ್ರೇಲಿನ ಜನಾಂಗೀಯ ದ್ವೇಷವನ್ನು, ಮಧ್ಯ ಏಷಿಯಾದಲ್ಲಿ ಅಮೆರಿಕದ ಬಲಗೈ ಬಂಟನಾಗಿ ಅಮೆರಿಕದ ಸಾಮ್ರಾಜ್ಯಶಾಹಿ ಬುಲಿಗೆಗೆ ಅದು ವಹಿಸುತ್ತಿರುವ ಪಾತ್ರವನ್ನು ಅರ್ಥ ಮಾಡಿಕೊಳ್ಳದೆ ಮಧ್ಯ ಏಶಿಯಾದ ವರ್ತಮಾನದ ವಿನಾಶವನ್ನು, ನಾಳೆ ಭಾರತದಂತ ದೇಶದಲ್ಲೂ ಸಂಭವಿಸಬಹುದಾದ ಅನಾಹುತವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಮಸ್ಯೆಯ ಮೂಲಕ್ಕೆ ಹೋಗುವುದೆಂದರೆ ಎಷ್ಟು ಮೂಲಕ್ಕೆ? ಎಷ್ಟು ಆಳಕ್ಕೆ ಹೋಗಲು ಸಿದ್ಧವಿದ್ದೇವೆ ಎಂಬುದು ಮುಖ್ಯ. ಇದರ ಮೇಲೆ ಸತ್ಯದ ಆಳದ ಅರಿವು ಉಂಟಾಗುತ್ತದೆ.

ಇಂದು ಮಾಧ್ಯಮಗಳು ಅಮೆರಿಕ ಸಾಮ್ರಾಜ್ಯವಾದದ ಹಿತಾಸಕ್ತಿಯ ಮೂಗಿನ ನೇರಕ್ಕೆ ತಕ್ಕಂತೆ ಸತ್ಯವನ್ನು ಬತ್ತರಿಸುತ್ತವೆ. ಇಸ್ರೇಲ್ ಲೆಬನಾನನ್ನು, ಪ್ಯಾಲೆಸ್ಟೇನನ್ನು ಬಲವಂತದಿಂದ ಆಕ್ರಮಿಸಿರುವುದನ್ನು ಮರೆಮಾಚುತ್ತವೆ. 1967ರಿಂದಲೂ ಲೆಬನಾನ್ ಇಸ್ರೇಲಿನ ಆಕ್ರಮಣದ ವಿರುದ್ಧ ಹೋರಾಡುತ್ತಿರುವುದನ್ನು, ಇಸ್ರೇಲ್ ಅಮೆರಿಕದ ಬೆಂಬಲದೊಂದಿಗೆ ದಿನೇದಿನೇ ಅರಬ್ ದೇಶಗಳಿಂದ ಪ್ರದೇಶಗಳನ್ನು ಕಸಿಯುತ್ತಲೇ ಇರುವುದನ್ನು, ಅದಕ್ಕಾಗಿ ಇಡೀ ಮಧ್ಯಪ್ರಾಚ್ಯದಲ್ಲಿ ರಕ್ತಪಾತ ಮಾಡುತ್ತಿರುವುದನ್ನು ಮರೆಮಾಚುತ್ತವೆ.

ಅದೇರೀತಿ ತನ್ನ ವಿರುದ್ಧ ಹೋರಾಡುತ್ತಿರುವವರನ್ನು ಅಮಾನ್ಯಗೊಳಿಸಲು ಇಲ್ಲದ ಅಪಪ್ರಚಾರವನ್ನು, ಅರ್ಧಸತ್ಯಗಳನ್ನು, ಹಸಿಸುಳ್ಳುಗಳನ್ನು ಬಿತ್ತರಿಸುತ್ತವೆ. ಅಮೆರಿಕದ ಸಾಮ್ರಾಜ್ಯಶಾಹಿ ಆಕ್ರಮಣದ ವಿರುದ್ಧವಿರುವ ಎಲ್ಲ ಸರ್ಕಾರಗಳೂ ರೌಡಿ ಸರ್ಕಾರಗಳೆಂದೂ ಅವರಿಂದ ವಿಶ್ವಶಾಂತಿಗೆ ಧಕ್ಕೆ ಇದೆಯೆಂದೂ ಬಿಂಬಿಸಿದರೆ ಮತ್ತೊಂದು ಕಡೆ ತನ್ನ ವಿರುದ್ಧ ಹೋರಾಡುತ್ತಿರುವ ಜನಸಂಘಟನೆಗಳೆಲ್ಲಾ ಇಸ್ಲಾಮಿಕ್ ಮೂಲಭೂತವಾದಿ, ಟೆರರಿಸ್ಟ್ ಸಂಘಟನೆಗಳೆಂದೇ ಬಿಂಬಿಸುತ್ತವೆ. ಆ ಮೂಲಕ ಜಗತ್ತಿನೆದುರು ಅವರನ್ನು ಅಮಾನ್ಯಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಇಂದು ಲೆಬನಾನಿನ ಬಗ್ಗೆ ಮತ್ತು ಅಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಹೆಜ್ಬುಲ್ಲಾ ಸಂಘಟನೆಯ ಬಗ್ಗೆಯೂ ಇದೇ ಬಗೆಯ ಅಪಪ್ರಚಾರಗಳನ್ನು ಅಮೆರಿಕ ಹಾಗೂ ಇಸ್ರೇಲ್ ಮಾಡುತ್ತಿವೆ. ಹೆಜ್ಬುಲ್ಲಾ ಒಂದು ಮುಸ್ಲಿಮ್ ಟೆರರಿಸ್ಟ್ ಸಂಘಟನೆಯೆಂದೂ ಅದಕ್ಕೆ ಲೆಬನಾನಿನ ಜನರ ಬೆಂಬಲವಿಲ್ಲವೆಂದು ಪ್ರಚಾರ ಮಾಡುತ್ತಿವೆ. ಆ ಮೂಲಕ ತಮ್ಮ ಟೆರರಿಸಂ ಅನ್ನು ಮರೆಮಾಚುತ್ತಿವೆ.


ಆದರೆ ವಾಸ್ತವ ಅದಲ್ಲ, ಲೆಬನಾನ್ ಒಂದು ಮುಸ್ಲಿಂ ಮೂಲಭೂತವಾದಿ ಸಂಘಟನೆಯೂ ಅಲ್ಲ, ಇಸ್ರೇಲ್ ವಿರುದ್ಧದ ಅದರ ಹೋರಾಟ ಕೇವಲ ಧಾರ್ಮಿಕ ನೆಲಗಟ್ಟಿನದೂ ಅಲ್ಲ. ಹೆಜ್ಬುಲ್ಲ ಸಂಘಟನೆ ಇಸ್ರೇಲ್ ಮತ್ತು ಅದರ ಹಿಂದಿನ ಅಮೆರಿಕ ಆಕ್ರಮಣದ ಸಾಮ್ರಾಜ್ಯಶಾಹಿತನವನ್ನು ಅದರ ರಾಜಕೀಯ ಮತ್ತು ಆರ್ಥಿಕ ನೆಲೆಯಿಂದಲೂ ಅರ್ಥ ಮಾಡಿಕೊಳ್ಳುತ್ತದೆ. ಹೀಗಾಗಿಯೇ ಹೆಜ್ಬುಲ್ಲಾ ಸಂಘಟನೆಯಲ್ಲೂ ಮುಸ್ಲಿಮ್ ಶಿಯಾ, ಸುನ್ನಿ ಪಂಗಡಗಳು ಮಾತ್ರವಲ್ಲದೆ ಕ್ರಿಶ್ಚಿಯನ್ನರೂ ಇದ್ದಾರೆ, ಸಮಾಜವಾದಿ ಮತ್ತು ಕಮ್ಯುನಿಸ್ಟರೂ ಇದರ ಭಾಗವಾಗಿದ್ದಾರೆ. ಒಂದು ಅಧ್ಯಯನದ ಪ್ರಕಾರ ಲೆಬನಾನಿನಲ್ಲಿ ಇಸ್ರೇಲ್ ಮತ್ತು ಅಮೆರಿಕ ವಿರುದ್ಧದ ಹೋರಾಟದಲ್ಲಿ ಆತ್ಮಹತ್ಯಾ ಪಡೆಗಳಲ್ಲಿ ಹುತಾತ್ಮರಾದ 34 ಜನರಲ್ಲಿ 20ಕ್ಕೂ ಹೆಚ್ಚು ಜನರು ಸಮಾಜವಾದಿಗಳು ಮತ್ತು ಕಮ್ಯುನಿಸ್ಟ್ ಸಿದ್ಧಾಂತದಲ್ಲಿ ನಂಬಿಕೆ ಇದ್ದವರಾಗಿದ್ದರಂತೆ.

ಈ ಅಂಶಗಳು ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುವುದೇ ಇಲ್ಲ, ಪರ್ಯಾಯ ಮಾಧ್ಯಮಗಳಲ್ಲಿ ಮಾತ್ರ ಈ ಬಗೆಯ ನೈಜತೆ ಪ್ರಕಟಗೊಳ್ಳುತ್ತದೆ. ಲೆಬನಾನಿನ ಹೆಜ್ಬುಲ್ಲಾ ಸಂಘಟನೆಯ ಬಗ್ಗೆಯೂ ಅಮೆರಿಕದ ಸತತ ಅಪಪ್ರಚಾರ ನಡೆಯುತ್ತಿರುವಾಗಲೇ ಕದನ ವಿರಾಮ ಘೋಷಿಸಿದ ಎರಡು ದಿನಗಳ ಮುನ್ನ ಟರ್ಕಿಯ ಸಮಾಜವಾದಿಗಳ 'ಎವೆರೆನ್ಸೆಲ್' ಎಂಬ ಪತ್ರಿಕೆ ಹೆಜ್ಬುಲ್ಲ ಸಂಘಟನೆಯ ಮುಖ್ಯಸ್ಥ ಹಸನ್ ನಸರುಲ್ಲರನ್ನು ಸಂದರ್ಶಿಸಿತು. ಇದು ಆಗಸ್ಟ್ 12 ಮತ್ತು 13 ರಂದು ಟರ್ಕಿಯಲ್ಲಿ ಪ್ರಕಟವಾಯಿತು. ಆದರೆ ಆ ಸಂದರ್ಶನದ ಪರಿಣಾಮ ಹೆಜ್ಬುಲ್ಲವನ್ನು ಮುಸ್ಲಿಂ ಟೆರರಿಸ್ಟ್ ಎಂದು ಕರೆಯಲಾಗದಂತೆ ಅದರ ಸಾಮ್ರಾಜ್ಯಶಾಹಿ ವಿರೋಧಿ ನೆಲೆಗಟ್ಟನ್ನು ಸ್ಪಷ್ಟವಾಗಿ ಎತ್ತಿತೋರಿಸುವಂತೆ ಇತ್ತು, ಹೀಗಾಗಿ ಇಂತಹ ಒಂದು ಸಂದರ್ಶನವೇ ನಡೆದಿಲ್ಲ ಎಂಬಂತೆ ಅಲ್ಲಿನ ಕಾರ್ಪೊರೇಟ್ ಮಾಧ್ಯಮಗಳು ಪ್ರಚಾರ ಮಾಡಿದವು. ನಂತರ www.counterpunch. org. ಎಂಬ ಪರ್ಯಾಯ ಇಂಟರ್‌ನೆಟ್ ಪತ್ರಿಕೆಯೊಂದು ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಈ ಸಂದರ್ಶನವನ್ನು ದೃಢೀಕರಿಸಿ ಪ್ರಕಟಿಸಿತು. ಈ ಸಂದರ್ಶನದ ಆಯ್ದ ಭಾಗಗಳನ್ನು 'ಲಂಕೇಶ್' ಓದುಗರಿಗೆ ನೀಡಲು ನಮಗೆ ಹೆಮ್ಮೆಯೆನಿಸುತ್ತದೆ.

-ಶಿವಸುಂದರ್

ಪ್ರಶ್ನೆ: ಸಮಾಜವಾದಿ ಚಳವಳಿಗಳೊಂದಿಗೆ ಇಂದು ನಿಮ್ಮ ಸಂಬಂಧಗಳು ಹೇಗಿವೆ?

ಹಸನ್ ನಸರುಲ್ಲ: ಜಾಗತಿಕ ಚಳವಳಿಗಳಿಂದ ಸಾಕಷ್ಟು ಕಾಲ ಕಣ್ಮರೆಯಾಗಿದ್ದ ಸಮಾಜವಾದಿ ಚಳವಳಿ ಮತ್ತೊಮ್ಮೆ ನಮ್ಮ ಚಳವಳಿಗೆ ನೈತಿಕ ಬೆಂಬಲ ನೀಡಲು ಪ್ರಾರಂಭಿಸಿದೆ. ಈ ವಿಷಯದಲ್ಲಿ ಎದ್ದು ಕಾಣುವ ಉದಾಹರಣೆಯೆಂದರೆ ವೆನೆಜುಯೆಲದ ಅಧ್ಯಕ್ಷ ಹ್ಯುಗೊ ಶವೇಜರ ಬೆಂಬಲ. ಹಲವಾರು ಮುಸ್ಲಿಂ ರಾಷ್ಟ್ರಗಳು ಮಾಡದೇ ಇದ್ದ ರೀತಿಯಲ್ಲಿ ಅವರು ಇಸ್ರೇಲಿಂದ ವೆನೆಜುಯೆಲಾದ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿದ್ದಾರೆ. ಅಷ್ಟು ಮಾತ್ರವಲ್ಲದೆ ಅವರು ನಮ್ಮ ಪ್ರತಿರೋಧ ಚಳವಳಿಗೆ ತಮ್ಮ ಬೆಂಬಲವನ್ನು ತಿಳಿಸಿದ್ದಾರೆ. ಇದು ನಮಗೆ ಅಪಾರ ನೈತಿಕ ಸಾಮರ್ಥ್ಯವನ್ನು ಗಳಿಸಿಕೊಟ್ಟಿದೆ.




ಇದೇ ರೀತಿಯ ಬೆಳವಣಿಗೆಯನ್ನು ನಾವು ಟರ್ಕಿಯ ಕ್ರಾಂತಿಕಾರಿ ಚಳವಳಿಯಲ್ಲೂ ಕಾಣಬಹುದು. 1960ರ ದಶಕದಲ್ಲಿ ನಮ್ಮ ಹಲವಾರು ಟರ್ಕಿ ಸಹೋದರರು ಇಸ್ರೇಲ್ ವಿರುದ್ಧ ಹೋರಾಡಲು ಪ್ಯಾಲೆಸ್ಟೇನಿಗೆ ಹೋಗಿದ್ದರು. ಅವರಲ್ಲಿ ಒಬ್ಬರು ಇನ್ನೂ ನಮ್ಮ ಹೃದಯದಲ್ಲಿ ಹಸಿರಾಗಿದ್ದಾರೆ; ಡೆನಿಜ್ ಗೆಜ್ಮೆ..!

(ಡೆನಿಜ್ ಗೆಜ್ಮೆ(1947-1972) ಟರ್ಕಿ ದೇಶದ ಒಬ್ಬ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪರಂಪರೆಯ ಕ್ರಾಂತಿಕಾರಿ. 1960ರ ದಶಕದಲ್ಲಿ ಅವರು ಹಲವಾರು ಪ್ರಮುಖ ವಿದ್ಯಾರ್ಥಿ ಕಾರ್ಯಾಚರಣೆ ಗಳನ್ನು ನಡೆಸಿದರು. 1969ರಲ್ಲಿ ಲೆಬನಾನಿನಲ್ಲಿ ತರಬೇತಿಯನ್ನು ಪಡೆದುಕೊಂಡು ಟರ್ಕಿಗೆ ಮರಳಿ ಅಲ್ಲಿ ಎಡಪಂಥೀಯ ಹೋರಾಟಗಳನ್ನು ಸಂಘಟಿಸುವಲ್ಲಿ ನಿರತರಾಗಿದ್ದರು. ಅವರನ್ನು ಟರ್ಕಿ ಸರ್ಕಾರ 1972ರ ಮೇ 6ರಂದು ಗಲ್ಲಿಗೇರಿಸಿತು.)

ಪ್ರ: ಡೆನಿಜ್‌ಗಳು ಈಗ ನಿಮಗೆ ಎಷ್ಟು ಪ್ರಮುಖ ಎನಿಸುತ್ತದೆ?

ಹ: ಈಗ ನಮಗೆ ಹೊಸ ಹೊಸ ಡೆನಿಜ್‌ಗಳು ಬೇಕು. ಶೋಷಕರ ವಿರುದ್ಧದ ಹೋರಾಟದಲ್ಲಿ ನಮ್ಮ ಪಡೆಗಳು ಸದಾ ಹೊಸ ಡೆನಿಜ್‌ಗಳಿಗೆ ಸ್ವಾಗತ ಬಯಸುತ್ತವೆ. ಪ್ಯಾಲೆಸ್ಟೇನರ ಮತ್ತು ಲೆಬನಾನೀಯರ ಹೃದಯದಲ್ಲಿ ಡೆನಿಜ್ ಸದಾ ಹಸಿರಾಗಿರುತ್ತಾರೆ. ಇದರ ಬಗ್ಗೆ ಯಾರೂ ಅನುಮಾನ ಪಡಬೇಕಿಲ್ಲ, ಆದರೆ ದುರದೃಷ್ಟವಶಾತ್ ಡೆನಿಜ್ ನಂತರವೂ ಉಳಿದುಕೊಂಡಿರುವ ಸಮಾನ ಶತ್ರುವಿನ ವಿರುದ್ಧ ಸಮಾನ ಹೋರಾಟವಾಗಲೀ, ಭ್ರಾತೃತ್ವವಾಗಲೀ ಕಾಣುತ್ತಿಲ್ಲ. ಸಾಮ್ರಾಜ್ಯವಾದ ಮತ್ತು ಇಸ್ರೇಲಿ ಜಿಯೊನಿಸಂಗಳ ವಿರುದ್ಧ ನಾವು ಮತ್ತು ಲೆಬನಾನಿನ ಸಮಾಜವಾದಿಗಳು ಹೆಗಲಿಗೆ ಹೆಗಲಾಗಿ ಹೋರಾಡಬೇಕೆಂದು ನಾವು ಬಯಸುತ್ತೇವೆ. ಇದು ಕೇವಲ ನಮ್ಮೊಬ್ಬರ ಹೋರಾಟವಲ್ಲ, ಇದು ವಿಶ್ವದಾದ್ಯಂತ ಇರುವ ಶೋಷಿತರೆಲ್ಲರ ಹೋರಾಟ. ಒಂದನ್ನು ನೆನಪಿನಲ್ಲಿಡಿ. ಒಂದು ವೇಳೆ ಪ್ಯಾಲೇಸ್ಟೇನ್ ಮತ್ತು ಲೆಬನಾನಿನ ಜನತೆ ತಮ್ಮ ಹೋರಾಟದಲ್ಲಿ ಸೋತರೆ ಅದು ಇಡೀ ವಿಶ್ವದ ಜನತೆಯ, ಶೋಷಿತ ಜನರ ಸೋಲಾಗಿರುತ್ತದೆ. ಸಾಮ್ರಾಜ್ಯವಾದದ ವಿರುದ್ಧದ ಹೋರಾಟದಲ್ಲಿ ಕ್ರಾಂತಿಕಾರಿಗಳು ಮುಂದೆ ಬಂದು ಜವಾಬ್ದಾರಿಗಳನ್ನು ತೆಗೆದುಕೊಂಡು ಪ್ಯಾಲೆಸ್ಟೇನ್ ಮತ್ತು ಲೆಬನಾನಿನ ಜನತೆಯ ಮನಸ್ಸಿನಲ್ಲಿ ಡೆನಿಜ್‌ಗಳಾಗಬೇಕು ಎಂದು ನಾವು ಆಶಿಸುತ್ತೇವೆ.



ಶವೇಜ್ ಮತ್ತು ಕ್ಯಾಸ್ಟ್ರೋ

ಪ್ರ: ಬೈರೂತ್‌ನ ಬೀದಿಗಳಲ್ಲಿ ಚೆ, ಶವೇಜ್ ಮತ್ತು ಅಹಮದಿನೆಜಾದ್‌ರ ಭಿತ್ತಿ ಚಿತ್ರಗಳನ್ನು ಜೊತೆಜೊತೆಗೆ ನೋಡಲು ಸಾಧ್ಯವೇ? ಇದು ಹೊಸ ಧ್ರುವೀಕರಣದ ಸೂಚಕವೇ?

ಹ: ನಾವು ಲ್ಯಾಟಿನ್ ಅಮೆರಿಕಾದ ಜನತೆಗೆ ಸಲ್ಯುಟ್ ಮಾಡುತ್ತೇವೆ. ಅವರು ಅತ್ಯಂತ ವೀರೋಚಿತವಾಗಿ ಅಮೆರಿಕ ದಾಳಿಕೋರರನ್ನು ಪ್ರತಿರೋಧಿಸಿದ್ದಾರೆ. ಅವರು ನಮಗೆ ಒಂದು ದೊಡ್ಡ ನೈತಿಕ ಶಕ್ತಿಯಾಗಿದ್ದಾರೆ. ಅವರು ವಿಶ್ವದ ಶೋಷಿತ ಜನತೆಗೆ ದಾರಿ ತೋರಿಸುತ್ತಿದ್ದಾರೆ. ನೀವು ಬೇಕಾದರೆ ನಮ್ಮ ಬೀದಿಗಳಲ್ಲಿ ನಡೆದಾಡಿ ನೋಡಿ. ಆಗ ನಿಮಗೆ ಚೆ ಗೆವಾರ ಮತ್ತು ಶವೇಜ್‌ರನ್ನು ನಮ್ಮ ಜ[illegible] ಹೇಗೆ ಗೌರವಿಸುತ್ತಾರೆ ಎಂದು ಅರ್ಥವಾಗುತ್ತದೆ. ಹೆಚ್[illegible] ಕಡಿಮೆ ಪ್ರತಿ ಮನೆಯಲ್ಲೂ ನಿಮಗೆ ಚೆ ಮತ್ತು ಶವೇಜ್[illegible] ಭಾವಚಿತ್ರಗಳು ಸಿಗುತ್ತವೆ.

ನಮ್ಮ ಜೊತೆ ಸಹೋದರತೆ ಮತ್ತು ಸ್ವಾತಂತ್ರ್ಯಕ್ಕಾ[illegible] ಹೋರಾಡುವ ಸಮಾಜವಾದಿ ಗೆಳೆಯರಿಗೆ ನಾವು ಹೇಳುವ[illegible] ದಿಷ್ಟೆ. ಧರ್ಮ ಒಂದು ಅಫೀಮೆಂದು ಹೇಳುವುದಾದ[illegible] ನೀವಿಲ್ಲಿಗೆ ಬರಲೇಬೇಡಿ. ನಾವು ನಿಮ[illegible] ಆ ವಿಶ್ಲೇಷಣೆಯನ್ನು ಒಪ್ಪುವುದಿಲ್ಲ, ನೀವ[illegible] ನಮ್ಮ ನಂಬಿಕೆಗಳನ್ನು ಗೌರವಿಸುವುದಾದ[illegible] ನಾವೂ ನಿಮ್ಮ ನಂಬಿಕೆಗಳನ್ನು ಗೌರವಿಸ[illegible] ತ್ತೇವೆ. ಆಗ ಪ್ರಪಂಚದ ಯಾವ ಸಾಮ್ರಾಜ್[illegible] ವಾದವೂ ನಮ್ಮನ್ನು ಸೋಲಿಸಲು ಸಾಧ್ಯವಿಲ್ಲ.

ಪ್ರ: ಮಧ್ಯ ಪ್ರಾಚ್ಯ ಪ್ರದೇ[illegible] ಎದುರಿಸುತ್ತಿರುವ ಆತಂಕಗಳಿಗೆ ಹಿಂದಿರು[illegible] ಗುವುದಾದರೆ ಪಾಶ್ಚಿಮಾತ್ಯ ಸರ್ಕಾರಗಳ[illegible] ಡಮಾಸ್ಕಸ್ ಮತ್ತು ಟೆಹರಾನಿನಲ್ಲಿ ಆಳ್ವಿಕೆ ಬದಲಾಗಬೇಕೆಂದು[illegible] ತಮ್ಮ ಒತ್ತಡವನ್ನು ತೀವ್ರಗೊಳಿಸುತ್ತಿವೆ. ಕೆಲವರು ಲೆಬನಾನಿ[illegible] ನಂತರ ಸಿರಿಯಾ ಮೇಲೆ ದಾಳಿಯಾಗಬಹುದೆಂದ[illegible] ನಿರೀಕ್ಷಿಸುತ್ತಿದ್ದಾರೆ. ನಿಮ್ಮ ಪ್ರಕಾರ ಒಂದು ಪ್ರಾದೇಶಿ[illegible] ಯುದ್ಧ ಪ್ರಾರಂಭವಾಗ ಬಹುದೇ?

ಹ: ಸಾಮ್ರಾಜ್ಯಶಾಹಿ ಶಕ್ತಿಗಳು ಈ ಪ್ರದೇಶದಲ್ಲಿ[illegible] ತಮ್ಮ ಯೋಜನೆಗೆ ಶಾಮೀಲಾಗುವಂತಹ ಆಳ್ವಿಕೆಯನ್ನ[illegible] ಬಯಸುತ್ತವೆ. ಅವರ ಮುಂದೆ ನಾವು ಮಂಡಿ[illegible] ಯೂರಿ ನಿಲ್ಲಬೇಕೆಂದು ಅವರು ಬಯಸುತ್ತಾರೆ. ಸಿರಿಯ[illegible] ಇರಾನ್ ಮತ್ತು ಹೆಜ್ಬುಲ್ಲಾ ಅದನ್ನು ವಿರೋಧಿಸುತ್ತಿ[illegible] ಆದ್ದರಿಂದಲೇ ಅವುಗಳ ಮೇಲೆ ದಾಳಿ ಮಾಡಲ[illegible] ಯೋಜಿಸುತ್ತಿದ್ದಾರೆ.

ಸಾಮ್ರಾಜ್ಯಶಾಹಿಗಳು ಈ ಪ್ರದೇಶದಲ್ಲಿ ಮತ್ತೊಂದ[illegible] ಕೊಸೊವೊವನ್ನು ಸೃಷ್ಟಿಸಲು ಯತ್ನಿಸುತ್ತಿದ್ದಾರೆ. ಇಲ್ಲಿಯ[illegible] ಪಂಗಡಗಳ ನಡುವೆ ಕಲಹವನ್ನು ಹುಟ್ಟುಹಾಕಲು[illegible] ಯತ್ನಿಸುತ್ತಿವೆ. ಆದರೆ ನಾವು ಅವರ ಯೋಜನೆಯನ್ನ[illegible] ವಿಫಲಗೊಳಿಸಿದ್ದೇವೆ. ಇಡಿ ಲೆಬನಾನಿನ ಬೀದಿಗಳ[illegible] ಕ್ರಿಶ್ಚಿಯನ್ನರು, ಸುನ್ನಿಗಳು, ಶಿಯಾಗಳು ಒಟ್ಟಾಗಿ ಹೆಜ್ಬುಲ್ಲಾ[illegible] ಧ್ವಜವನ್ನು ಹಾರಿಸುತ್ತಿದ್ದಾರೆ. ವಿಶ್ವದಲ್ಲಿ ಅಮೆರಿಕ ಮಾ[illegible] ಏಕಧ್ರುವವಾಗಿರುವ ಕಾಲ ಕಳೆದಿದೆ. ನಾವಿದ್ದೇವೆ. ಇರಾನ್[illegible] ಸಿರಿಯಾ, ವೆನೆಜುಯೆಲ, ಕ್ಯೂಬಾ ಮತ್ತು ಉತ್ತ[illegible] ಕೊರಿಯಾಗಳಿವೆ. ಪಲೆಸ್ಟೇನ್, ಅಫ್ಘಾನಿಸ್ತಾನ ಮತ್ತ[illegible] ಇರಾಕಿನ ಹೋರಾಡುತ್ತಿರುವ ಜನತೆಯಿದ್ದಾ[illegible] ಎಲ್ಲಿಯ ತನಕ ಸಾಮ್ರಾಜ್ಯವಾದ ಮತ್[illegible] ಆಕ್ರಮಣಗಳಿರುತ್ತವೋ ಜನತೆ ಪ್ರತಿರೋ[illegible] ವನ್ನು ಮುಂದುವರೆಸುತ್ತಾರೆ. ವಿಜಯ[illegible] ನಮ್ಮದೇ ಆಗುತ್ತದೆ.

ಪ್ರ: ಹೆಜ್ಬುಲ್ಲಾವನ್ನು ಟೆಹರಾನ್[illegible] ನಿಯಂತ್ರಿಸುತ್ತದೆ ಎಂಬ ಆರೋಪವೂ ಇ[illegible] ನಿಮ್ಮ ಅಭಿಪ್ರಾಯವೇನು?

ಹ: ಇದೊಂದು ದೊಡ್ಡ ಸುಳ್[illegible] ನಮ್ಮದೊಂದು ಸ್ವತಂತ್ರ ಲೆಬನಾನೀ ಸಂಘಟ[illegible] ನಾವು ಯಾರಿಂದಲೂ ಆದೇಶಗಳನ್[illegible] ಸ್ವೀಕರಿಸುವುದಿಲ್ಲ, ಆದರೆ ಇದರರ್ಥ ನಾ[illegible] ಮೈತ್ರಿಕೂಟಗಳನ್ನು ಮಾಡಿಕೊಳ್ಳುವುದಿಲ್ಲವೆಂದಲ್ಲ, ನಾ[illegible] ಇರಾನ್ ಮತ್ತಿ ಸಿರಿಯಾ ಪರವಾಗಿದ್ದೇವೆ. ಅವರು ನಮ್[illegible] ಸಹೋದರರು. ನಾವು ಲೆಬನಾನಿನಲ್ಲಿ ಹೋರಾಡುತ್ತಿರುವ[illegible] ನಮ್ಮ ಕೊನೆ ಹನಿ ರಕ್ತವಿರುವ ತನಕ ಟೆಹರಾನ್ ಮತ್[illegible] ಡಮಸ್ಕಸ್ ಮೇಲೆ ನಡೆಯಬಹುದಾದ ಸಂಭವನೀಯ[illegible] ದಾಳಿಯನ್ನು ವಿರೋಧಿಸುತ್ತೇವೆ. ಜಾಗತಿಕ ಸಾಮ್ರಾಜ್ಯಶಾ[illegible] ಟೆರರಿಸಂನ ವಿರುದ್ಧ ಜಾಗತಿಕ ಪ್ರತಿರೋಧವನ್ನು ನಾ[illegible] ಎತ್ತಿಹಿಡಿಯುತ್ತೇವೆ.

ಪ್ರ: ಇನ್ನೇನಾದರೂ ನೀವು ಹೇಳಲು ಬಯಸುತ್ತೀರಾ[illegible]

ಹ: ಶಾಂತಿಯೆಂಬುದು ಏಕಪಕ್ಷೀಯವಾಗಿರ[illegible] ಸಾಧ್ಯವಿಲ್ಲ, ಸಾಮ್ರಾಜ್ಯವಾದವಿರುವತನಕ ಜಗತ್ತಿನಲ್ಲಿ ಶಾಶ್[illegible] ಶಾಂತಿ ನೆಲೆಗೊಳ್ಳಲು ಸಾಧ್ಯವಿಲ್ಲ, ಎಲ್ಲಿಯ ತನಕ ಇರಾಕ್[illegible] ಅಫ್ಘಾನಿಸ್ತಾನ, ಮತ್ತು ಪ್ಯಾಲೆಸ್ಟೇನ್‌ಗಳಲ್ಲಿ ಆಕ್ರಮಣಗ[illegible] ಮುಂದುವರೆದಿರುತ್ತವೋ, ಅಲ್ಲಿಯವರೆಗೆ ಈ ಯು[illegible] ಕೊನೆಗೊಳ್ಳುವುದಿಲ್ಲ.

ತನನಂ ತನನಂ



ತೇಲಿ ಬಂದ ದಾರಿ ③ ಕವಿತಾ ಲಂಕೇಶ್

"ನೆನಗ್ಯಾಕಿಲ್ಲ ಸೆಕ್ಸಿ ಡ್ರೆಸ್ಸು? ಸಿನಿಮಾ ಪೂರ್ತಿ ನಾನು ಲಂಗ, ಬ್ಲೌಸ್‌ಗಳಲ್ಲಿ ಗೌರಮ್ಮನ ತರಹಾನೇ ಇರ್ಬೇಕಾ? ಅವಳಿಗಾದ್ರೆ ಎಷ್ಟೊಂದು ಸೆಕ್ಸಿ ಡ್ರೆಸ್ ಇದೆ... ನನಗೂ ಇಲ್ಲಿ ಸೆಕ್ಸಿ ಡ್ರೆಸ್ಸು...."

ಮಗುವಿನಂತೆ ರಮ್ಯ ಹೀಗೆ ಹಠ ಮಾಡ್ತಿದ್ರೆ ನನಗೆ ನಗು ಅಂದ್ರೆ ನಗು. ಸಂಪ್ರದಾಯಸ್ಥ ಸಂಗೀತಗಾರರ ಕುಟುಂಬದ ಹುಡುಗಿಯ ಪಾತ್ರಕ್ಕೆ ಸ್ಲೀವ್‌ಲೆಸ್ ಡ್ರೆಸ್ಸು, ಲೊ-ವೆಸ್ಟ್ ಜೀನ್ಸು ಹಾಕೋಕಾಗುತ್ತಾ?


ರಂಗಭೂಮಿಯ ನಟಿ ಪಾತ್ರ ಮಾಡುತ್ತಿರುವ ರಕ್ಷಿತಾಗೆ ಝುಲಕ್ ಝುಲಕ್ ತರಲು ರಂಗು ರಂಗಿನ ಡ್ರೆಸ್ ಕೊಟ್ಟಿದ್ದೇವೆ. ಅಷ್ಟಕ್ಕೇ ಪ್ರತಿಸ್ಪರ್ಧಿ ರಮ್ಯ ತನಗೂ ಅಂತಹದ್ದೇ ಡ್ರೆಸ್ ಬೇಕು ಅಂದ್ರೆ ಏನು ಮಾಡೋದು? ಆಮೇಲೆ ನಾನು ಹೇಳಿದ್ದನ್ನು ಅರ್ಥ ಮಾಡಿಕೊಂಡ ರಮ್ಯ ಸುಮ್ಮನಾದ್ಲು ಬಿಡಿ. ಮಾದಕತೆ, ಮೋಹಕತೆ ಎನ್ನುವುದು ಸೆಕ್ಸಿ ಡ್ರೆಸ್ಸುಗಳಲ್ಲಿಲ್ಲ, ಅದು ಕಣ್ಣುಗಳಲ್ಲಿದೆ, ಭಾವನೆಗಳಲ್ಲಿದೆ. ಬಸು ಭಟ್ಟಾಚಾರ್ಯ ನಿರ್ದೇಶನದ 'ಆಸ್ಥಾ' ಚಿತ್ರದಲ್ಲಿ ಸೀರೆ ತೊಟ್ಟ ರೇಖಾ ಮಾದಕತೆಯನ್ನು ಕಣ್ಣು ಕೈಗಳ ಮೂಲಕವೇ ಹರಡಿ ಪ್ರೇಕ್ಷಕರನ್ನು ಉದ್ದೀಪನಗೊಳಿಸುತ್ತಾಳಲ್ಲ....

ಇರಲಿ, ಚಿತ್ರ ಪ್ರಾರಂಭವಾಗುತ್ತಿದ್ದುದರ ಬಗ್ಗೆ ಸೆವೆಂತ್ ಕ್ರೆಸೆಂಟ್ ಹೋಟೆಲಿನಲ್ಲಿ ಮೊದಲ ಪತ್ರಿಕಾಗೋಷ್ಠಿ. ಪತ್ರಕರ್ತರೆಲ್ಲ ಕಾಯ್ತಾ ಇದ್ದಾರೆ. ನಾನು ಅವರಿಗೆ ಕಾಯದೇ ಪತ್ರಿಕಾಗೋಷ್ಠಿ ಶುರು ಮಾಡಿಬಿಟ್ಟೆ. ವೇಳೆಗೆ ಬದ್ಧವಾಗಿರುವುದು ನಾನು ಚಿಕ್ಕಂದಿನಿಂದಲೂ ರೂಢಿಸಿಕೊಂಡು ಬಂದಿರುವ ಗುಣ. ಅದು ನನ್ನಪ್ಪನಿಂದ ಕಲಿತ ಗುಣ.

ವೇಳೆ ವಿಷಯದಲ್ಲಿ ಅಪ್ಪ ಅದೆಷ್ಟು ಸ್ಟ್ರಿಕ್ಟು ಅಂತಾ ಓದುಗರಿಗೆ ಗೊತ್ತೇ ಇದೆ. ಒಮ್ಮೆ ರವೀಂದ್ರ ಕಲಾಕ್ಷೇತ್ರದಲ್ಲಿ ಅಪ್ಪ ನಿರ್ದೇಶಿಸಿ, ಅಭಿನಯಿಸಿದ 'ಕೊಡೆಗಳು' ನಾಟಕ ಪ್ರದರ್ಶನವಿತ್ತು. ಆಗ ನಾವಿನ್ನೂ ಚಿಕ್ಕಮಕ್ಕಳು. ಅಮ್ಮ ಮೂವರನ್ನೂ ರೆಡಿ ಮಾಡಿಕೊಂಡು ಕಲಾಕ್ಷೇತ್ರ ತಲುಪುವುದಕ್ಕೆ 15 ನಿಮಿಷ ತಡವಾಗಿತ್ತು. ಅಪ್ಪ ಬಾಗಿಲು ಬಂದ್ ಮಾಡಿಸಿ ನಾಟಕ ಪ್ರದರ್ಶನ ಶುರು ಮಾಡಿಯೇ ಬಿಟ್ಟಿದ್ದರು. ಅಷ್ಟೊಂದು ಸಮಯಬದ್ಧತೆ ಅವರದ್ದು. ಅಮ್ಮನೊಂದಿಗೆ ನಾವು ಮೂವರು ಹೊರಗೆ ಕಾಯುತ್ತಾ ಇದ್ದು ಬ್ರೇಕ್ ಬಂದಾಗ ಒಳಗೆ ಹೋಗಿದ್ದೆವು.

ಪತ್ರಿಕಾಗೋಷ್ಠಿ ನಡೆಯುತ್ತಿರುವಾಗ ಭಾರತಿ ಮೇಡಂ ಬಂದರು. ಅವರ ಹಿಂದೆನೇ ರಕ್ಷಿತಾ ಬಂದಳು. ಆನಂತರ ರಮ್ಯನೂ ಹಾಜರ್. ಶ್ಯಾಮ್ ಕನ್ನಡದಲ್ಲಿ ಮಾತಾಡೋಕೆ try ಮಾಡಿದ. ಆದ್ರೆ ರಕ್ಷಿತಾ ಇಂಗ್ಲಿಷ್‌ನಲ್ಲಿ ಮಾತಾಡ್ತಾ ಅಡ್ಡಾಡುತ್ತಿದ್ದಳು. ಸದ್ಯಕ್ಕೆ ಸಂಭಾಷಣೆಯನ್ನ ಕನ್ನಡದಲ್ಲಿ ಸರಿಯಾಗಿ ಹೇಳ್ತಾರಲ್ಲ.... ಅಷ್ಟು ಸಾಕು ಬಿಡಿ!

ಅವತ್ತು ಫೋಟೋಗ್ರಾಫರ್ಸ್‌ಗೆ ಒಂದಿಷ್ಟು ಪೋಸು ಕೊಟ್ಟ ರಮ್ಯ ಮತ್ತು ರಕ್ಷಿತಾ ಆನಂತರ ಎಲ್ಲರಿಂದ ದೂರ ಸರಿದು ಮಹಾನ್ ಚೆಡ್ಡಿದೋಸ್ತ್‌ಗಳಂತೆ ಇಬ್ಬರೂ ಮಾತಾಡಿದ್ದೇ ಮಾತಾಡಿದ್ದು! "ಅರೆ, ಯಾವಾಗ ಇಷ್ಟು ಕ್ಲೋಸ್ ಆದ್ರು ಈ ಕ್ಲೋಸ್-ಅಪ್ ನಗೆಯ ಚೆಲುವೆಯರು?" ಅನ್ನೋದು ಅವತ್ತು ಅಲ್ಲಿದ್ದ ಎಲ್ಲರ ಪ್ರಶ್ನೆಯಾಗಿತ್ತು.



ರಮ್ಯ ರೂಮಲ್ಲಿ ರಕ್ಷಿತಾ

ರಾತ್ರಿ 2ರ ತನಕ 'ತನನಂ ತನನಂ'

ರಮ್ಯ, ರಕ್ಷಿತರ ಒಣಜಗಳಗಳ ಗಾಸಿಪ್ ಕೇಳಿದ್ದ ಪತ್ರಕರ್ತರಿಗೂ ಅವರಿಬ್ಬರನ್ನು ಒಟ್ಟಿಗೆ ನೋಡುವ, ಮಾತಾಡಿಸುವ ಕುತೂಹಲ, ತವಕ. ಆದರೆ ಈ ಲಲನಾಮಣಿಯರಿಬ್ಬರು ಸೀನ್‌ನಲ್ಲೇ ಇಲ್ಲ. ರಮ್ಯ ಮೈಸೂರಿಂದ ಬರ್ತಾ ಇದ್ದರೆ, ರಕ್ಷಿತಾ ಇಲ್ಲೇ ಬೆಂಗಳೂರು ಮನೆಯಿಂದ ಬರಬೇಕಿತ್ತು. ಆದರೆ ಕಾರ್ಯಕ್ರಮ ಶುರುವಾಗಬೇಕಿದ್ದ ಸಮಯಕ್ಕಿಂತ 10-15 ನಿಮಿಷವಾದ್ರೂ ಈ ಸುರಸುಂದರಿಯರ ಸುಳಿವೇ ಇಲ್ಲ, ಅವಳು ಬಂದ್ಮೇಲೆ ಇವಳು, ಇವಳು ಬಂದ್ಮೇಲೆ ಅವಳು ಎಂಬಂತೆ ಇಬ್ಬರೂ ಲೇಟ್ ಆಗಿ ಬರೋದಿಕ್ಕೆ ಪೈಪೋಟಿಗೆ ಬಿದ್ದವರಂತೆ ಆಡುತ್ತಿದ್ದರು!

ಇಬ್ಬರೂ ಸಂಜೆ ತಮ್ಮ ತಮ್ಮ ಮನೆಗೆ ಹೋದರಾ? ಇಲ್ಲೇ ಇರೋದು ಮಜಾ ನೋಡಿ!

ರಾತ್ರಿ ಊಟ ಮುಗಿಸಿದ ರಕ್ಷಿತಾ 10 ಗಂಟೆ ಸುಮಾರಿಗೆ ರಮ್ಯಳ ರೂಮಿಗೆ ಹೋಗಿದ್ದಾಳೆ....... ಹನ್ನೊಂದಾದ್ರು ಇಲ್ಲ, ಹನ್ನೆರಡಾದ್ರು ಇಲ್ಲ..... ಈ ಇಬ್ಬರು ಲಲನೆಯರು ಹರಟೆ ಹೊಡೆದಿದ್ದೇ ಹೊಡೆದಿದ್ದು! ಎಷ್ಟರವರೆಗೆ ಗೊತ್ತಾ? ರಾತ್ರಿ ಎರಡರವರೆಗೆ ಇವರ ಮಾತುಕತೆ ಸಾಗಿದೆ. ಅಂತೂ ಎರಡಕ್ಕೆ ತಮ್ಮ ಹರಟೆಗೆ ಬ್ರೇಕ್ ಕೊಟ್ಟು ಮನೆಗೆ ಹೋಗಿದ್ದಾರೆ ಈ ಆಪ್ತಮಿತ್ರರು! ಮರುದಿನ ಫೋನ್ ಮಾಡಿ ಈ ವಿಷಯವನ್ನು ಅವರೇ ಖುಷಿಯಿಂದ ಹೇಳಿದ್ರು.

ಅವತ್ತೊಂದು ದಿನಾನೇ ಎಲ್ಲಾ ಮಾತು ಮುಗಿಸಿಬಿಟ್ಟರಾ? ಅಂತಾ ಈಗ ಅನಿಸ್ತಿದೆ. ಯಾಕೆ ಅಂದ್ರೆ ಮತ್ತೆಂದೂ ಅವರಿಬ್ಬರೂ ಅಷ್ಟು ಆಪ್ತವಾಗಿ ಮಾತಾಡಿದ್ದನ್ನು ನಾನು ನೋಡಲೇ ಇಲ್ಲ, ಅವತ್ತೇ ಟೂಟೂ ಅಂದ್ರೇನೊ?

ಶೂಟಿಂಗ್ ವೇಳೆ ಈ ಇಬ್ಬರು ಹುಡುಗಿಯರನ್ನು ನಿಭಾಯಿಸೋದೆ ಒಂದು ಕೆಲಸವಾಗಿ ಬಿಟ್ಟಿತ್ತು. ನಂದಿ ಹಿಲ್ಸ್‌ನ ಭೋಗ ನಂದೀಶ್ವರ ಗುಡಿಯಲ್ಲಿ ಶೂಟಿಂಗ್ ನಡೆಯುವಾಗ high heels ಚಪ್ಪಲಿ ತೊಟ್ಟಿದ್ದ ರಮ್ಯ, ಗುಡಿಯಿಂದ 10 ಅಡಿ ದೂರ ಬರಲು ಹವಾಯ್ ಚಪ್ಪಲಿ ಬೇಕೆಂದು ಹಟ ಹಿಡಿದಳು. ಆದರೆ ನಾನು neglect ಮಾಡಿದೆ. ಕೊನೆಗೂ High heels ನಲ್ಲೇ ಬಂದ್ಲು ಆ ಚೆಲುವೆ.

ರಮ್ಯಳದ್ದು ಚಪ್ಪಲಿ ಸಮಸ್ಯೆ ಆದರೆ, ರಕ್ಷಿತಾಳದ್ದು ಬ್ಲೌಸ್ ಸಮಸ್ಯೆ. ಒಮ್ಮೆ "ಈ ಬ್ಲೌಸ್ ಸರಿ ಇಲ್ಲ, ಬೇರೆ ಬಣ್ಣದ್ದು ಬೇಕು" ಅಂತಾ ರಾಗ ಎಳೆದಿದ್ದಳು.... ಇಂತಹ ಸಣ್ಣಪುಟ್ಟ ಕಿರಿಕಿರಿ ಬಿಟ್ಟರೆ, ಇಬ್ಬರೂ ಒಳ್ಳೆ ಹುಡುಗಿಯರೇ. ರಮ್ಯ ಅಂತೂ ಪಕ್ಕಾ ಪ್ರೊಫೆಷನಲ್. ರಕ್ಷಿತಾ ಹಾಗಲ್ಲದಿದ್ದರೂ ತುಂಬಾ warm hearted.

ಹಾಡೊಂದರಲ್ಲಿ ಮುದ್ದುಮುದ್ದು ಮಕ್ಕಳೊಂದಿಗೆ ಲಂಗ, ಬ್ಲೌಸ್‌ಗಳನ್ನು ಧರಿಸಿದ್ದ ರಮ್ಯ ಮಕ್ಕಳಂತೆ ನೃತ್ಯ ಮಾಡಬೇಕಿತ್ತು, ಡ್ಯಾನ್ಸ್ ಮಾಸ್ಟರೇನೋ ಟೈಟ್ ಪ್ಯಾಂಟ್‌ಗಳಲ್ಲಿ ಆರಾಮಾಗಿ ಸ್ಟೆಪ್ಸ್ ತೋರಿಸಿಬಿಡ್ತಾರೆ. ಪಾಪ, ರಮ್ಯ ಲಂಗ ತೊಟ್ಟು ಆ ಸ್ಟೆಪ್ಸ್ ಹಾಕಬೇಕಲ್ಲ... ಅದೂ ಮಕ್ಕಳ ತರಹ.... ಆಕೆಗೆ ಏನನ್ನಿಸಿತೊ ಏನೊ? "ನಾನು MRP (Mentally Retarded Person) ತರಹ ಕಾಣ್ತೀದೀನಾ?" ಅಂತ ಕೇಳಿದಳು. ಆಗ ನಮ್ಮ ಅಸೋಸಿಯೆಟ್ ಡೈರೆಕ್ಟರ್ ಸಾವಂತ್ ಸುಮ್ಮನಿರದೆ "MRPಗಳು MRP ತರಾನೇ ಕಾಣೋದು" ಅಂದುಬಿಟ್ರು! ಮಕ್ಕಳ ತರಹಾನೇ ಓಡೋಡಿ ಬಂದ ರಮ್ಯ "ನಂಗೆ MRP ಅಂತೀರಾ?" ಅಂತಾ ಸಾವಂತ್ ಬೆನ್ನಿಗೆ ಪಟಾಪಟಾ ನಾಲ್ಕು ಬಾರಿ ಮೆತ್ತಗೆ ಗುದ್ದಿ ಮಕ್ಕಳ ತರಹ ಜೋರಾಗಿ ನಗತೊಡಗಿದಳು.

ಮೊದಮೊದಲು ಕ್ಲಾಸಿಕ್ ಸ್ಟೆಪ್ಸ್ ಹಾಕಬೇಕಿದ್ದಾಗ ರಮ್ಯಾಗೆ ಕಷ್ಟ ಆಗ್ತಿತ್ತು, ಎರಡು, ಮೂರು ಟೇಕ್‌ಗಳಲ್ಲೂ ಓಕೆ ಆಗದಿದ್ದಾಗ ಅವಮಾನವಾದಂತಾಗಿ ರೂಮ್‌ಗೆ ಓಡಿಹೋಗಿ ಬಾಗಿಲು ಹಾಕಿಕೊಂಡು ಅಲ್ಲೇ ಪ್ರಾಕ್ಟೀಸ್ ಮಾಡಿ ಹೊರಬರುತ್ತಿದ್ದಳು. ಕೊನೆಕೊನೆಗೆ ಒಂದೇ ಟೇಕ್‌ಗೆ ರಮ್ಯಾಳ ಡ್ಯಾನ್ಸ್ ಓಕೆ ಆಗತೊಡಗಿತು.

ಮೈದುಂಬಿದ ಚೆಲುವೆ ರಕ್ಷಿತಾ ಮಾತ್ರ ಡ್ಯಾನ್ಸ್‌ನಲ್ಲಿ ಪರ್‌ಫೆಕ್ಟ್... ಒಂದೇ ಟೇಕ್‌ಗೆ ಓಕೆ! ಡ್ಯಾನ್ಸ್ ಮಾಸ್ಟ್ರು ಸ್ಟೆಪ್ಸ್ ತೋರಿಸುತ್ತಾ ಇದ್ದರೆ, ರಕ್ಷಿತಾ ಆರಾಮಾಗಿ ಮೊಬೈಲಲ್ಲಿ ಮಾತಾಡ್ತಾನೇ ಸ್ಟೆಪ್ಸ್ ನೋಡಿ, ಪಟ್ ಅಂತಾ ತಾನೂ ಮಾಡೇ ಬಿಡುತ್ತಿದ್ದಳು. ಅವಳ ಒಂದೇ ಒಂದು ಪ್ರಾಬ್ಲಂ ಅಂದರೆ ಆಕೆಗೆ ಹತ್ತು ನಿಮಿಷಕ್ಕೊಮ್ಮೆ ಬರುತ್ತಿದ್ದ ಕಾಲ್‌ಗಳು!

ಅದು ಯಾರ ಕಾಲ್ ಅಂತಾ ಹೇಳೋದು ಅನಗತ್ಯ ಅಲ್ವಾ?

ಪ್ರೇಮಿ ಪ್ರೇಮ್‌ನ ಕಾಲ್ ಬಂದ್ರೆ ಹಿರಿಹಿರಿ ಹಿಗ್ಗಿ ಹೀರೇಕಾಯಿ ಆಗ್ತಿದ್ಲು ರಕ್ಷಿತಾ!

ಮೊನ್ನೆ ಉದಯ ಟಿವಿಯಲ್ಲಿ ಬಂದ 'ತನನಂ ತನನಂ' ಹಾಡಿನ ಚಿಕ್ಕ ಚಿಕ್ಕ ಬಿಟ್‌ಗಳೆಲ್ಲ ಜನರನ್ನು ಆಕರ್ಷಿಸಿಬಿಟ್ಟಿವೆ. ಅಂದ ಹಾಗೆ ಐಟಂ ಸಾಂಗ್ ಬಗ್ಗೆ ಇಂಟರೆಸ್ಟಿಂಗ್ ಮ್ಯಾಟರ್ ಇದೆ.

ಈಗ ಸದ್ಯಕ್ಕೆ ಸಾಕು. next week ಮತ್ತೆ ಭೇಟಿ ಆಗೋಣ.

ನಿರೂಪಣೆ : ಪಿ.ಕೆ.ಮಲ್ಲನಗೌಡರ್



ನಾ ಏನ ಹೇಳಲಿ..?

"ಕವಿತೆ ಗುಬ್ಬಚ್ಚಿಯಂತೆ ಹಾಡಲಾರದ,
ಬದುಕಲಾರದ ಮನುಷ್ಯ ತನ್ನದೇ ಆದ ರೀತಿಯಲ್ಲಿ
ಆಡುವ-ಮಾತಾಡುವ ಮೌನವಾಗಿರುವ ಪ್ರಯತ್ನ"
-ಪಿ.ಲಂಕೇಶ್

ಗೊತ್ತಿದೆ ನನಗೆ,
ನನ್ನ-ನಿನ್ನ ನಡುವೆ
ಸದರ ಸಲುಗೆ ಇಲ್ಲ ಅಂತ.
ದೂರ, ಬಲು ಅಂತರ
ಜಾತಿ, ಅಂತಸ್ತು..
ಅದೇನೋ ಹಾಳು ಮೂಳುಗಳೆಂಬ
ನಾನಾ ಗೋಡೆಗಳು.

ಆದರೂ ಅಂದು
ಆ ಶ್ರಾವಣದ ಮಬ್ಬು ಹಗಲಲಿ
ನಿನ್ನ ತುಟಿಗಳು
ನನ್ನ ಇದಿರುಗೊಂಡು
ತೇಲಿಬಿಟ್ಟ ಮುಗುಳುನಗೆಯ
ಬಚ್ಚಿಟ್ಟುಕೊಂಡುಬಿಟ್ಟಿದೆ ನನ್ನ
ಅಂತರಾಳ.

ಎಂದೋ ನಾ ಇಣುಕಿ
ಸರ್ಕಸ್ಸು ಮಾಡಿ
ಕಂಡ ನಿನ್ನ ಮುಖ,
ಮೌನ, ಜೊತೆಗೆ
ಚಿಟ್ಟೆಯಂತೆ ರೆಪ್ಪೆ ಬಡಿವ ಮೋಹಕ
ಕಂಗಳು
ಎಲ್ಲವು ರಾತ್ರಿಯಲ್ಲಿ ನೆನಪಾಗುತ್ತವೆ.

ಆ ಕ್ಷಣ
ನನ್ನೆಲ್ಲ ವಿಷಾದ, ಬೇಸರಗಳು ಕರಗಿ
ಒಣಮುಖದಿ ಸಂತಸ..
ಒಂಥರಾ ಕಳವಳ, ಕಸಿವಿಸಿ, ತಲ್ಲಣ..
ನಡುವೆ ಮೌನ.

ಅದೇಕೋ ಇತ್ತೀಚೆಗೆ
ತೀವ್ರವಾಗುವ ನಿನ್ನ ನೆನಪು
ಕನಸು, ಕಲ್ಪನೆಗಳೆಲ್ಲಾ ನಿನ್ನ ಸುತ್ತಾ
ಬೀಡು ಬಿಡುತ್ತಿವೆ.
ಧರೆಯಲಿ ನಾ...ನಿರದ ಸ್ಥಿತಿ.
ಹಸಿವು, ನಿದ್ರೆಗಳ ಮರೆತ ದೇಹ.
ಸರಿಹೊತ್ತು ನಿಶಾಚರಿಯಂತೆ ಅಲೆವ ಮನ
ಭಾರಿ ಭಾವುಕತೆ, ತಿರುಕತನ
ಭಾವಾಂಧತೆಯಲಿ ತೋಯ್ದು
ಶಬ್ದಗಳೆಲ್ಲ ಅಡಗಿ ನಿಶ್ಶಬ್ದ
ಅಲುಗದ ನಾಲಿಗೆ
ನಿನ್ನ ಧ್ಯಾನ ಹೊತ್ತ ಚಿತ್ತ.
ಮೌನದ ಹುತ್ತದೊಳಗೆ ದಿನ
ಬೆಳೆಯುತಿರುವ
ವಾಲ್ಮೀಕಿ ಸಂತಾನ
ಇರುಳಲಿ
ಗರಿಕೆ ಚಿಗುರೊಡೆವಂತೆ ಕವಿತೆ.
ನರ-ನರವು ಬಿದಿರ ಕೊಳಲು
ಒಡಲೆಲ್ಲ ನಿನ್ನೆಸರ ನಾದ..

ಅದೇಕೋ
ಸಂಜೆಯ ಹಕ್ಕಿ, ಗಿರಿಗಳ ಮೌನದ ನಡುವೆ
ನಾ ಸಣ್ಣ ಇರುವೆಯಂತೆ ನಡೆಯುತ್ತಿರುವೆ
ಮನ ಶಿಲುಬೆ ಹೊತ್ತು
ನೋವನ್ನುಂಡು ನಕ್ಕ ಯೇಸುವಿನಂತೆ.
ನಿನ್ನ ಅಣತಿಯಿಲ್ಲದೆ
ನನ್ನೊಳಗೊಂದು ಜಗದ ಸೃಷ್ಟಿ, ಕವಿತೆ,
ಕಲ್ಪನೆ.
ನಾ ಕತ್ತಲಲ್ಲಿದ್ದರೂ ಕನಸು ಮೇಲೆರಗುತ್ತವೆ.

ನಿನ್ನ ಹಿತ್ತಲ ಮೆಳೆಗಳಲಿ
ನಾ ಮೌನವಹಿಸಿ ಕುಂತ ಹಕ್ಕಿ
ಅದೇಕೋ ಗೊತ್ತಿಲ್ಲ, ಈ ತರ..
ನೋವು... ಸಾವು....

ಇದ್ಯಾವುದನ್ನೂ ಲೆಕ್ಕಿಸದೆ ಹುಟ್ಟುವ
ಕವಿತೆಗೆ
ನಾ ಏನ ಹೇಳಲಿ...?

-ಪ್ರಕಾಶ ಕುರಿಘಾರಂ

ಈ ಪ್ರಪಂಚವು ಒರಟು ಗಾಳಿಯದ್ದು. ಚೆಲುವಿನ ಗಾಯನವು ಅದನ್ನು ಪಳಗಿಸಿಟ್ಟಿದೆ

ಹೆಂಡತಿ ಇದ್ದರೆ ಹೆಂಗಸು ಇದ್ದ ಮಜಾ ಸಿಗುತ್ತಾ?

'ಸ'ದನ' ಸಮಿತಿ

ಸದನ ಸಮಿತಿ
ಆಗಿರಬಹುದೆ
ಸ
ದನ ಸಮಿತಿ?
ಎಂದ ಪ್ರಾಸವೀರ ಕವಿ.

ಈಗ ಯಾಕೆ ಈ ವಿಷಯ ಬಂತು ಅಂದರೆ, ಸಭೆ ಅನ್ನೋ ನೆಪದಲ್ಲಿ ಶಾಸಕ ಮಹಾಶಯರು ರಾಜಧಾನಿಗೆ ಚಿತ್ತೈಸಲಿ, ಟಿಎ ಡಿಎ ಎಂಬಂತಹವುಗಳಿಂದ ತಮ್ಮ ಜೇಬನ್ನು ತುಂಬಿಕೊಳ್ಳಲಿ ಎಂಬ ಘನವಾದ ಉದ್ದೇಶದಿಂದ 'ಸದನ ಸಮಿತಿ' ಅನ್ನೋದನ್ನ ರಚಿಸಲಾಗುತ್ತದೆ. ಮತದಾರರ ದೃಷ್ಟಿಯಿಂದ ಪಾರಾಗಲೂ ಇದು ಸಹಾಯವಾಗುತ್ತದೆ ಅನ್ನಿ. ಇಂತಹ ಸಮಿತಿಯ ಸನ್ಮಾನ್ಯ ಸದಸ್ಯರು ತಮ್ಮ ವಿಷಯದ ಅಧ್ಯಯನಕ್ಕೆ ಅನ್ನೋ ನೆಪದಲ್ಲಿ ವರ್ಷಕ್ಕೊಮ್ಮೆ ವಿವಿಧ ರಾಜ್ಯಗಳಿಗೆ ಹೋಗಿ ಮಜಾ ಉಡಾಯಿಸಿ ಬರೋದು ಲಾಗಾಯ್ತಿನಿಂದಲೂ ನಡೆದು ಬಂದ ಪದ್ಧತಿ. ಹೆಂಡ-ಖಂಡಗಳಿಗೇನು ಎಲ್ಲಿಗೋದರೂ ಸಿಗುತ್ತೆ. ಇಷ್ಟರಿಂದಲೇ ಮಜಾ ಇರುತ್ತಾ, ಹೆಣ್ಣು ಅಂತ ಒಂದು ಪ್ರಾಣಿ ಜೊತೆಯಲ್ಲಿದ್ದಂತೆ ಅದರ ಕಥೇನೇ ಬೇರೆ ಬಿಡಿ. ಇವರು ಹೋದ ಕಡೆ ಅವು ಸಿಗಲ್ಲ ಅಂತ ಅಲ್ಲ, ಹಾಳಾದ್ದು ಹುಡುಕಬೇಕು, ಅರೇಂಜ್ ಮಾಡಿಕೋಬೇಕು. ಇದಕ್ಕೆಲ್ಲ ಟೈಂ ವೇಸ್ಟಾಗುತ್ತೆ. ಸಿಕ್ಕಿದರೂ ಯಾವ ರೋಗ ಮುತ್ತಿಕೊಂಡಿರುತ್ತೋ ಅನ್ನೋ ಭಯ. ಈ ಮಾನಸಿಕ ತೊಳಲಾಟದಲ್ಲಿ ಥ್ರಿಲ್ಲೇ ಇರಲ್ಲ. ಅದಕ್ಕೆ ಗುರುತು ಪರಿಚಯ ಇರೋ ಹೆಣ್ಣಾದರೆ.... ಛೇ ಅದರ ಮಾತ್ಯಾಕೆ ಬಿಡಿ. ಕಾನೂನು ಮಾಡಿದವರಿಗೆ ಈ ಅವಶ್ಯಕತೆಯ ಅರಿವು ಇರಲ್ವಾ, ಶಾಸಕರ ಜೊತೆ ಅವರ ಪತ್ನಿಯರೂ ಹೋಗುವ ಸದವಕಾಶ ಕಲ್ಪಿಸಲಾಗಿದೆ. ಶಾಸಕಿಯರಾದರೆ ಅವರ ಪತಿ ದೇವರನ್ನು ಸಂಗಡ ಕರೆದೊಯ್ಯಬಹುದು. ನಮ್ಮ ಶಾಸಕಿಯರಲ್ಲಿ ಬಹುಪಾಲು ವಿಧವೆಯರೇ ಇರುವುದರಿಂದ ಕಾನೂನಿನಲ್ಲಿ ಏನು ಅವಕಾಶ ಕಲ್ಪಿಸಲಾಗಿದೆಯೋ ತಿಳಿಯದು.

ಅದು ಅಂತಿರಲಿ. ಟೂರು ಅಂತ ಹೋದ ಮೇಲೆ, ಹೆಣ್ಣು ಅಂತ ಒಂದು ಜೊತೆಗಿದ್ದ ಮೇಲೆ ಅದು ಹೆಂಡತಿನೇ ಆಗಿದ್ದರೆ 'ಸುಕಾ ಇಲ್ಲ ಬುಡ್ರಿ' ಅನ್ನೋದು ಕೆಲವು ರಸಿಕ ಶಾಸಕರ ಅಂತರಾಳದ ನೋವು. ಅದೂ ನಿಜವೆ. ಮನೆಯಲ್ಲಿ ದಿನಾ ನಡಿಯೋ ನಾಟಕವೇ ಅಲ್ಲಿ ಪುನರಾರ್ತನೆ ಆಗುತ್ತೆ. ರಂಗಭೂಮಿ ಮಾತ್ರ ಬದಲಾವಣೆ. ಅದೇ ಪಾತ್ರಧಾರಿಗಳು!

ತಮ್ಮ ಪ್ರವಾಸದ ಸಂಪೂರ್ಣ ಪ್ರಯೋಜನ ಪಡೆಯಲೇಬೇಕು ಅನ್ನುವ ದೃಷ್ಟಿಕೋನದವರು ಹೆಂಡತಿ ಬಿಟ್ಟು ಹೆಣ್ಣನ್ನು ಜೊತೆಯಲ್ಲಿ ಕರೆದೊಯ್ಯುವುದು ಅನೂಚಾನವಾಗಿ ನಡೆದು ಬಂದಿರೋ ಪದ್ಧತಿ. ಈ ರೂಢಿಗತ ಸಂಪ್ರದಾಯದ ಸದ್ಬಳಕೆಯನ್ನು ಈ ವರ್ಷವೂ ಕೆಲವು ಶಾಸಕರು ಮಾಡಿಕೊಂಡರು. ಅದಕ್ಕೇ ಈ ಪತ್ರಿಕೆಯವರು 'ಮಹಿಳೆ ಜೊತೆ ಶಾಸಕರ ಮೋಜು', 'ಅಧ್ವಾನವಾದ ಶಾಸಕರ ಅಧ್ಯಯನ ಪ್ರವಾಸ' ಅಂತೆಲ್ಲ ಬರೆಯೋದು ನ್ಯಾಯವೇನ್ರಿ? ಇವರಿಗೆ ಇಂತಹ ಅವಕಾಶ ಸಿಕ್ಕಿದರೆ ಇವರೇನು ಮಾಡ್ತಾರ್ರೀ? ಗಂಧದ ಕಡ್ಡಿ ಹಚ್ಚಿ ಪೂಜೆ ಮಾಡ್ತಾರಾ?

ಮದ ಏರಿದೆಯಾ?



'ಇವೆರಡಕೂ ಕನೆಕ್ಸನ್ ಇದ್ದಾತಾ ಸಾ' ಎಂದು ಕೇಳಿದ ಕ್ಯಾತ, ಪತ್ರಿಕೆ ನೋಡುತ್ತಾ.

'ಯಾವೆರಡಕ್ಕೋ' ಕೇಳಿದೆ.

'ನೋಡಿ ಸಾ, ಇವ್ಕೆ' ಎನ್ನುತ್ತಾ ಪತ್ರಿಕೆಯ ಮೇಲೆ ಬೆರಳು ಆಡಿಸಿದ. ಬೆಳಗಿನ ದಿನಪತ್ರಿಕೆಯನ್ನು ಅವನಿಂದ ತೆಗೆದುಕೊಂಡು ನೋಡಿದೆ. ಅವನು ತೋರಿಸಿದ ಎರಡು ಸುದ್ದಿಗಳನ್ನು ಓದಿದೆ. ಅದರ ಸಾರಾಂಶ ಇದು:

ಮೊದಲನೆ ಸುದ್ದಿ ಏನು ಅಂದರೆ, ಸಕ್ರೆಬೈಲು ಆನೆಬಿಡಾರದ ಬಳಿ ಒಂದು ಮದ ಏರಿದ ಗಂಡು ಆನೆ ದಾರೀಲಿ ಹೋಗುತ್ತಿದ್ದ ಟ್ರಾಕ್ಸ್ ಮೇಲೆ ದಾಳಿ ಮಾಡಿ ಅದನ್ನ ಹಳ್ಳಕ್ಕೆ ಬಿಸಾಡಿತಂತೆ. ಟ್ರಾಕ್ಸ್‌ನಲ್ಲಿದ್ದ ಎಲ್ಲರೂ ಆಶ್ಚರ್ಯಕಾರಕ ರೀತೀಲಿ ಪ್ರಾಣಾಪಾಯದಿಂದ ದೂರ ಆದರಂತೆ.

ಇನ್ನು ಎರಡನೆ ಸುದ್ದಿ: ಮೊದಲ ಮೂರು ತಿಂಗಳು ಹೆದ್ದಾರಿಯಲ್ಲೇ ಸುಗಮವಾಗಿ ದಾರಿ ಸವೆಸುತ್ತಿದ್ದ, ಹೀಗೇ ನೆಡೀತಿದ್ದರೆ ಅಭಿವೃದ್ಧಿ ಕಂಡರೂ ಕಾಣಬಹುದು ಎಂಬ ಆಸೆ ಮೂಡಿಸಿದ್ದ ಆಡಳಿತ ಯಂತ್ರವನ್ನು ಮುಖ್ಯಮಂತ್ರಿಯವರ ಸಹೋದರರು, ಅಲ್ಲಲ್ಲೆ ಕೈ ತೋರಿಸಿ, ಹಳ್ಳಕೊಳ್ಳಗಳಲ್ಲಿ ಓಡಿಸುತ್ತಿದ್ದಾರೆ ಎಂಬುದಾಗಿ ಹಲವು ಶಾಸಕರು ಬಂಡಾಯವೆದ್ದಿದ್ದರೆಂಬುದು.

ಕ್ಯಾತನ ಸಮಸ್ಯೆ ಏನು ಅಂದರೆ: ಮದ ಏರಿದ ಆನೆಗೆ ಬುದ್ಧಿ ಸ್ಥಿಮಿತದಲ್ಲಿ ಇರೋಲ್ಲ, ತಾನು ಏನು ಮಾಡುತ್ತಿದ್ದೀನಿ ಅನ್ನೋದೇ ಗೊತ್ತಿರಲ್ಲ, ಮದ ಇಳಿದ ಮೇಲೆ ತಾನೇನು ಮಾಡಲೇ ಇಲ್ಲ ಅನ್ನೋ ರೀತೀಲಿ, ಎಲ್ಲ ಆನೆಗಳ ತರಹ ಸಹಜವಾಗೇ ವರ್ತಿಸುತ್ತವೆ. ಹಾಗೇನೇ ಮುಖ್ಯಮಂತ್ರಿ ಸಹೋದರರಿಗೆ ಅಧಿಕಾರದ ಮದ ತಲೆಗೆ ಏರಿ ಬುದ್ಧಿ ಸ್ಥಿಮಿತ ಕಳೆದುಕೊಂಡು ಆಡಳಿತದಲ್ಲಿ ಯದ್ವಾತದ್ವಾ ಹಸ್ತಕ್ಷೇಪ ಮಾಡುತ್ತಿದ್ದಾರಾ ಎನ್ನುವುದು.

ಈ ಮಾತಿನಲ್ಲೂ ಸತ್ಯ ಇರಬಹುದಾ!

ಹಾಸನದ 'ಮಾದರಿ'!

ದೇಶಕ್ಕೇ ಪ್ರಧಾನಿ ಕೊಟ್ಟ ಜಿಲ್ಲೆ ಹಾಸನ.

ಇದು ಒಂದು ಮಾದರಿ.

ಇನ್ನೂ ತರಹಾವರಿ ಮಾದರಿಗಳಿಗೆ ಜನ್ಮಸ್ಥಳ!

ಅದೆಷ್ಟೋ ಖಾತೆಗಳನ್ನು, ಹಲವಾರು ಜಿಲ್ಲೆಗಳ ಉಸ್ತುವಾರಿಯನ್ನು, ಯಾವು ಯಾವುದೇ ನಿಗಮ ಮಂಡಳಿಗಳ ಅಧ್ಯಕ್ಷತೆಯನ್ನು ನಿಭಾಯಿಸಲು ಎಂತಹ ಮೇಧಾವಿತನ ಇರಬೇಕು! ಇಂತಹ ಅಪ್ರತಿಮ ಚತುರ ಹುಟ್ಟಿರುವುದು ಈ ಜಿಲ್ಲೆಯಲ್ಲಿ!

ಆ ಮನೆತನ ದೇಶಕ್ಕೇ ಮಾದರಿ!

ಈ ದರ ಗಮನಿಸಿ.

ಸಾದಾ ಪೆನ್ಸಿಲ್ ಒಂದಕ್ಕೆ 24 ರೂಪಾಯಿ!

ಮೆಂಡರ್ ಒಂದಕ್ಕೆ 60 ರೂಪಾಯಿ!

ರಬ್ಬರ್ ಒಂದಕ್ಕೆ 40 ರೂಪಾಯಿ!

ಹೀಗೇ ಮುಂದುವರಿಯುತ್ತೆ,

ಈ ಅತಿ ಬೆಲೆಯ ಸಾಮಗ್ರಿ ಸರಬರಾಜಾಗಿರುವುದು ಜಿಲ್ಲೆಯ 'ಮಾದರಿ' ಶಾಲೆಗೆ, ಕುವೆಂಪು ಶತಮಾನೋತ್ಸವದ ಅಂಗವಾಗಿ! ಸರಬರಾಜು ಮಾಡಿದ ಸಂಸ್ಥೆ ಅಸ್ತಿತ್ವದಲ್ಲೇ ಇಲ್ಲ!

ಈ 'ಪವಾಡ ಮಾದರಿ' ಕೊಡುಗೆ ಈ ಜಿಲ್ಲೆಯದ್ದು!

ಜಿಲ್ಲೆಯಲ್ಲಿ ಇರಬಹುದಾದ ಇಂತಹ ಹಲವಾರು ಮಾದರಿಗಳನ್ನು ಇಡೀ ರಾಜ್ಯದಲ್ಲಿ ಜಾರಿಗೆ ತಂದು 'ಮಾದರಿ' ಹಾಸನದ ನಮೂನೆಯಲ್ಲೇ 'ಮಾದರಿ' ಕರ್ನಾಟಕ ಮಾಡುವ ಜವಾಬ್ದಾರಿಯನ್ನು 'ಮಾದರಿ' ಮನೆತನಕ್ಕೆ ನೀಡಲು ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನಿಸಬಹುದಾಗಿದೆ...

ಆ.... ಏನಂದ್ರೀ ಕೇಳುಸ್ತಾ ಇಲ್ಲ.... ನೀವೇನ್ರಿ, ಹೊಸದಾಗಿ ಹೇಳೋದು, ಇದನ್ನ ಮುಖ್ಯಮಂತ್ರಿಗಳು ಆಗಲೇ ಜಾರಿಗೆ ತಂದಿಲ್ವಾ ಅಂದಿರಾ.....

ಬಸವರಾಜ ದೇವರ ರಗಳೆ!

ಅಬ್ಬಾ ಈಗ ಮನಸ್ಸಿಗೆ ನಿರಾಳ ಆಯಿತು!

ಮತ್ತೇನ್ರಿ, ಕಾಂಜಿಪಿಂಜಿಗಳೆಲ್ಲ ಎರಡೆರಡು ಮಠ ಇಟ್ಟುಕೊಂಡಿದಾವೆ. ಈ ಕುರುಬರಿಗೆ ಮಾತ್ರ ಒಂದೇ ಮಠ ಸಾಕಾ?

ಬಸವರಾಜ ದೇವರು ರಗಳೆ ಮಾಡಿದ್ದು ಸರಿ ಆಯಿತು!

ಯಾರ್ರೀ ಆ ಕನಕದಾಸ? ವೈಷ್ಣವ ಪಂಥದೋನು!!

ಕುರುಬರ ಮೂಲ ದೇವರು ಯಾವುದು? ಆ ಸ್ತ್ರೀಲೋಲ ಕೃಷ್ಣನಾ? ರೇವಣಸಿದ್ದೇಶ್ವರ! ಅಂದರೆ ಕುರುಬರು ಶೈವಪಂಥೀಯರು! ಅಂದಮೇಲೆ ವೈಷ್ಣವ ಪಂಥೀಯರಿಗೆ ಒಂದು ಮಠ, ಶೈವ ಪಂಥೀಯರಿಗೆ ಒಂದು ಮಠ, ಒಟ್ಟು ಎರಡು ಮಠ ಇರಲೇಬೇಕಲ್ಲ. ಅಂತೂ ಇಂತೂ ಎರಡು ಮಠ ಆದವಲ್ಲ ಅನ್ನೋದೇ ಸಮಾಧಾನ...

ಅಂದಹಾಗೆ ಕಾಗಿನೆಲೆ ಪೀಠದ ಸ್ವಾಮಿ ಹೆಸರೇನು?

ನಿರಂಜನಾನಂದಪುರಿ ಸ್ವಾಮಿ!

ಈ ಮಠಾಧಿಪತಿಗಳು ಯಾಕೆ ಹೀಗೆ ಉದ್ದಾನೆ ನಾಲಿಗೆಗೆ ತೊಂದರೆ ಕೊಡೋ ಹೆಸರುಗಳನ್ನು ಇಟ್ಟುಕೊಳ್ತಾರೆ?

-ಎಚ್.ಎಲ್. ಕೇಶವಮೂರ್ತಿ

ಚೆನ್ನಿಗೆ ಅರ್ಥಪೂರ್ಣ ವಿದಾಯ

ಆಗಸ್ಟ್ 9ರ ಸಂಚಿಕೆ ಅದ್ಭುತವಾಗಿತ್ತು, 'ಸಿದ್ಧರಾಮಯ್ಯನವರು ಮುತ್ಸದ್ದಿಯಂತೆ ಚಿಂತಿಸುವಂತಾಗಲಿ' ಎಂಬ ಶೀರ್ಷಿಕೆ ಅರ್ಥಗರ್ಭಿತವಾಗಿತ್ತು. ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಅವರು ಈ ಭ್ರಷ್ಟರಿಂದ ಕರ್ನಾಟಕವನ್ನು ಉಳಿಸುವಂತೆ ಕೆಲಸ ಮಾಡಬೇಕಿದೆ.

ನಿಮ್ಮ ಪತ್ರಿಕೆಯನ್ನು ಓದುತ್ತಿರುವಾಗ ತುಂಬಾ ಸಂತೋಷವಾಗುತ್ತದೆ. ನಿಮ್ಮ ಜನಪರ ಕಾಳಜಿ, ಸಾಮಾಜಿಕ ಕಳಕಳಿಗೆ ಹ್ಯಾಟ್ಸ್ ಆಫ್.

-ಡಿ.ಎಲ್. ನಾಗರಾಜ್, ಹರುನಹಳ್ಳಿ

ಆಗಸ್ಟ್ 23ರ ಲಂಕೇಶ್‌ನಲ್ಲಿ 'ಅಪ್ಪನೊಂದಿಗೆ ನಕ್ಷತ್ರವಾದ ಚೆನ್ನಿ' ಎಂಬ ಗೌರಿ ಲಂಕೇಶರ 'ಕಂಡಹಾಗೆ' ತುಂಬಾ ಚೆನ್ನಾಗಿತ್ತು. ಮೇಷ್ಟ್ರೊಂದಿಗಿನ ಚೆನ್ನಿಯ ಸಂಭ್ರಮದ ಕ್ಷಣಗಳನ್ನು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ. ಪ್ರಾಣಿ-ಪಕ್ಷಿಗಳು ಮೂಖರಾಗಿದ್ದರೂ ಸಹ ಮಾನವನೊಂದಿಗೆ ಅವುಗಳ ಅವಿನಾಭಾವ ಸಂಬಂಧಕ್ಕೆ ಎಲ್ಲೆ ಇಲ್ಲ, ಅವುಗಳೊಟ್ಟಿಗೆ ಸ್ವಲ್ಪ ಹೊತ್ತು ಕಳೆದರೆ ಸಾಕು, ಆ ದಿನದ ಆಯಾಸವೆಲ್ಲ ಮಾಯವಾಗುತ್ತವೆ. ಇದು ಅನುಭವ ಇರುವವರಿಗೆ ಮಾತ್ರ ಗೊತ್ತು.

ನಮ್ಮ ಮನೆಯಲ್ಲೂ ಸಹ ಅಪ್ಪು ಹೆಸರಿನ ನಾಯಿಯೊಂದಿದೆ. ಅದರ ಜೊತೆ ಸ್ವಲ್ಪ ಸಮಯ ಕಳೆದರೆ ಮನಸ್ಸಿಗೆ ಆಗಿರುವ ಬೇಜಾರೆಲ್ಲ ಮಾಯ!

ಕೆ.ವಿ. ಶಿವಕುಮಾರ್, ಕಾಳೀಹುಂಡಿ



'ಗೋಲ್‌ಮಾಲ್ ಗೌಡ' ಎಂಬ ಮಾಲಿಕೆಯ ಮೂಲಕ ನೀವುಗಳು ಸರಕಾರದ ವಿರುದ್ಧ ಹೋರಾಟ ಮಾಡುತ್ತಾ ಸಾಗುತ್ತಿರುವುದು ಶ್ಲಾಘನೀಯ. ಜನತೆ ಈ ರಾಜಕಾರಣಿಗಳ ಅಬ್ಬರ ನೋಡಿ ಸಾಕಾಗಿದ್ದಾರೆ. ಇವರೆಲ್ಲರ ತಿನ್ನಾಟ, ತಿಕ್ಕಾಟ ನೋಡಿ ಬೇಸರಪಟ್ಟುಕೊಂಡಿದ್ದಾರೆ. 'ನಾನೂ ಕಳ್ಳ, ನೀನೂ ಕಳ್ಳ, ಆದರೆ ಜನರಿಗೆ ಇದು ಗೊತ್ತಾಗಬಾರದಷ್ಟೇ' ಎಂಬ ತಂತ್ರ ಇವರೆಲ್ಲರದ್ದಾಗಿದೆ.



ಅದರಲ್ಲೂ ದೇವೇಗೌಡರ ಹೆಣ್ಣು ಮಕ್ಕಳು, ಸೊಸೆಯಂದಿರು ಶಾಪಿಂಗ್ ಮಾಡಿದಂತೆ ಭೂಮಿ ಖರೀದಿಸುತ್ತಿದ್ದಾರೆಂದರೆ ಇವರು ಇನ್ನೆಷ್ಟು ಖದೀಮಮಕ್ಕಳಾಗಿರಬೇಡ......?

ಮುತ್ತಣ್ಣಪೂಜಾರ್,
ಕಡಲಬಾಳು

ಹೊಗಾ ತೇಗಿ

ಈ ವಾರದ ಸಂಚಿಕೆಯಲ್ಲಿ ಸುನೀಲ್ ಹೆಗ್ಗರವಳ್ಳಿಯ 'ಕ್ರೈಂ ಅಂಡ್ ಡೈರಿ' ಎಂಬ ಬಳಿದಾಳಿ ಈಶ ಅವರ ವರದಿ ಓದಿದೆ. ಪೋರ್‌ಟ್ವೆಂಟಿ ಪತ್ರಕರ್ತ ಸುನೀಲ್ ಹೆಗ್ಗರವಳ್ಳಿ ಎಂಬ ಕಿಡಿಗೇಡಿ, ತಿಳಿಗೇಡಿಯ ಬೂಟಾಟಿಕೆಗಳನ್ನು ಓದುತ್ತಿದ್ದರೆ ಒಂದು ರೀತಿ ನಾಚಿಕೆ ಎನಿಸುತ್ತಿದೆ. 'ಕ್ರೈಂ ಡೈರಿ' ಎಂಬ ಬಂಡಲ್ ಸೀರಿಯಲ್ ವರದಿಗಾರನಾಗಿ ಮಾಡಬಾರದ ಕೆಲಸಕ್ಕೆ ಕೈ ಹಾಕಿ ಹೀನಾಯವಾಗಿ ಬದುಕುತ್ತಿರುವ ಇಂಥ ಊಸರವಳ್ಳಿಯ ಕುತಂತ್ರಗಳನ್ನು ಬಯಲಿಗೆಳೆದ ಪತ್ರಿಕೆಗೆ ಧನ್ಯವಾದಗಳು.

-ಸಿಕಂದರ ತಳಮುಸುರಿ, ಬಾದಾಮಿ, ಬಾಗಲಕೋಟೆ

ಆಗಸ್ಟ್ 23ರ ಸಂಚಿಕೆಯಲ್ಲಿ ಚೆನ್ನಿಯ ಬಗ್ಗೆ ಬರೆದದ್ದು ಓದಿ ದುಃಖವಾಯಿತು. ಆದರೆ ಚೆನ್ನಿ ಬದುಕಿದ್ದಷ್ಟು ಕಾಲವಾದರೂ ನಮ್ಮ ಪ್ರೀತಿಯ ಲಂಕೇಶರು ಬದುಕಬೇಕಿತ್ತು, ಲಂಕೇಶರ ಅತ್ಯಾಪ್ತವಾಗಿದ್ದ ಹಾಗೂ ಅವರ ಸಂಪೂರ್ಣ ದಿನಚರಿಯನ್ನು ಬಲ್ಲ, ಮಾತಿಲ್ಲದೇ ಮನಸ್ಸಿನಲ್ಲಿಟ್ಟುಕೊಂಡ ಚೆನ್ನಿ ಮೇಷ್ಟ್ರ ನೆನಪಿನಲ್ಲೇ ಬದುಕಿ ಸತ್ತದ್ದು ತುಂಬ ಸೋಜಿಗ.

ಬಿ.ಎಸ್. ಇಮ್ಮಾನುವೇಲ, ಮಸರಕಲ,
ರಾಯಚೂರು


ಜಾನಪದ ಜಂಗಮನಿಗೊಂದು ಜಾಗ ನೀಡದ ಜನ!

ನಟವರ ಗಂಗಾಧರ ಖ್ಯಾತಿಯ ಕರೀಂ ಖಾನ್ ವಿಧಿಯಾಟದಂತೆ ಜಗದಾಟ ಮುಗಿಸಿದ್ದಾರೆ. ಅವರ ಬದುಕಿನ ಪಾತ್ರ ಕನ್ನಡ ಜಾನಪದ ಸಾಹಿತ್ಯ ಲೋಕದ ಮೈಲಿಗಲ್ಲಾಗಿ ಮುಂದಿನ ತಲೆಮಾರಿಗೂ ಮಾದರಿಯಾಗಿದೆ (ಆಗಸ್ಟ್ 9ರ ಸಂಚಿಕೆ).

ಸಂಬಂಧಿಕರಿಂದ ದೂರಾಗಿ, ಸಾಹಿತ್ಯ ಕರ್ಮದಲ್ಲಿ ನಿಷ್ಠೆ ತೋರಿದ ಈ ಕರೀಮಜ್ಜನಿಗೆ ವೃದ್ಧಾಪ್ಯದಲ್ಲಾದರೂ ವಿಶ್ರಾಂತಿ ಪಡೆಯಲು ಒಂದು ನೆಲೆ ಒದಗಿಸಿ ಎಂದು ಮಾಧ್ಯಮದವರು, ಸಾಹಿತ್ಯ ಮಿತ್ರರು ನಮ್ಮನ್ನಾಳುವ ಪ್ರಭುಗಳಿಗೆ ನೂರಾರು ಮನವಿ ಮಾಡಿದರೂ, ಅವರಿಗೊಂದು ನೆಲೆ ನೀಡದಿದ್ದದ್ದು ನಮಗೆ ನಾವೇ ಮಾಡಿಕೊಂಡ ಅವಮಾನ.

ಅದೇನೆ ಇರಲಿ, ಈ ಕನ್ನಡದ ಸಾಧಕನಿಗೆ ಕನ್ನಡದ ನೆಲದಲ್ಲಿ ಅಂತಿಮ ಸಂಸ್ಕಾರಕ್ಕೊಂದು ನೆಲೆಯಾದರೂ ಸಿಕ್ಕಿತಲ್ಲ ಎಂದಷ್ಟೇ ನಾವು ಸಮಾಧಾನ ಪಟ್ಟುಕೊಳ್ಳಬೇಕಿದೆ. ಆಳುವ ಪ್ರಭುಗಳಿಗೆ ನಾಚಿಕೆಯಾಗಬೇಕು! (ನಾಚಿಕೆ ಇದ್ದರೆ ತಾನೆ ಆಗಲು?)


ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದ ಬಿ. ಚಂದ್ರೇಗೌಡರು, ಜಫರುಲ್ಲಾ ಖಾನ್‌ರ ಕನ್ನಡ ಅಭಿಮಾನದ ವಿಷಯವನ್ನ ಕಟ್ಟೆಪುರಾಣದಲ್ಲಿ ಸ್ವಾರಸ್ಯಕರವಾಗಿ ಬರೆದಿರುವುದು ಸಂತಸ ಹಾಗೂ ಅಚ್ಚರಿ ತಂದಿತು.



'ಥೂತ್ತೇರಿ' ಅಂಕಣದಲ್ಲೂ ಸಮ್ಮೇಳನದ ಬಗ್ಗೆ ಮೂಡಿ ಬಂದ ವ್ಯಂಗ್ಯ ಬರವಣಿಗೆ ಖುಷಿ ತಂದಿತು.

ಅನಾರ್ಕಲಿಸಲೀಂಚಿಣ್ಯ,
ಶ್ರೀರಂಗಪಟ್ಟಣ.

ನನ್ನ ಜೀವನದಲ್ಲಿ ಜಾಳಾದ ನಿಶ್ಯಬ್ದ ಪ್ರದೇಶಗಳಿವೆ



ವೆಂಬೂಟಿ ಶ್ರೀ ಸತ್ಯಂರವರ ಬಳಿ ಡ್ಯಾನ್ಸ್ ಕಲಿಯಲು ಸೇರಿಕೊಂಡಾಗ ಅಲ್ಲಿ ಮಂಜು ಭಾರ್ಗವಿ ಮೇಡಂ ಸೀನಿಯರ್ ವಿದ್ಯಾರ್ಥಿನಿಯಾಗಿ ಪಾಠ ಕಲಿಯುತ್ತಿದ್ದರು. ಅದೇ ಮೇಷ್ಟ್ರ ಬಳಿ ರಮ್ಯಕೃಷ್ಣ ಸಹ ಡ್ಯಾನ್ಸ್ ಕಲಿಯಲು ಬರುತ್ತಿದ್ದಳು. ಆಗ ರಮ್ಯ ಕೃಷ್ಣ ತುಂಬಾ ಸಣಕಲಾಗಿದ್ದಳು. ನಾನು ಅವರಿಗೆಲ್ಲಾ "ಹಲೋ.. ಹಲೋ" ಎಂದು ವಿಶ್ ಮಾಡುತ್ತಿದ್ದೆ.

ರಮ್ಯಕೃಷ್ಣ ಜೊತೆ ಡ್ಯಾನ್ಸ್ ಕಲಿತಾಗ

ಮೊದಲ ವರ್ಷದ ಡಿಗ್ರಿ ಮುಗಿಸಿ ಎರಡನೇ ರ್ಷಕ್ಕೆ ಕಾಲಿಟ್ಟದ್ದೆ. ಈ ವರ್ಷದ ಆರಂಭದಿಂದಲೇ ಲೇಜಿನಲ್ಲಿ ಸ್ಟ್ರೈಕ್ ಮಾಡಿದ್ದರು. ಕಳೆದ ವರ್ಷ ರು ತಿಂಗಳು ಪಾಠ ನಡೆಯದೇ ಇದ್ದ ಕಾರಣ ಈ ರ್ಷ ತುಂಬಾ ಶಿಸ್ತನ್ನು ನಮ್ಮ ಮೇಲೆ ಹೇರಿದ್ದರು. ಗಾಗಿ ಪಾಠಗಳು ಪ್ರತಿ ದಿನ ನಡೆಯುತ್ತಿದ್ದವು.

ಆದರೂ ಗೆಳೆಯರೊಂದಿಗೆ ನಮ್ಮ ನೆಚ್ಚಿನ ಡ್ಡಗಳಲ್ಲಿ ಹರಟುತ್ತಾ ಕಾಲೇಜಿನ ಗೋಲ್ಡನ್ ಲೈಫನ್ನು ನು ಎಂಜಾಯ್ ಮಾಡುತ್ತಿದ್ದ ದಿನಗಳವು. ನಾನು ಲೇಜಿಗೆ ಹೋಗಿದ್ದೇ ಬಹಳ ಅಪರೂಪ. ಒಟ್ಟು ೂರು ವರ್ಷದ ಶೇಕಡಾವಾರು ಹಾಜರಾತಿಯಲ್ಲಿ ನಗಿದ್ದದ್ದು ಐವತ್ತು ಪರ್ಸೆಂಟ್ ಮಾತ್ರ. ಹೀಗೆ ಟೆಂಡೆನ್ಸ್ ಶಾರ್ಟೇಜ್ ಆದಾಗ ಹಣ ಕಟ್ಟಿ ಅದನ್ನೆಲ್ಲ ರಿ ಮಾಡಿಕೊಳ್ಳುತ್ತಿದ್ದೆ.

ಕಾಲೇಜಿಗೆ ಚಕ್ಕರ್ ಹೊಡೆದು ಗೆಳೆಯರೊಂದಿಗೆ ರಟೆ ಹೊಡೆಯುತ್ತಿದ್ದೆ, ಸುತ್ತಾಡುತ್ತಿದ್ದೆ, ಸಿನಿಮಾ ೋಡಲು ಹೋಗುತ್ತಿದ್ದೆ. ಇದು ಬಿಟ್ಟು ಬೇರೆ ಾವುದೇ ಕೆಟ್ಟ ಹವ್ಯಾಸಗಳಿರಲಿಲ್ಲ. ಹೀಗೆ ಮಜಾ ಾಡುತ್ತಿದ್ದ ದಿನಗಳಲ್ಲೇ ನನ್ನ ಜೀವನದಲ್ಲಿ ಒಂದು ನಿರೀಕ್ಷಿತ ತಿರುವು ಎದುರಾಯಿತು.

ಅಪ್ಪಾಜಿಯವರನ್ನು ಭೇಟಿಯಾಗಲು ಲೆಯಾಳಂನ ಒಬ್ಬ ನಿರ್ದೇಶಕರು ನಮ್ಮ ಮನೆಗೆ ದಿದ್ದರು. ಅಪ್ಪಾಜಿಯವರ ಮಗನಾದ ನನ್ನನ್ನು ಕಿಕೊಂಡು ಒಂದು ಸಿನಿಮಾ ಮಾಡುವ ಉದ್ದೇಶ ದರಿಗಿತ್ತು, ಇದನ್ನು ಕೇಳಿ ನನಗೆ ಮಾತ್ರವಲ್ಲ, ಪ್ಪಾಜಿಗೂ ಮತ್ತು ಅಮ್ಮನಿಗೂ ಆಶ್ಚರ್ಯವಾಗಿತ್ತು.

ಆಗ ಅಪ್ಪಾಜಿ "ನೋಡಿ, ನನ್ನ ಮಗನಿಗೆ ಮಾದಲ್ಲಿ ಆಸಕ್ತಿ ಇದೆಯೋ ಇಲ್ಲವೋ ಗೊತ್ತಿಲ್ಲ. ನೇ ಇನ್ನೂ ಈ ಬಗ್ಗೆ ಆತನನ್ನು ಕೇಳಿಲ್ಲ. ನಾವು ನೊಂದಿಗೆ ಈ ಬಗ್ಗೆ ಚರ್ಚಿಸಿ ನಿಮಗೆ ತಿಳಿಸುತ್ತೇವೆ. ದು ವೇಳೆ ಆತನಿಗೆ ಆಸಕ್ತಿ ಇದ್ದಲ್ಲಿ ನಾವೇ ನಮ್ಮ ತ ಸಂಸ್ಥೆಯಿಂದ ಅವನನ್ನು ಚಿತ್ರರಂಗಕ್ಕೆ ಚಯಿಸುತ್ತೇವೆ" ಎಂದು ಹೇಳಿದ್ದರು.

ಆದರೂ ಆ ನಿರ್ದೇಶಕರು ಸುಮ್ಮನಾಗಲಿಲ್ಲ, ನ್ನು ಹೀರೋ ಮಾಡಲೇಬೇಕೆಂದು ಅವರು ನಮ್ಮ ನೆಗೆ ಮೂರು ಬಾರಿ ಬಂದು ನಮ್ಮ ಮನೆಯವರ ಪ್ಪೊಲಿಸಲು ಪ್ರಯತ್ನಿಸಿದರು. ಆ ನಿರ್ದೇಶಕರ ರು ಭರತನ್.

ಹೀಗೆ ಮಲಯಾಳಂ ನಿರ್ದೇಶಕರೊಬ್ಬರು ನನ್ನನ್ನು ರೋ ಮಾಡಲು ಮುಂದೆ ಬಂದ ನಂತರ ನಮ್ಮ ನೆಯವರು ನನ್ನನ್ನು ನೋಡುವ ರೀತಿಯೇ ಲಾಯಿತು. ಅದೇ ಹೊತ್ತಿಗೆ ನನ್ನ ಸ್ನೇಹಿತರು ತ "ನೀನು ಯಾಕೆ ಸಿನಿಮಾದಲ್ಲಿ ನಟಿಸಬಾರದು?" ದು ಕೇಳಲು ಪ್ರಾರಂಭಿಸಿದರು. ಅಷ್ಟೇ ಅಲ್ಲ, ಲ್ಲಿ ಆತ್ಮವಿಶ್ವಾಸವನ್ನು ತುಂಬಲು ನೋಡಿದರು. "ನಾನ್ಯಾಕೆ ಹೀರೋ ಆಗಬಾರದು?" ಎಂದು ನೂ ಅನ್ನಿಸಲು ಶುರುವಾಯಿತು. ಪ್ರಾಯಶಃ ಾಗಲೇ ಆಸೆ ನನ್ನಲ್ಲಿ ಚಿಗುರೊಡೆದದ್ದು ಆಗ. ಆದರೂ "ನಾನು ಹೀರೋ ಮೆಟೀರಿಯಲ್ಲಾ?" ದು ನನ್ನನ್ನು ನಾನೇ ಪ್ರಶ್ನಿಸಿಕೊಳ್ಳಲು ಶುರುಮಾಡಿದೆ. ನಿಯಲ್ಲಿ ಪ್ರತಿ ದಿನ ನನ್ನ ಮುಖ ನೋಡಿದಾಗ ಈ ಪ್ರಶ್ನೆಯನ್ನು ಕೇಳಿಕೊಳ್ಳುತ್ತಿದ್ದೆ. ನಿಲುವುಗನ್ನಡಿಯಲ್ಲಿ ನನ್ನ ಫಿಸಿಕ್ ಅನ್ನು ನೋಡಿ ನಾನು ಹೀರೋ ಆಗಲು ಸಾಧ್ಯವೇ ಎಂದು ಪ್ರಶ್ನಿಸಿಕೊಳ್ಳುತ್ತಿದ್ದೆ. ಹಾಗೆ ಮಾಡಿದಾಗಲೆಲ್ಲ ನನ್ನಲ್ಲಿ ಆತ್ಮವಿಶ್ವಾಸವೇ ಮೂಡುತ್ತಿರಲಿಲ್ಲ.

ಯಾಕೆಂದರೆ ಆಗ ನನ್ನ ಪ್ರಕಾರ ಹೀರೋಗಳೆಂದರೆ ಅಮಿತಾಬ್ ಬಚ್ಚನ್ ಮತ್ತು ಕಮಲ್ ಹಾಸನ್. ಆ ದಿನಗಳಲ್ಲಿ ಕಾಲೇಜಿಗೆ ಚಕ್ಕರ್ ಹೊಡೆದು ಬಚ್ಚನ್ ಮತ್ತು ಕಮಲ್ ಹಾಸನ್ ಸಿನಿಮಾಗಳನ್ನು ಗೆಳೆಯರೊಂದಿಗೆ ತಪ್ಪದೇ ನೋಡುತ್ತಿದ್ದೆ. ಆಫ್‌ಕೋರ್ಸ್ ನಮ್ಮ ಅಪ್ಪಾಜಿಯ ಎಲ್ಲ ಸಿನಿಮಾಗಳನ್ನೂ ನೋಡಿ ಆನಂದಿಸಿದ್ದೆ.

ಅಮಿತಾಬ್ ಬಚ್ಚನ್ ಮತ್ತು ಕಮಲ್ ಹಾಸನ್‌ರವರ ದೊಡ್ಡ ಅಭಿಮಾನಿಯಾಗಿದ್ದ ನನ್ನ ಮೇಲೆ ಅವರ

ನಿರೂಪಣೆ: ಸದಾಶಿವ ಶೆಣೈ 16



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಡೈಲಾಗ್ ಡೆಲಿವರಿಯ ಶೈಲಿ, ಬಾಡಿ ಲಾಂಗ್ವೇಜ್, ನಟನಾ ಸಾಮರ್ಥ್ಯ ಎಲ್ಲವೂ ಸಾಕಷ್ಟು ಪ್ರಭಾವ ಬೀರಿದ್ದವು. ನಾಯಕ ನಟನೆಂದರೆ ಅಪ್ಪಾಜಿ, ಬಚ್ಚನ್ ಮತ್ತು ಕಮಲ್‌ಹಾಸನ್ ಥರ ಪರ್ಸನಾಲಿಟಿ ಹೊಂದಿರಬೇಕು ಎಂದು ನಾನು ಅಂದುಕೊಂಡಿದ್ದೆ. ಹೀಗಾಗಿ ನನ್ನನ್ನು ಕನ್ನಡಿಯಲ್ಲಿ ನಾನೇ ದಿಟ್ಟಿಸಿ ನೋಡಿಕೊಂಡಾಗಲೆಲ್ಲ ನನಗೆ "ಎಲ್ಲಿಯ ಬಚ್ಚನ್? ಎಲ್ಲಿಯ ಈ ಪುಟ್ಟಸ್ವಾಮಿ?" ಅಂತ ಅನ್ನಿಸುತ್ತಿತ್ತು.

ಆಗ ಒಂದು ದಿನ ಅಪ್ಪಾಜಿ ನನ್ನನ್ನು ಕರೆದು "ನೀನು ಸಿನಿಮಾರಂಗಕ್ಕೆ ಇಳಿಯುವುದೇ ಆದರೆ ಮೊದಲಿಗೆ ಡಿಗ್ರಿ ಮುಗಿಸು. ವಿದ್ಯಾಭ್ಯಾಸ ತುಂಬಾ ಮುಖ್ಯ" ಎಂದು ಬುದ್ಧಿವಾದ ಹೇಳಿದರು. ಆದ್ದರಿಂದ ನಾನು ಎರಡನೇ ವರ್ಷದ ಡಿಗ್ರಿಯಲ್ಲಿ ಓದಿನ ಕಡೆಗೆ ಹೆಚ್ಚು ಗಮನ ನೀಡಿದೆ.

ಆದರೆ ಈ ಮಧ್ಯೆ ಬಾಲ್ಯದಿಂದಲೂ ಡ್ಯಾನ್ಸ್ ಮಾಡುವುದೆಂದರೆ ಇಷ್ಟ ಪಡುತ್ತಿದ್ದ ನಾನು ಮದರಾಸಿನಲ್ಲಿ ವೆಂಬೂಟಿ ಶ್ರೀ ಸತ್ಯಂ ಎಂಬ ಡ್ಯಾನ್ಸ್ ಮಾಸ್ಟರ್ ನಡೆಸುತ್ತಿದ್ದ ಕೂಚುಪುಡಿ ನೃತ್ಯ ತರಗತಿಗೆ ಸೇರಿಕೊಂಡೆ. ಆಗಲೇ ತುಂಬಾ ಜೋರಾಗಿ ಡ್ಯಾನ್ಸ್ ಮಾಡುತ್ತಿದ್ದ ನಾನು ಗೆಳೆಯರೊಂದಿಗೆ ಡಿಸ್ಕೋಗಳಲ್ಲಿ ಡ್ಯಾನ್ಸ್ ಮಾಡುತ್ತಾ ಕಳೆದ ರಾತ್ರಿಗಳಿಗೆ ಲೆಕ್ಕವೇ ಇಲ್ಲ. ನಾನು ಡ್ಯಾನ್ಸ್ ಮಾಡುವಾಗ ಎಲ್ಲರೂ ನನ್ನ ನೃತ್ಯವನ್ನೇ ನೋಡುತ್ತಿದ್ದರು.

ವೆಂಬೂಟಿ ಶ್ರೀ ಸತ್ಯಂರವರ ಬಳಿ ಡ್ಯಾನ್ಸ್ ಕಲಿಯಲು ಸೇರಿಕೊಂಡಾಗ ಅಲ್ಲಿ ಮಂಜು ಭಾರ್ಗವಿ ಮೇಡಂ ಸೀನಿಯರ್ ವಿದ್ಯಾರ್ಥಿನಿಯಾಗಿ ಪಾಠ ಕಲಿಯುತ್ತಿದ್ದರು. ಅದೇ ಮೇಷ್ಟ್ರ ಬಳಿ ರಮ್ಯಕೃಷ್ಣ ಸಹ ಡ್ಯಾನ್ಸ್ ಕಲಿಯಲು ಬರುತ್ತಿದ್ದಳು. ಆಗ ರಮ್ಯ ಕೃಷ್ಣ ತುಂಬಾ ಸಣಕಲಾಗಿದ್ದಳು. ನಾನು ಅವರಿಗೆಲ್ಲಾ "ಹಲೋ.. ಹಲೋ" ಎಂದು ವಿಶ್ ಮಾಡುತ್ತಿದ್ದೆ.

ದೇವರ ದಯೆಯೋ, ನನ್ನಲ್ಲಿ ಅದೇನು ಪವರ್ ಇತ್ತೋ ಗೊತ್ತಿಲ್ಲ; ಎಂಟೇ ತಿಂಗಳಿಗೆ ನಾನು ಸಖತ್ ಆಗಿ ಡ್ಯಾನ್ಸನ್ನು ಪಿಕ್‌ಅಪ್ ಮಾಡಿಕೊಂಡೆ. ನನ್ನಷ್ಟು ಫಾಸ್ಟಾಗಿ ಅಲ್ಲಿ ಬೇರೆ ಯಾರೂ ಡ್ಯಾನ್ಸ್ ಕಲಿತದ್ದೇ ಇಲ್ಲವಂತೆ. ಆ ಹಂತದಲ್ಲೂ ಅಷ್ಟೇ, ಮುಂದೊಂದು ದಿನ ನಾಯಕನಟನಾಗುತ್ತೇನೆ ಎಂಬ ಭ್ರಮೆ ನನಗಿರಲಿಲ್ಲ.

ಆದರೆ ನಾಯಕನಟನಾದ ಮೇಲೆ ಒಮ್ಮೆ ರಮ್ಯಕೃಷ್ಣ ನನ್ನ ಜೊತೆ ನಟಿಸುತ್ತಿದ್ದಾಗ ನಾವಿಬ್ಬರೂ ವೆಂಬೂಟಿ ಶ್ರೀಸತ್ಯಂರ ಬಳಿಯಲ್ಲಿ ನೃತ್ಯ ಕಲಿತದ್ದು, ಅವರನ್ನು ನಾನಲ್ಲಿ ಮಾತನಾಡಿಸಿದ್ದರ ಬಗ್ಗೆ ಹೇಳಿದೆ. ಆಕೆಗೆ ಆ ದಿನಗಳ ಬಗ್ಗೆ ಸ್ಪಷ್ಟವಾದ ನೆನಪಿಲ್ಲದಿದ್ದರೂ ನಾವಿಬ್ಬರು ಕೆಲವು ನೆನಪುಗಳನ್ನು ಮೆಲುಕು ಹಾಕಿದ್ದೆವು.

ಏನಿವೇ, ಎರಡನೇ ವರ್ಷದ ಡಿಗ್ರಿ ಮುಗಿಯುತ್ತಾ ಬಂದಿತ್ತು. ಒಂದೆಡೆ ಸಿನಿಮಾ ನಟನಾಗುವ ಆಹ್ವಾನ ಬಂದಿತ್ತು ಇನ್ನೊಂದೆಡೆ ಮೊದಲ ವರ್ಷಕ್ಕೆ ಹೋಲಿಸಿದರೆ ಕಾಲೇಜಿನಲ್ಲಿ ತುಂಬಾ ಶಿಸ್ತಿನ ವಾತಾವರಣ ಇದ್ದುದರಿಂದ ಹೆಚ್ಚು ಎಂಜಾಯ್ ಮಾಡಲು ಆಗರಲಿಲ್ಲ.

ಇಂತಹ ಸಂದರ್ಭದಲ್ಲಿ ನನ್ನ ಜೀವನದಲ್ಲಿ ಒಂದು ದುರ್ಘಟನೆ ನಡೆಯಿತು....!

ಅದು ನಡೆದದ್ದು ಡಿಸೆಂಬರ್ 31ರ ರಾತ್ರಿ. ನ್ಯೂ ಇಯರ್ ಪಾರ್ಟಿ ಮುಗಿಸಿಕೊಂಡು ಮಧ್ಯರಾತ್ರಿ ಮನೆಗೆ ಬೈಕ್‌ನಲ್ಲಿ ವೇಗವಾಗಿ ಹೋಗುತ್ತಿದ್ದಾಗ ಅಪಘಾತವಾಯಿತು. ಈ ಅಪಘಾತದಲ್ಲಿ ನನ್ನ ಕಾಲಿನ ಮಂಡಿ ಚಿಪ್ಪು ಚೂರು ಚೂರಾಯಿತು. ನಾನು ನೋವಿನಲ್ಲಿ ಮುಳುಗಿ ಹೋದೆ.

ಹೊಸ ವರ್ಷದ ಮೊದಲ ದಿನದಂದು ನಾನು ಆಸ್ಪತ್ರೆಯ ಬೆಡ್ಡಿನಲ್ಲಿ ಮಲಗಿದ್ದೆ. ನನ್ನನ್ನು ನೋಡಲು ಬಂದ ಎಲ್ಲರೂ ನನಗೆ ಹೊಸ ವರ್ಷದ ಶುಭಾಶಯ ಹೇಳುವ ಬದಲಾಗಿ "ವಿಶ್ ಯು ಸ್ಪೀಡೀ ರಿಕವರಿ" ಎಂದು ಹೇಳಿದ್ದು ಇನ್ನೂ ನೆನಪಿದೆ...

ಆಸ್ಪತ್ರೆಯಲ್ಲಿದ್ದ ನನ್ನನ್ನು ನೋಡಲು ಅಪ್ಪಾಜಿ ಬಂದರು. ಆ ಪರಿಸ್ಥಿತಿಯಲ್ಲಿ ನಾನಿರುವುದನ್ನು ನೋಡಿ ಅವರು ಸರಿಯಾಗಿ ಬೈಯುತ್ತಾರೆ ಎಂದು ಭಾವಿಸಿದ್ದೆ. ಆದರೆ ನನ್ನ ಭಯ ಸುಳ್ಳಾಯಿತು... ಅಪ್ಪಾಜಿ ಬಂದವರೇ ನನ್ನ ಪಕ್ಕ ಕುಳಿತುಕೊಂಡು ನನ್ನ ತಲೆಯ ಮೇಲೆ ಕೈ ನೇವರಿಸುತ್ತಾ ನಡೆದ ಘಟನೆಯ ಬಗ್ಗೆ ತಿಳಿದುಕೊಂಡರು. ಅಷ್ಟೇ ವಿನಃ, ಅವರು ನನ್ನನ್ನು ಮರು ಪ್ರಶ್ನಿಸಲೂ ಇಲ್ಲ, ದೂಷಿಸಲೂ ಇಲ್ಲ.

ಹೀಗೆ ನಾನು ಮಂಡಿ ಮುರಿದುಕೊಂಡು ಆಸ್ಪತ್ರೆಗೆ ಸೇರಿಕೊಂಡಿದ್ದರಿಂದ ನನ್ನ ಕೂಚುಪುಡಿ ನೃತ್ಯ, ಕಾಲೇಜು, ಎಲ್ಲದಕ್ಕೂ ಬ್ರೇಕ್ ಬಿತ್ತು. ಆಗ ನನ್ನ ಗೆಳೆಯರೆಲ್ಲಾ ತಮ್ಮ ಮಾಮೂಲಿ ಅಡ್ಡಗಳಲ್ಲಿ ಹರಟೆ ಹೊಡೆಯುವ ಬದಲು ಆಸ್ಪತ್ರೆಗೆ ಬಂದು ನನ್ನೊಂದಿಗೆ ಕಾಲ ಕಳೆಯಲು ಶುರು ಮಾಡಿದರು. ಆಸ್ಪತ್ರೆಯ ನನ್ನ ಕೊಠಡಿ ತಾತ್ಕಾಲಿಕವಾಗಿ ನಮ್ಮ ಅಡ್ಡವಾಗಿ ರೂಪಾಂತರಗೊಂಡಿತ್ತು....

(ಮುಂದುವರೆಯುವುದು)

ಕಿಸ್ ವಿತ್ ಎ ಮಿಸ್!

ಶಾಟ್ ಕಟ್

ಎವಾ ಲೊಂಗೊರಿಯಾ ಎಂಬ ಸುಂದರ ನಟಿ ತನ್ನ ಬಾಯ್‌ಫ್ರೆಂಡ್ ಟೋನಿ ಪಾರ್ಕರ್‌ನನ್ನು ಎಚ್ಚರಿಸಿದ್ದಾಳೆ: "ನನಗೆ ಸಂಪೂರ್ಣ ಸಲಿಂಗ ಸಂಬಂಧದ ಅನುಭವ ಪಡೆವ ಆಸೆ...." ಇತ್ತೀಚೆಗೆ ಗೆಳತಿಯೊಬ್ಬಳೊಂದಿಗೆ ಮೋಹಕ ಚುಂಬನದ ಮಜಾ 'ಉಂಡ' ಎವಾಗೆ ಈಗದೇ ಟೇಸ್ಟು ಎನಿಸಿದೆಯಂತೆ!

'Desperate Housewives' ಧಾರಾವಾಹಿಯ ಈ 31 ವರ್ಷದ ಹೀರೋಯಿನ್ ಹೇಳ್ತಾಳೆ: 'ನನಗೀಗ ಮಹಿಳೆಯರೇ ಹೆಚ್ಚು ಆಕರ್ಷಕವಾಗಿ ಕಾಣ್ತಾರೆ. ನನಗೀಗ ಒಂದು ಪರಿಪೂರ್ಣ ಸಲಿಂಗ ಸಂಬಂಧದ ಅನುಭವ ಬೇಕೆನಿಸಿಬಿಟ್ಟಿದೆ. ಏಕೆಂದರೆ ಹೆಣ್ಣು ಸುಂದರ ಸೃಷ್ಟಿ.... ನಗ್ನಳಾಗಿದ್ದಾಗ ಹೆಣ್ಣು ಪುರುಷನಿಗಿಂತ ತುಂಬಾ ತುಂಬಾ ಆಕರ್ಷಕ....



ಎವಾಳ ಬಾಯ್‌ಫ್ರೆಂಡ್ ಪಾರ್ಕರ್‌ಗೀಗ ಚಿಂತೆ! ಹಲೋ, 'ನಾವೇ ಎಲ್ಲ' ಎಂದು ಒಣಸೊಕ್ಕು ತೋರುವ ಹುಡುಗರೇ ಎಚ್ಚರವಿರಲಿ! ಎವಾಗಳು ಬಂಡಾಯವೆದ್ದರೆ ನಿಮ್ಮ ಆಟ ನಡೆಯಲ್ಲ!

ಉಮಾಶ್ರೀಯ ಕಿಚ್ಚು




ನಾಟಕ ರಂಗದಲ್ಲಿ ಸಾಕವ್ವಳಾಗಿ ಸೈ ಎನಿಸಿಕೊಂಡಿದ್ದ, ಸಿನಿಮಾಗಳಲ್ಲಿ ಪೋಲಿ ಆಂಟಿಯಾಗಿ ನಗಿಸಿದ್ದ, ವಿಧಾನ ಪರಿಷತ್ತಿನಲ್ಲಿ ಸೈಲೆಂಟ್ ಶಾಸಕಿಯಾಗಿ ಕೂತಿದ್ದ ಉಮಾಶ್ರೀ ಎಂಬ ಸಕಲಕಲಾ ವಲ್ಲಭೆ ಈಗ ಟಿವಿ ಮಾಧ್ಯಮಕ್ಕೂ ಲಗ್ಗೆ ಹಾಕಿದ್ದಾರೆ.


ಮೊದಲ ಬಾರಿಗೆ ಉಮಾಶ್ರೀ 'ಕಿಚ್ಚು' ಎಂಬ ಮೆಗಾ ಧಾರಾವಾಹಿಯಲ್ಲಿ ನಟಿಸುತ್ತಿದ್ದಾರೆ. ಅಂದಹಾಗೆ ಇದನ್ನು ನಿರ್ದೇಶಿಸುತ್ತಿರುವವರು ಗಿರೀಶ್ ಕಾರ್ನಾಡರ ಪಟ್ಟದ ಶಿಷ್ಯ ಮತ್ತು ಕೆ. ಮರುಳಸಿದ್ದಪ್ಪನವರ ಪುತ್ರನಾದ ಚೈತನ್ಯ.

ಸೀತಾರಾಮ್ ಪ್ರಶಸ್ತಿ

ಈಗಿರುವ ಸರಕಾರ ಅದೆಷ್ಟು ದಿನ ಇರುತ್ತದೋ ಏನೋ, ಆದರೆ ಅದು ಇತಿಹಾಸವಾಗುವ ಮುನ್ನ ಈ ವರ್ಷದ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿ ಮತ್ತು ಸಹಾಯಧನ ಸಲಹಾ ಸಮಿತಿಗಳನ್ನು ಘೋಷಿಸಿದೆ. ಯಥಾಪ್ರಕಾರ ಇವೂ ಕೂಡ ವಿವಾದಗಳ ಸಮಿತಿಗಳಾಗಿರುತ್ತವೆಯೇ ಎಂದು ನೋಡಿದರೆ ಸ್ವಲ್ಪ ಸಮಾಧಾನವಾಗುತ್ತದೆ.



ಏಕೆಂದರೆ, ಈ ಬಾರಿಯ ಪ್ರಶಸ್ತಿ ಆಯ್ಕೆ ಸಮಿತಿಗೆ ಟಿ.ಎನ್. ಸೀತಾರಾಂರವರನ್ನೂ, ಸಹಾಯಧನ ಸಲಹಾ ಸಮಿತಿಗೆ ಪ್ರೊ. ದೊಡ್ಡರಂಗೇಗೌಡರನ್ನೂ ನೇಮಿಸಲಾಗಿದೆ. ಇವರಿಬ್ಬರೂ ಯೋಗ್ಯರು ಮತ್ತು ಸಜ್ಜನರು. ಹಾಗೆಯೇ ಈ ಎರಡು ಸಮಿತಿಗಳಲ್ಲಿ ಸದಸ್ಯರಾಗಿರುವ ಹೆಚ್ಚಿನವರು ಕೂಡಾ ಸಿನಿಮಾ ಬಗ್ಗೆ ಅಭಿರುಚಿ ಉಳ್ಳವರೇ ಆಗಿದ್ದಾರೆ.



ಆದ್ದರಿಂದ ಈ ವರ್ಷವಾದರೂ ಪ್ರಶಸ್ತಿಗೆ ನಿಜವಾಗಲೂ ಯೋಗ್ಯವಾದ, ಸಹಾಯ ಧನಕ್ಕೆ ಅರ್ಹವಾದ ಸಿನಿಮಾಗಳನ್ನು ಈ ಸಜ್ಜನ ಸಮಿತಿಗಳು ಆಯ್ಕೆ ಮಾಡುತ್ತವೆಂದು ಆಶಿಸಬಹುದೇ?

ಅದೇ ಕೈಮಾರ್ಕ್ಸ್ ಸಸ್ಪೆನ್ಸ್!



ಬಿಸ್ಮಿಲ್ಲಾ, ಕರೀಂಖಾನ್ ಮರೆತವರು

'ಸನಾದಿ ಅಪ್ಪಣ್ಣ' ಚಿತ್ರದ "ಕರೆದರೂ ಕೇಳದೆ..." ಎಂಬ ಹಾಡು ಸಾಮಾನ್ಯರಿಗೂ ನೆನಪಾಗುತ್ತದೆ. ಖ್ಯಾತ ಶಹನಾಯಿ ಸಂಗೀತಗಾರ ಬಿಸ್ಮಿಲ್ಲಾ ಖಾನ್‌ರವರು ಅನಾರೋಗ್ಯದಿಂದ ವಾರಣಾಸಿಯ ಆಸ್ಪತ್ರೆಯಲ್ಲಿ ಮಲಗಿರುವ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದಾಗ ಮತ್ತೆ ಮತ್ತೆ ಆ ಹಾಡು ಕಾಡುತ್ತಿದೆ.

ಆದರೆ ನಮ್ಮ ಗಾಂಧಿನಗರದವರು ಸಾಮಾನ್ಯರಲ್ಲವಲ್ಲ. ಆದ್ದರಿಂದ ಅವರ್‍ಯಾರಿಗೂ ಅದೊಂದು ಸುದ್ದಿ ಅಲ್ಲವೇ ಅಲ್ಲ. ಎಂದೂ ಸಿನಿಮಾಗಳಿಗೆ ಸಂಗೀತ ನೀಡದಿದ್ದ ಬಿಸ್ಮಿಲ್ಲಾ ಖಾನ್‌ರವರು 'ಸನಾದಿ ಅಪ್ಪಣ್ಣ' ಚಿತ್ರದ ಕತೆಯನ್ನು ಮೆಚ್ಚಿ, ರಾಜ್‌ಕುಮಾರ್ ರವರ ಆಹ್ವಾನವನ್ನು ಸ್ವೀಕರಿಸಿ ಅದಕ್ಕೆ ಸಂಗೀತ ನೀಡಿದ್ದರು. ಆ ಚಿತ್ರ ರಾಜ್‌ಕುಮಾರ್ ರವರಿಗೆ ಹೊಸ ಇಮೇಜನ್ನು ನೀಡಿತ್ತಲ್ಲದೆ, ಬಿಸ್ಮಿಲ್ಲಾ ಖಾನ್‌ರವರ ಶಹನಾಯಿ ಸಂಗೀತ ಇಂದಿಗೂ ಜನಪ್ರಿಯವಾಗಿದೆ. ಆದರೆ ಇಂದಿನ ಗಾಂಧಿನಗರದವರಿಗೆ ಹಳೆಯದ್ದನ್ನು ಕಟ್ಟಿಕೊಂಡು ಏನೂ ಆಗಬೇಕಿಲ್ಲ.

ದೂರದ ಬಿಸ್ಮಿಲ್ಲಾ ಖಾನ್‌ರವರ ಮಾತು ಬಿಡಿ. ನಮ್ಮವರೇ ಆಗಿದ್ದ, ನಮ್ಮ ಕನ್ನಡ ಸಿನಿಮಾಗಳಿಗೆ ಇನ್ನೂರಕ್ಕೂ ಹೆಚ್ಚು ಹಾಡುಗಳನ್ನು ಬರೆದಿದ್ದ ಖರೀಂ ಖಾನ್‌ರವರು ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಮಲಗಿದ್ದಾಗ ಕನ್ನಡ ಚಿತ್ರರಂಗದ ಘಟಾನುಘಟಿಗಳ್ಯಾರೂ ಅವರತ್ತ ತಿರುಗಿಯೂ ನೋಡಲಿಲ್ಲ, ಅವರಿಗೆ ನಯಾಪೈಸೆ ಸಹಾಯ ಮಾಡಲಿಲ್ಲ.

ನಮ್ಮ ಬಣ್ಣದ ಲೋಕದ ಜನರ ನಿಜವಾದ ಬಣ್ಣವನ್ನು ತೆರೆದಿಡುವುದು ಇಂತಹ ಘಟನೆಗಳೆ ಅಲ್ಲವೇ....

ಮಲ್ಟಿಸ್ಟಾರ್ : ಆದಿತ್ಯದರ್ಶನ




ಕನ್ನಡ ಚಿತ್ರರಂಗದಲ್ಲೂ ಮಲ್ಟಿಸ್ಟಾರ್‌ಗಳಿರುವ ಸಿನಿಮಾಗಳ ಯುಗ ಪ್ರಾರಂಭವಾಯಿತೇ? ಈ ಪ್ರಶ್ನೆ ಯಾಕೆಂದರೆ ದರ್ಶನ್ ಮತ್ತು ಆದಿತ್ಯ ಒಂದೇ ಚಿತ್ರದಲ್ಲಿ ನಟಿಸುವುದು ಬಹುತೇಕ ಖಾತ್ರಿಯಾಗಿದೆ. ಆರಡಿ ಎತ್ತರದ ಇವರಿಬ್ಬರೂ ಅಣಜಿ ನಾಗರಾಜ್ ನಿರ್ಮಿಸಲಿರುವ ಚಿತ್ರದಲ್ಲಿ ನಟಿಸಲಿದ್ದಾರೆ.

ಇದು ಕನ್ನಡದ ಮಟ್ಟಿಗೆ ಒಂದು ಒಳ್ಳೆಯ ಬೆಳವಣಿಗೆ. ಯಾಕೆಂದರೆ ಹಿಂದಿ ಸಿನಿಮಾಗಳಲ್ಲಿ ಶಾರುಖ್‌ಖಾನ್-ಅಮಿತಾಭ್ ಬಚ್ಚನ್, ಅಭಿಷೇಕ್ ಬಚ್ಚನ್ ಮಾತ್ರವಲ್ಲದೆ, ಅಜಯ್ ದೇವ್ ಗನ್- ಸೈಫ್ ಆಲಿ ಖಾನ್- ವಿವೇಕ್ ಒಬೇರಾಯ್ ಕೂಡ ಇತ್ತೀಚೆಗೆ ಜೊತೆ ಜೊತೆಯಾಗಿ ನಟಿಸುತ್ತಿದ್ದರೂ ಕನ್ನಡ ಸಿನಿಮಾಗಳಲ್ಲಿ ಮಾತ್ರ ಏಕೈಕ ಹೀರೋಗಳೇ ಮೆರೆಯುತ್ತಿದ್ದರು.



ಈಗ ದರ್ಶನ್ ಮತ್ತು ಆದಿತ್ಯ ಒಂದಾಗಿರುವುದನ್ನು ನೋಡಿ ಮುಂದೆ ದರ್ಶನ್-ಸುದೀಪ್, ಸುದೀಪ್-ಆದಿತ್ಯ, ಪುನೀತ್-ದರ್ಶನ್... ಇಂತಹ ಕಾಂಬಿನೇಷನ್‌ನ ಚಿತ್ರಗಳು ಬಂದರೆ ಎಷ್ಟು ಮಜಾ ಇರುತ್ತಲ್ಲ!

ಓಲ್ಡ್ ಗೋಲ್ಡ್- ರೋಲ್ ಗೋಲ್ಡ್



"ಓಲ್ಡ್ ಈಸ್ ನೋ ಲಾಂಗರ್ ಗೋಲ್ಡ್" ಎಂಬ ಮಾತು ಗಾಂಧಿನಗರದಲ್ಲಿ ಕೇಳಿಬರುತ್ತಿದೆ. ಹಳೆಯ ತಲೆಮಾರಿನ ಭಾರ್ಗವರವರು ನಿರ್ದೇಶಿಸಿದ 'ಕುಮಾರರಾಮ' ಬಾಕ್ಸ್ ಆಫೀಸಿನಲ್ಲಿ ಸೋತಿರುವುದೇ ಈ ಮಾತು ಹುಟ್ಟಿಕೊಳ್ಳುವುದಕ್ಕೆ ಕಾರಣವಾಗಿದೆ. ಈ ಮಧ್ಯೆ ಭಾರ್ಗವರವರಿಗಿಂತ ಸ್ವಲ್ಪ ಜೂನಿಯರ್ ಆದ ರಾಜೇಂದ್ರ ಸಿಂಗ್ ಬಾಬು "ಓಲ್ಡ್ ಈಸ್ ನಾಟ್ ಗೋಲ್ಡ್" ಮಾತಿಗೆ ಸೇರುವುದನ್ನು ಸ್ವಲ್ಪದರಲ್ಲೇ ಮಿಸ್ ಮಾಡಿಕೊಂಡಿದ್ದಾರೆ. ಅವರ ನಿರ್ದೇಶನದ 'ಮೋಹಿನಿ' ಚಿತ್ರದ ಬಗ್ಗೆ ಅಂತಹ ಒಳ್ಳೆಯ ಅಭಿಪ್ರಾಯವಿಲ್ಲದಿದ್ದರೂ ಬಾಕ್ಸ್ ಆಫೀಸ್ ಕಲೆಕ್ಷನ್ ಪರವಾಗಿಲ್ಲ.

ಈಗ ಬಾಬುರವರಿಗಿಂತ ಸ್ವಲ್ಪ ಜೂನಿಯರ್ ಆದ, ಒಟ್ಟೊಟ್ಟಿಗೆ ನಾಲ್ಕೈದು ಚಿತ್ರಗಳನ್ನು ನಿರ್ದೇಶಿಸುತ್ತಿರುವ ಓಂಸಾಯಿ ಪ್ರಕಾಶ್ ಕೂಡ ಈ "ಓಲ್ಡ್" ಪಟ್ಟಿಗೆ ಸೇರುತ್ತಾರೆಯೇ ಎಂದು ನೋಡಬೇಕಿದೆ...

ಸಿನಿಪಾಠ- ಗಿಣಿಪಾಠ



ಚಿತ್ರರಂಗದ ಬಗ್ಗೆ ನಮ್ಮ ಶಾಲಾ-ಕಾಲೇಜುಗಳಲ್ಲಿ ಪಾಠ ಮಾಡಬೇಕೆ? ಹೌದೆನ್ನುತ್ತಾರೆ ಖ್ಯಾತ ಲೇಖಕ ಯು.ಆರ್. ಅನಂತಮೂರ್ತಿ, ಕಲಾತ್ಮಕ ಚಿತ್ರಗಳ ನಿರ್ದೇಶಕ ಗಿರೀಶ್ ಕಾಸರವಳ್ಳಿ ಮತ್ತು ಕಮರ್ಷಿಯಲ್ ಸಿನಿಮಾಗಳ ಡೈರೆಕ್ಟರ್ ರಾಜೇಂದ್ರ ಸಿಂಗ್ ಬಾಬು.

ಸಾಹಿತ್ಯ ಕಲಾತ್ಮಕ ಮತ್ತು ಕಮರ್ಷಿಯಲ್ ವಲಯಗಳ ಜನ ಈ ವಿಷಯದಲ್ಲಿ ಒಂದೇ ಅಭಿಪ್ರಾಯವನ್ನು ಹೊಂದಿದ್ದಾರೆ ನಿಜ. ಆದರೆ ಯಾವ ಸಿನಿಮಾಗಳ ಬಗ್ಗೆ ಪಾಠ ಮಾಡಬೇಕು? ಅನಂತಮೂರ್ತಿಯವರಿಗೆ ಪ್ರಿಯವಾದ 'ಥ್ರೀ ಸೀಲ್ಸ್' ಎಂಬ ವಿದೇಶಿ ಸಿನಿಮಾ ಬಗ್ಗೆಯೋ, ಕಾಸರವಳ್ಳಿಯವರ ಬೋರ್ ಹಡೆಸುವ 'ದ್ವೀಪ' ಚಿತ್ರದ ಬಗ್ಗೆಯೋ ಅಥವಾ ಬಾಬು ಡಬ್ ಮಾಡಿದ್ದ 'ಭಾರತ್ 2000' ಎಂಬ ಸಿನಿಮಾ ಬಗ್ಗೆಯೋ ಎಂಬ ಜಿಜ್ಞಾಸೆ ಗಾಂಧಿನಗರದವರನ್ನು ಕಾಡುತ್ತಿಲ್ಲ ಎಂಬುದು ಮಾತ್ರ ಸತ್ಯ!


ಕುಸಿದ ದೇಸಾಯಿ



"ಕಳೆದ ಬಾರಿ ಮಾಡಿದ ತಪ್ಪನ್ನು ನಾನು ಈ ಬಾರಿ ಮಾಡಲ್ಲ, ಆದರೆ ಕಳೆದ ಬಾರಿಯ ನನ್ನ ಚಿತ್ರ ಸೋತಿದೆ ಎಂಬುದನ್ನೂ ನಾನು ಒಪ್ಪುವುದಿಲ್ಲ. ಈ ಬಾರಿ ಜನರಿಗೆ ಬೇಕಾಗುವ ಚಿತ್ರವನ್ನು ನೀಡುತ್ತೇನೆ. ಆದರೂ ನಾನು ನನ್ನತನವನ್ನು ಕಳೆದುಕೊಳ್ಳುವುದಿಲ್ಲ..." ಹೀಗೆ ಅರ್ಥ-ತರ್ಕಗಳಿಲ್ಲದೆ ಅಸಂಬದ್ಧವಾಗಿ ಮೊನ್ನೆ ಮಾತನಾಡಿದವರು ಹಿಂದೊಮ್ಮೆ ಯಶಸ್ವಿ ನಿರ್ದೇಶಕರೆನಿಸಿಕೊಂಡಿದ್ದ ಸುನೀಲ್ ಕುಮಾರ್ ದೇಸಾಯಿ. ಅವರ ನಿರ್ದೇಶನದ ಮೂರ್‍ನಾಲ್ಕು ಸಿನಿಮಾಗಳು ಬಾಕ್ಸ್ ಆಫೀಸಿನಲ್ಲಿ ಮುಗ್ಗರಿಸಿದ ನಂತರ ದೇಸಾಯಿಯವರ ಸ್ಟಾರ್ ವ್ಯಾಲ್ಯೂ ನೆಲಕಚ್ಚಿದೆ ಮಾತ್ರವಲ್ಲ, ಅವರು ಆತ್ಮವಿಶ್ವಾಸವನ್ನೇ ಕಳೆದುಕೊಂಡಂತೆ ಕಾಣಿಸುತ್ತಿದೆ.

ಸಿನಿಮಾ ಲೋಕದಲ್ಲಿನ ಯಶಸ್ಸು ಮತ್ತು ಸೋಲು ಒಬ್ಬ ಮನುಷ್ಯನಿಗೆ ಏನು ಮಾಡಬಲ್ಲದು ಎಂಬುದಕ್ಕೆ ದೇಸಾಯಿ ಒಂದು ನಿದರ್ಶನ ಮಾತ್ರ.....

ವೀರೇಶರ ಚಿತ್ರಲೋಕ



'ಚಿತ್ರಲೋಕ ಡಾಟ್ ಕಾಂ'ನ ವೀರೇಶ್ ಮೊನ್ನೆ ಏರ್ಪಡಿಸಿದ್ದ ಸ್ಟಿಲ್ ಪ್ರದರ್ಶನ ಅರ್ಥಪೂರ್ಣವಾಗಿತ್ತು, ಯಾಕೆಂದರೆ ಇಲ್ಲಿಯವರೆಗೆ ಬಂದಿರುವ ಎಲ್ಲಾ ಕನ್ನಡ ಸಿನಿಮಾಗಳ ಸ್ಟಿಲ್‌ಗಳನ್ನು ಸಂಗ್ರಹಿಸಿ ಪ್ರದರ್ಶಿಸುವುದು ಸಾಮಾನ್ಯ ಕೆಲಸವಲ್ಲ, ಆದರೆ ವೀರೇಶ್‌ರವರ ಈ ಪ್ರಯತ್ನವನ್ನು ಜನ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರೂ, ನಮ್ಮ ಸಿನಿಮಾ ರಂಗದ ನಟ-ನಟಿಯರ್‍ಯಾರೂ ಅತ್ತ ತಲೆ ಕೂಡ ಹಾಕಲಿಲ್ಲ, ಕನ್ನಡ ಚಿತ್ರರಂಗದ ಜನರು ಒಳ್ಳೆಯ ಕೆಲಸಕ್ಕೆ ಹೇಗೆ ಸ್ಪಂದಿಸುತ್ತಾರೆ ಎಂಬುದಕ್ಕೆ ಇದು ಒಂದು ಪುಟ್ಟ ಉದಾಹರಣೆ.

ಅದೇನೇ ಇರಲಿ, ಈ ಪ್ರದರ್ಶನದ ಜೊತೆಗೆ ಒಂದು ವಿಚಾರ ಸಂಕಿರಣವನ್ನೂ ಏರ್ಪಡಿಸಿದ್ದ ಚಿತ್ರಲೋಕ ಡಾಟ್ ಕಾಂ ಚಿತ್ರರಂಗದ ಇತಿಹಾಸವನ್ನು ಜನರ ಮುಂದೆ ತೆರೆದಿಟ್ಟು, ಒಂದು ಒಳ್ಳೆಯ ಕೆಲಸ ಮಾಡಿದೆ. ಕೀಪ್ ಇಟ್ ಅಪ್ ವೀರೇಶ್.....



ರಮ್ಯಾ.....
'ತನನಂ ತನನಂ'

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427
Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44